ಗುರುವಾರ, ಮಾರ್ಚ್ 5, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಇರಾನ್‌ನಲ್ಲಿರುವ ಸಂಬಂಧಿಕರ ಬಗ್ಗೆ ಆತಂಕ

ಲಾಸ್ ಏಂಜಲೀಸ್ (ಎಪಿ): ಅಮೆರಿಕದಲ್ಲಿ ನೆಲಸಿರುವ ಇರಾನ್ ಪ್ರಜೆಗಳು ಹಲವು ದಿನಗಳಿಂದ ಟಿ.ವಿ ಮುಂದೆ ಕುಳಿತು ಇರಾನ್‌ನಲ್ಲಿನ ವಿದ್ಯಮಾನಗಳನ್ನು ಎವೆಯಿಕ್ಕದೆ ಗಮನಿಸುತ್ತಿದ್ದಾರೆ. ಕೆಲವರು ಇರಾನ್‌ನಲ್ಲಿ ಹೊಸ ಶಕೆ ಆರಂಭವಾಗುವ ವಿಶ್ವಾಸದಲ್ಲಿದ್ದರೆ, ಇನ್ನೂ ಕೆಲವರು ಪಶ್ಚಿಮ ಏಷ್ಯಾದಲ್ಲಿ ಆರಂಭವಾಗಿರುವ ಯುದ್ಧದಿಂದ ಸಂಬಂಧಿಕರು ತೊಂದರೆಗೆ ಒಳಗಾಗಿರಬಹುದು ಎಂಬ ಆತಂಕದಲ್ಲಿದ್ದಾರೆ.


ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಹತ್ಯೆ ಬಳಿಕ ಅಮೆರಿಕದಲ್ಲಿ ಹಲವರು ಸಂಭ್ರಮಾಚರಿಸುತ್ತಿದ್ದಾರೆ. ಯುದ್ಧದಿಂದಾಗಿ ಇರಾನ್‌ನಲ್ಲಿರುವ ಸಂಬಂಧಿಕರು ತೊಂದರೆಗೆ ಸಿಲುಕಿರಬಹುದು ಎಂದು ಆತಂಕವನ್ನೂ ವ್ಯಕ್ತಪಡಿಸುತ್ತಿದ್ದಾರೆ. 'ಖಮೇನಿ ಮೃತಪಟ್ಟಿರುವುದು ಸಂತಸ ತಂದಿದೆ. ನಮ್ಮ ಮುಗ್ಧ ಜನರನ್ನು ಇನ್ಮುಂದೆ ಕೊಲ್ಲಲು ಸಾಧ್ಯವಿಲ್ಲ. ಈ ಹಿಂದೆ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಸ್ನೇಹಿತರು ಮತ್ತು ಪ್ರೀತಿಪಾತ್ರರನ್ನು ಸರ್ಕಾರ ನಿರ್ದಾಕ್ಷಿಣ್ಯವಾಗಿ ಗುಂಡಿಕ್ಕಿ ಕೊಂದಿತ್ತು' ಎಂದು ಇಂಡಿಯಾನದ ಎಂಜಿನಿಯರ್ ಫರ್ಹಾದಿ ಎಂಬವರು ತಿಳಿಸಿದ್ದಾರೆ.

'ಇರಾನ್‌ನ ಜನರು ನರಕದಲ್ಲಿ ವಾಸಿಸುತ್ತಿದ್ದಾರೆ. ನಮಗೆ ಪ್ರಜಾಪ್ರಭುತ್ವ ಬೇಕು. ಒಬ್ಬ ವ್ಯಕ್ತಿ ದಶಕಗಳ ಕಾಲ ಅಧಿಕಾರದಲ್ಲಿದ್ದು, ಎಲ್ಲವನ್ನೂ ಹಿಡಿತಕ್ಕೆ ತೆಗೆದುಕೊಳ್ಳುವುದು ಬೇಡ' ಎಂದು ಟಾಡ್ ಖೊದಾಡಾಡಿ ಹೇಳಿದರು. ಟಾಡ್ ಅವರು ಎರಡು ದಶಕಗಳ ಹಿಂದೆ ಇರಾನ್‌ನಿಂದ ಪಲಾಯನ ಮಾಡಿ ಅಮೆರಿಕದಲ್ಲಿ ನೆಲಸಿದ್ದಾರೆ.

ಪಶ್ಚಿಮ ಏಷ್ಯಾ ಬಿಕ್ಕಟ್ಟು: ಇರಾನ್ ಪರ ಧ್ವನಿ ಎತ್ತಿದ ಪ್ರಧಾನಿ ಪೆದ್ರೊ ಸ್ಯಾಂಚೆಸ್

ಅಮೆರಿಕ ನಡೆ ಖಂಡಿಸಿದ ಸ್ಪೇನ್

ಮ್ಯಾಡ್ರಿಡ್ (ಎಪಿ): ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸುತ್ತಿರುವ ಸೇನಾ ಕಾರ್ಯಾಚರಣೆಯನ್ನು ಸ್ಪೇನ್ ಪ್ರಧಾನಿ ಪೆದ್ರೊ ಸ್ಯಾಂಚೆಸ್ ಬುಧವಾರ ಖಂಡಿಸಿದ್ದಾರೆ.


ಪೆದ್ರೊ

ಸ್ಪೇನ್ ಜೊತೆಗಿನ ವ್ಯಾಪಾರವನ್ನು ಕೊನೆಗೊಳಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಬೆದರಿಕೆ ಹಾಕಿದರೂ, ತನ್ನ ನೆಲದಿಂದ ಇರಾನ್ ಮೇಲೆ ದಾಳಿ ನಡೆಸಲು ಅಮೆರಿಕಕ್ಕೆ ಅವಕಾಶ ನೀಡದೆ ಪೆದ್ರೊ ಸಡ್ಡು ಹೊಡೆದಿದ್ದಾರೆ.

ಇರಾನ್‌ನಲ್ಲಿ ನಡೆದಿರುವ ಸೇನಾ ಕಾರ್ಯಾಚರಣೆಯನ್ನು ನ್ಯಾಯಸಮ್ಮತ ಅಲ್ಲದ ಹಾಗೂ ಅಪಾಯಕಾರಿ ಮಿಲಿಟರಿ ಹಸ್ತಕ್ಷೇಪ ಎಂದಿದ್ದಾರೆ.

'ನಮ್ಮ ಹಿತಾಸಕ್ತಿ, ಮೌಲ್ಯಗಳ ರಕ್ಷಣೆಯಿಂದ ಹಿಂದೆ ಸರಿಯುವ ಮಾತಿಲ್ಲ. ಪ್ರತೀಕಾರದ ಭಯ ನಮಗಿಲ್ಲ. ಜಗತ್ತಿಗೆ ಕೆಟ್ಟದಾಗುವ ಯಾವುದೇ ಕೆಲಸದಲ್ಲಿ ನಾವು ತೊಡಗಿಸಿಕೊಳ್ಳುವುದಿಲ್ಲ' ಎಂದು ಪ್ರಧಾನಿ ಪೆದ್ರೊ ಹೇಳಿದ್ದಾರೆ.

ಐರೋಪ್ಯ ಒಕ್ಕೂಟದ ಸದಸ್ಯ ರಾಷ್ಟ್ರವಾಗಿರುವ ಸ್ಪೇನ್ ಜೊತೆಗಿನ ವ್ಯಾಪಾರವನ್ನು ಟ್ರಂಪ್ ಹೇಗೆ ಸ್ಥಗಿತಗೊಳಿಸುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. ಒಕ್ಕೂಟವು ತನ್ನ 27 ಸದಸ್ಯ ರಾಷ್ಟ್ರಗಳ ಪರವಾಗಿಯೂ ವ್ಯಾಪಾರ ಮಾತುಕತೆ ನಡೆಸುತ್ತದೆ ಎಂದಿದ್ದಾರೆ.

ಸ್ಪೇನ್‌ನ ನಿರಾಕರಣೆ ಹೊರತಾಗಿಯೂ ಟ್ರಂಪ್ ಅವರು, 'ನಾವು ಬಯಸಿದರೆ ಅವರ ನೆಲೆಯನ್ನು ಬಳಸಬಹುದು' ಎಂದು ಮಂಗಳವಾರ ಹೇಳಿದ್ದರು.


ಗಾಜಾದಲ್ಲಿ ಇಸ್ರೇಲ್ ನಡೆಸಿದ ಸಂಘರ್ಷವನ್ನು ಸ್ಪೇನ್ ಬಹಿರಂಗವಾಗಿ ಟೀಕಿಸಿತ್ತು.

ಮುಖ್ಯಾಂಶಗಳು

- ಅಪಾಯಕಾರಿ ಮಿಲಿಟರಿ ಹಸ್ತಕ್ಷೇಪ
- ಮೌಲ್ಯಗಳ ರಕ್ಷಣೆಯಿಂದ ಹಿಂದೆ ಸರಿಯಲ್ಲ
- ಟ್ರಂಪ್‌ಗೆ ಸಡ್ಡು ಹೊಡೆದ ಪೆದ್ರೊ

'ಜಾಗತಿಕ ವ್ಯವಸ್ಥೆಯೇ ಛಿದ್ರ'

ಮೆಲ್ಬರ್ನ್ (ಎಪಿ): ಅಂತರರಾಷ್ಟ್ರೀಯ ಕಾನೂನನ್ನು ಗೌರವಿಸದ ದೇಶಗಳು ಜಾಗತಿಕ ವ್ಯವಸ್ಥೆಯನ್ನೇ ಛಿದ್ರಗೊಳಿಸುತ್ತಿರುವುದಕ್ಕೆ ಇರಾನ್ ಮೇಲೆ ನಡೆಯುತ್ತಿರುವ ಯುದ್ಧವು ನೈಜ ನಿದರ್ಶನವಾಗಿದೆ ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಹೇಳಿದ್ದಾರೆ.


ಮಾರ್ಕ್ ಕಾರ್ನಿ

'ಇಂತಹ ಯುದ್ಧಗಳಿಂದ ಇತರ ದೇಶಗಳು ಪರಿಣಾಮ ಎದುರಿಸುತ್ತಿವೆ. ಪಶ್ಚಿಮ ಏಷ್ಯಾದಲ್ಲಿ ತಲೆದೋರಿರುವ ಬಿಕ್ಕಟ್ಟು ವಿಪರೀತ ಅಡಚಣೆ ಸೃಷ್ಟಿಸಿದೆ' ಎಂದು ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಅವರು ಸಿಡ್ನಿಯ ಲೋವಿ ಇನ್ಸ್ಟಿಟ್ಯೂಟ್‌ನಲ್ಲಿ ತಿಳಿಸಿದ್ದಾರೆ. 'ಜಗತ್ತಿನ ವ್ಯವಸ್ಥೆಯೇ ಛಿದ್ರವಾಗುತ್ತಿದೆ. ನಿಯಮ ಆಧಾರಿತ ಹಳೆಯ ರೂಢಿಗಳನ್ನು ಅಳಿಸಲಾಗುತ್ತಿದೆ. ಪ್ರಸ್ತುತ ನಡೆಯುತ್ತಿರುವ ಸಂಘರ್ಷವು ಅಂತರರಾಷ್ಟ್ರೀಯ ಮಾನದಂಡಗಳ ವೈಫಲ್ಯಕ್ಕೆ ಮತ್ತೊಂದು ಉದಾಹರಣೆ ಆಗಿದೆ' ಎಂದಿದ್ದಾರೆ.

'ಅಣ್ವಸ್ತ್ರ ಹೊಂದುವ ಮೂಲಕ ಅಂತರರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುವ ಇರಾನ್‌ನ ಪ್ರಯತ್ನ ತಡೆಯುವುದಕ್ಕೆ ನಾವು ಬೆಂಬಲ ನೀಡುತ್ತೇವೆ. ಆದರೆ, ಅಮೆರಿಕ– ಇಸ್ರೇಲ್ ಮಿತ್ರರಾಷ್ಟ್ರಗಳೊಂದಿಗೆ ಸಮಾಲೋಚಿಸದೆ ಸೇನಾ ಕಾರ್ಯಾಚರಣೆಗಿಳಿದಿವೆ' ಎಂದು ಕಾರ್ನಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇರಾನ್ ಮೇಲೆ ಅಮೆರಿಕ– ಇಸ್ರೇಲ್ ಜಂಟಿಯಾಗಿ ನಡೆಸಿರುವ ವೈಮಾನಿಕ ದಾಳಿಯು ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸಿದೆಯೇ ಎಂಬುದು 'ಇತರರಿಗಾಗಿ ದೊರಕಲಿರುವ ತೀರ್ಪು ಆಗಿರಲಿದೆ' ಎಂದಿದ್ದಾರೆ.

ಕಾನ್ಸುಲೇಟ್ ಕಚೇರಿ ಸಿಬ್ಬಂದಿ ವಾಪಸ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಕರಾಚಿ ಮತ್ತು ಲಾಹೋರ್‌ನಲ್ಲಿರುವ ತನ್ನ ಕಾನ್ಸುಲೇಟ್ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಪೈಕಿ, ತುರ್ತು ಕಾರ್ಯಕ್ಕಾಗಿ ನಿಯೋಜನೆ ಮಾಡಿರದ ಸಿಬ್ಬಂದಿಯನ್ನು ತಕ್ಷಣವೇ ವಾಪಸು ಕರೆಸಿಕೊಳ್ಳಲಾಗಿದೆ ಎಂದು ಅಮೆರಿಕ ಬುಧವಾರ ಘೋಷಿಸಿದೆ.

ಸುರಕ್ಷತೆ ಕಾರಣಕ್ಕಾಗಿ ಈ ಕ್ರಮ ಕೈಗೊಂಡಿದ್ದಾಗಿ ಪಾಕಿಸ್ತಾನದಲ್ಲಿರುವ ಅಮೆರಿಕದ ರಾಯಭಾರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ. ಇರಾನ್ ಪರಮೋಚ್ಚ ನಾಯಕ ಆಯತೊಲ್ಲಾ ಖಮೇನಿ ಹತ್ಯೆ ಬಳಿಕ, ಈ ನಗರಗಳಲ್ಲಿನ ಕಾನ್ಸುಲೇಟ್ ಕಚೇರಿಗಳಿಗೆ ನುಗ್ಗಲು ಪ್ರತಿಭಟನಕಾರರು ಯತ್ನಿಸಿದ್ದರು. ಸಿಬ್ಬಂದಿಯ ಸುರಕ್ಷತೆ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ.



ಇಸ್ರೇಲ್ ಮತ್ತು ಅಮೆರಿಕ ಸೇನೆ ಫೆ.28ರಂದು ಇರಾನ್‌ನ ಮಿನಾಬ್‌ನಲ್ಲಿರುವ ಬಾಲಕಿಯರ ಪ್ರಾಥಮಿಕ ಶಾಲೆ ಮೇಲೆ ನಡೆಸಿದ ವೈಮಾನಿಕ ದಾಳಿಯಲ್ಲಿ ಮೃತಪಟ್ಟವರ ಅಂತ್ಯಕ್ರಿಯೆ ಮಂಗಳವಾರ ನಡೆಯಿತು. ಅಪಾರ ಸಂಖ್ಯೆಯ ಜನರು ಭಾಗವಹಿಸಿದ್ದರು – ಎಪಿ/ಪಿಟಿಐ ಚಿತ್ರ

ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ: ಐಆರ್‌ಜಿಸಿ

ಪ್ಯಾರಿಸ್ (ಎಎಫ್‌ಪಿ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ಐದನೇ ದಿನ ಪೂರೈಸಿರುವ ನಡುವೆಯೇ, ಹಡಗುಗಳು ಸಾಗುವ ಪ್ರಮುಖ ಜಲಮಾರ್ಗವಾದ ಹೊರ್ಮುಜ್ ಜಲಸಂಧಿ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲಾಗಿದೆ ಎಂದು ಇರಾನ್ ಬುಧವಾರ ಹೇಳಿದೆ.

ಅಮೆರಿಕ ಹಾಗೂ ಇಸ್ರೇಲ್‌ಗೆ ಸೇರಿದ ಸೇನಾ ನೆಲೆಗಳನ್ನು ಗುರಿಯಾಗಿಸಿ 40ಕ್ಕೂ ಅಧಿಕ ಕ್ಷಿಪಣಿಗಳಿಂದ ದಾಳಿ ನಡೆಸಲಾಗಿದೆ ಎಂದು ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಹೇಳಿದೆ.

ಹೊರ್ಮುಜ್ ಜಲಸಂಧಿ ನಿರ್ಣಾಯಕ ಜಲಮಾರ್ಗವಾಗಿದ್ದು, ವಿಶ್ವದ ವಿವಿಧ ರಾಷ್ಟ್ರಗಳಿಗೆ ಈ ಮಾರ್ಗದ ಮೂಲಕವೇ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಸಾಗಿಸಲಾಗುತ್ತದೆ.


ಸರಕು ತುಂಬಿದ್ದ ಟ್ರಕ್‌ಗಳು ಯುಎಇ ಗಡಿಯಲ್ಲಿ ಸಾಲುಗಟ್ಟಿ ನಿಂತಿದ್ದ ದೃಶ್ಯ ಬುಧವಾರ ಕಂಡುಬಂತು ಎಎಫ್‌ಪಿ ಚಿತ್ರ

ಪ್ರಮುಖ ಅಂಶಗಳು

- ದುಬೈ ಮತ್ತು ಅಬುಧಾಬಿ ಷೇರು ಮಾರುಕಟ್ಟೆ ಸೂಚ್ಯಂಕಗಳಲ್ಲಿ ಬುಧವಾರ ಭಾರಿ ಕುಸಿತ ಕಂಡುಬಂತು. ಕ್ರಮವಾಗಿ ಶೇ 4.7 ಹಾಗೂ ಶೆ3.5ರಷ್ಟು ಕುಸಿತ ಕಂಡವು
- ಏಷ್ಯಾ ಮಾರುಕಟ್ಟೆ ಮೇಲೂ ಪಶ್ಚಿಮ ಏಷ್ಯಾ ಯುದ್ಧದ ಪರಿಣಾಮ ಮುಂದುವರಿಯಿತು. ಸೋಲ್ ಷೇರುಪೇಟೆ ಸೂಚ್ಯಂಕವು ಆರಂಭದಲ್ಲಿಯೇ ಶೇ12ರಷ್ಟು ಕುಸಿತ ದಾಖಲಿಸಿತು
- ಇಸ್ರೇಲ್‌ನ ಜೆರುಸಲೇಂ ಹಾಗೂ ಟೆಲ್ ಅವೀವ್ ಗುರಿಯಾಗಿಸಿ ಇರಾನ್‌ನಿಂದ ಕ್ಷಿಪಣಿ ದಾಳಿ. ಈ ನಗರಗಳು ಸೇರಿ ಎಲ್ಲೆಡೆ ಸೈರನ್ ಮೊಳಗಿ, ಎಚ್ಚರಿಕೆ ಸಂದೇಶ ರವಾನೆಯಾಯಿತು
- ಲೆಬನಾನ್ ರಾಜಧಾನಿ ಬೈರೂತ್‌ನ ದಕ್ಷಿಣ ಭಾಗದಲ್ಲಿ ಹಿಜ್ಬುಲ್ಲಾ ನೆಲೆಗಳನ್ನು ಗುರಿಯಾಗಿಸಿ ಇಸ್ರೇಲ್ ಪಡೆಗಳಿಂದ ದಾಳಿ. ಈ ದಾಳಿಯಲ್ಲಿ ಆರು ಜನರು ಮೃತಪಟ್ಟಿದ್ದಾಗಿ ಲೆಬನಾನ್ ಆರೋಗ್ಯ ಸಚಿವಾಲಯ ಹೇಳಿಕೆ
- ಪಶ್ಚಿಮ ಏಷ್ಯಾದಲ್ಲಿನ ತನ್ನ ಪಡೆಗಳು ಇರಾನ್‌ನ 2 ಸಾವಿರ ತಾಣಗಳನ್ನು ಗುರಿಯಾಗಿಸಿ ದಾಳಿ ನಡೆಸಿವೆ ಎಂದು ಅಮೆರಿಕ ಕಮಾಂಡರ್ ಅಡ್ಮಿರಲ್ ಬ್ರ್ಯಾಡ್ ಕೂಪರ್ ಹೇಳಿದ್ದಾರೆ
- ದುಬೈನಲ್ಲಿರುವ ಅಮೆರಿಕ ಕಾನ್ಸುಲೇಟ್ ಕಚೇರಿ ಗುರಿಯಾಗಿಸಿ ಇರಾನ್‌ನಿಂದ ಡ್ರೋನ್ ದಾಳಿ



ರಿಯಾದ್: ಅಮೆರಿಕ ರಾಯಭಾರ ಕಚೇರಿ ಮೇಲೆ ದಾಳಿ

ರಿಯಾದ್/ಸೌದಿ ಅರೇಬಿಯಾ (ಎಎಫ್‌ಪಿ): ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ರಿಯಾದ್‌ನಲ್ಲಿರುವ ಅಮೆರಿಕದ ರಾಯಭಾರ ಕಚೇರಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ.

ಪಶ್ಚಿಮ ಏಷ್ಯಾ ವಲಯದಲ್ಲಿ ರಾಜತಾಂತ್ರಿಕ ಮತ್ತು ಕೈಗಾರಿಕಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸುತ್ತಿರುವುದರಿಂದ, ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಗೊಳ್ಳುವಂತೆ ಅಮೆರಿಕವು ತನ್ನ ಪ್ರಜೆಗಳಿಗೆ ಸೂಚಿಸಿದೆ.

'ಸೌದಿ ರಾಜಧಾನಿಯಲ್ಲಿರುವ ಅಮೆರಿಕದ ರಾಯಭಾರ ಕಚೇರಿಯ ಚಾವಣಿ ಮತ್ತು ಗೋಡೆಗೆ ಹಾನಿಯಾಗಿದೆ' ಎಂದು ಎಎಫ್‌ಪಿ ಸುದ್ದಿಸಂಸ್ಥೆ ವರದಿ ಮಾಡಿದೆ.

ರಾಯಭಾರ ಕಚೇರಿಯ ಆವರಣದಲ್ಲಿ ಭದ್ರತೆ, ತಪಾಸಣೆ ಬಿಗಿಗೊಳಿಸಲಾಗಿದೆ. ರಾಯಭಾರ ಕಚೇರಿಯನ್ನು ಸಂಪರ್ಕಿಸುವ ರಸ್ತೆ ಮತ್ತು ಸುತ್ತಲಿನ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ. ಈ ದಾಳಿಯ ಬೆನ್ನಲ್ಲೇ, 'ಇರಾನ್ ವಿರುದ್ಧದ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆದರಿಕೆ ಹಾಕಿದ್ದಾರೆ.

'ಗಂಭೀರ ಭದ್ರತಾ ಸಮಸ್ಯೆ ಇರುವುದರಿಂದ ತಕ್ಷಣವೇ ಅಮೆರಿಕನ್ನರು ಪಶ್ಚಿಮ ಏಷ್ಯಾ ದೇಶಗಳನ್ನು ತೊರೆಯಿರಿ' ಎಂದೂ ಟ್ರಂಪ್ ಸೂಚಿಸಿದ್ದಾರೆ.

34 ಅಂತರರಾಷ್ಟ್ರೀಯ ವಿಮಾನ ಸಂಚಾರ ರದ್ದು



ದೇವನಹಳ್ಳಿ: ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸ್ಥಿತಿಯಿಂದಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬುಧವಾರ ಬರಬೇಕಿದ್ದ, ಇಲ್ಲಿಂದ ನಿರ್ಗಮಿಸಬೇಕಿದ್ದ 34 ವಿಮಾನಗಳ ಹಾರಾಟ ರದ್ದಾಗಿದೆ.

ಬುಧವಾರ ಬೆಳಗ್ಗೆ 11.59ರವರೆಗೆ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬರಬೇಕಿದ್ದ 18 ಹಾಗೂ ಇಲ್ಲಿಂದ ಕೊಲ್ಲಿ ರಾಷ್ಟ್ರಗಳಿಗೆ ಹೊರಡಬೇಕಿದ್ದ 16 ವಿಮಾನಗಳ ಸಂಚಾರ ರದ್ದಾಗಿದೆ. ಬೆಂಗಳೂರು, ಅಬುಧಾಬಿ, ರಿಯಾದ್, ಜೆಡ್ಡಾ, ದಮಾಮ್, ದುಬೈ ಹಾಗೂ ದೋಹಾ ನಗರಗಳ ನಡುವಿನ ಪ್ರಯಾಣಕ್ಕೆ ತಾತ್ಕಾಲಿಕ ಅಡಚಣೆ ಉಂಟಾಗಿದೆ. ಸೋಮವಾರ ಮತ್ತು ಮಂಗಳವಾರ ಅಬುಧಾಬಿಯಿಂದ ಎರಡು ವಿಮಾನಗಳು ಬೆಂಗಳೂರಿಗೆ 510 ಪ್ರಯಾಣಿಕರನ್ನು ಸುರಕ್ಷಿತವಾಗಿ ಕರೆ ತಂದಿದ್ದವು.

ಪ್ರಯಾಣಿಕರ ನೆರವಿಗಾಗಿ ಟರ್ಮಿನಲ್–2ರ ಹೊರಭಾಗದಲ್ಲಿ ಸಹಾಯ ಕೇಂದ್ರ ತೆರೆಯಲಾಗಿದೆ ಎಂದು ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ತಿಳಿಸಿದೆ. ಈ ಕೇಂದ್ರದಲ್ಲಿ ಪ್ರಯಾಣಿಕರ ಸಂದೇಹ ಪರಿಹಾರ, ಸಾರಿಗೆ ವ್ಯವಸ್ಥೆ, ತುರ್ತು ಸೇವೆ ಸೇರಿದಂತೆ ಪ್ರಯಾಣಿಕರು ಹಾಗೂ ಕುಟುಂಬ ಸದಸ್ಯರಿಗೆ ವಿವಿಧ ನೆರವು, ಮಾರ್ಗದರ್ಶನ ನೀಡಲಾಗುತ್ತಿದೆ. 'ಕುಡಿಯುವ ನೀರು, ತಿಂಡಿ, ವೈದ್ಯಕೀಯ ಸಹಾಯ, ಮೊಬೈಲ್ ಚಾರ್ಜಿಂಗ್ ವ್ಯವಸ್ಥೆ, ವ್ಹೀಲ್‌ಚೇರ್ ಹಾಗೂ ಮಕ್ಕಳಿಗೆ ತಾತ್ಕಾಲಿಕ ಆಹಾರ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೋಲ್ಕತ್ತ: 5 ವಿಮಾನಗಳ ಹಾರಾಟ ಸ್ಥಗಿತ

ಕೋಲ್ಕತ್ತ (ಪಿಟಿಐ): ಕೋಲ್ಕತ್ತ ವಿಮಾನ ನಿಲ್ದಾಣದಿಂದ ಪಶ್ಚಿಮ ಏಷ್ಯಾಕ್ಕೆ ತೆರಳಬೇಕಿದ್ದ ಮತ್ತು ಅಲ್ಲಿಂದ ಬರಬೇಕಿದ್ದ ಐದು ವಿಮಾನಗಳ ಸಂಚಾರವನ್ನು ಬುಧವಾರ ರದ್ದುಗೊಳಿಸಲಾಗಿದೆ. ದೋಹಾ, ದುಬೈ, ಅಬುಧಾಬಿಗೆ ಸೇರಿದಂತೆ ಪ್ರಮುಖ ನಗರಗಳಿಗೆ ವಿಮಾನ ಸಂಚಾರ ರದ್ದಾಗಿದೆ.

ಅಮೆರಿಕಕ್ಕೆ ರಷ್ಯಾ, ಚೀನಾ ಆಕ್ಷೇಪ

ಭದ್ರತಾ ಮಂಡಳಿ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮಾಸಿಕ ಅಧ್ಯಕ್ಷತೆಗಾಗಿ ಅಮೆರಿಕ ರೂಪಿಸಿದ ಕಾರ್ಯಸೂಚಿ ಸೋಮವಾರ ಅಂಗೀಕಾರವಾಗಲಿಲ್ಲ. ಇರಾನ್ ಮೇಲಿನ ಅಮೆರಿಕ ನಡೆ ಕುರಿತು ಚೀನಾ ಮತ್ತು ರಷ್ಯಾ ಆಕ್ಷೇಪಿಸಿ ತೀವ್ರ ಕಳವಳ ವ್ಯಕ್ತಪಡಿಸಿದವು.

ಭದ್ರತಾ ಮಂಡಳಿಯಲ್ಲಿ ವೀಟೊ ಅಧಿಕಾರ ಹೊಂದಿರುವ ಈ ಎರಡೂ ಕಾಯಂ ಸದಸ್ಯ ದೇಶಗಳ ವಿರೋಧದಿಂದ ಅಮೆರಿಕದ ಕಾರ್ಯಸೂಚಿ ಅಂಗೀಕಾರ ಪಡೆಯುವಲ್ಲಿ ವಿಫಲವಾಯಿತು. 15 ಸದಸ್ಯ ರಾಷ್ಟ್ರಗಳ ಭದ್ರತಾ ಮಂಡಳಿಯ ಮಾರ್ಚ್ ತಿಂಗಳ ಅಧ್ಯಕ್ಷತೆಯನ್ನು ಅಮೆರಿಕ ವಹಿಸಿಕೊಂಡಿದೆ. ಮಂಡಳಿಯ ನಿರೀಕ್ಷಿತ ಸಭೆಗಳು, ಮಾಸಿಕ ಕಾರ್ಯಸೂಚಿಗೆ ವಾಡಿಕೆಯಂತೆ ತಿಂಗಳ ಆರಂಭದಲ್ಲಿಯೇ ಅಂಗೀಕಾರ ದೊರೆಯುತ್ತದೆ. ಆದರೆ ರಷ್ಯಾ, ಚೀನಾ ಆಕ್ಷೇಪದಿಂದ ಅದು ಸಾಧ್ಯವಾಗಲಿಲ್ಲ.

'ವಿವಾದ ಇತ್ಯರ್ಥಕ್ಕೆ ಸೇನೆ ಬಳಕೆ ಹೆಚ್ಚಳ'

ನವದೆಹಲಿ (ಪಿಟಿಐ): 'ದೇಶಗಳ ನಡುವಿನ ವಿವಾದಗಳನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಈ ಉದ್ದೇಶಕ್ಕೆ ಪ್ರಸ್ತುತ, ಸೇನೆ ಬಳಕೆ ಹೆಚ್ಚುತ್ತಿದೆ. ಅಂತರರಾಷ್ಟ್ರೀಯ ಕಾನೂನು ಎಂಬುದು ಕೂಡ 'ಜಂಗಲ್ ಕಾಯ್ದೆ'ಯಂತಾಗಿದೆ' ಎಂದು ಭಾರತದಲ್ಲಿನ ಪ್ಯಾಲೆಸ್ಟೀನ್ ರಾಯಭಾರಿ ಅಬ್ದುಲ್ಲಾ ಎಂ.ಅಬು ಶಾವೇಶ್ ಹೇಳಿದ್ದಾರೆ.

'ಅಪಾರ ಹಾಗೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ ರಾಷ್ಟ್ರಗಳದ್ದೇ ಮೇಲುಗೈ ಆಗುತ್ತಿದ್ದು, ಭೌಗೋಳಿಕವಾಗಿ ದಕ್ಷಿಣದಲ್ಲಿರುವ ದೇಶಗಳ ಭವಿಷ್ಯವನ್ನೇ ಈ ವಿದ್ಯಮಾನಗಳು ಮಸಕು ಮಾಡುತ್ತಿವೆ' ಎಂದು ಅವರು ವಿಶ್ಲೇಷಿಸಿದ್ದಾರೆ.

ಪಿಟಿಐಗೆ ನೀಡಿರುವ ವಿಶೇಷ ಸಂದರ್ಶನದಲ್ಲಿ ಅಮೆರಿಕ–ಇರಾನ್ ಯುದ್ಧವನ್ನು ಪ್ರಸ್ತಾಪಿಸಿ ಅವರು ಈ ಮಾತುಗಳನ್ನಾಡಿದ್ದಾರೆ. 'ಆರ್ಥಿಕವಾಗಿ ಹಾಗೂ ಶಸ್ತ್ರಾಸ್ತ್ರಗಳ ವಿಚಾರದಲ್ಲಿ ಬಲಶಾಲಿಯಾಗಿರುವ ದೇಶಗಳು ನೀಡುತ್ತಿರುವ ಹೇಳಿಕೆಗಳು ಕಳವಳ ಮೂಡಿಸುವಂತಿವೆ. ಸಂಘರ್ಷದ ಸಂದರ್ಭಗಳಲ್ಲಿ, ಮಾತುಕತೆಗೆ ಬಾಗಿಲು ಮುಚ್ಚಿದೆ ಎಂಬುದನ್ನು ಈ ಹೇಳಿಕೆಗಳು ಸೂಚಿಸುತ್ತಿವೆ' ಎಂದು ಶಾವೇಶ್ ಹೇಳಿದ್ದಾರೆ.

> ಐತಿಹಾಸಿಕವಾಗಿ ಭಾರತವು ಪ್ಯಾಲೆಸ್ಟೀನ್‌ಗೆ ಬೆಂಬಲ ನೀಡುವ ಜೊತೆಗೆ ಪಶ್ಚಿಮ ಏಷ್ಯಾದೊಂದಿಗೆ ಸಮತೋಲಿತ ಸಂಬಂಧ ಕಾಯ್ದುಕೊಂಡಿದೆ. ಪ್ಯಾಲೆಸ್ಟೀನ್ ವಿಚಾರದಲ್ಲಿ ಎರಡು ದೇಶ ರಚಿಸುವ ಪರಿಹಾರಸೂತ್ರವನ್ನೂ ಬೆಂಬಲಿಸಿದೆ
> **ಅಬ್ದುಲ್ಲಾ ಎಂ.ಅಬು ಶಾವೇಶ್,** ಭಾರತದಲ್ಲಿನ ಪ್ಯಾಲೆಸ್ಟೀನ್ ರಾಯಭಾರಿ

ಫೈನಲ್‌ಗೆ ನ್ಯೂಜಿಲೆಂಡ್

f prajavani.net prajavani

ಗುರುವಾರ, ಮಾರ್ಚ್ 5, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 64 | ಪುಟ 14

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ

ಸ್ಕ್ಯಾನ್ ಮಾಡಿ



ಕೋಲ್ಕತ್ತದಲ್ಲಿ ಬುಧವಾರ ನಡೆದ ಟಿ–20 ಕ್ರಿಕೆಟ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡದ ಫಿನ್ ಅಲೆನ್ ಅವರು ದಕ್ಷಿಣ ಆಫ್ರಿಕಾ ವಿರುದ್ಧ ಅಜೇಯ ಶತಕ (100; 33ಎ) ಬಾರಿಸಿದರು. ಸ್ಯಾಂಟ್ನರ್ ಬಳಗವು ಫೈನಲ್ ಪ್ರವೇಶಿಸಿತು

ಸೆನ್ಸೆಕ್ಸ್ 79,116 | ನಿಫ್ಟಿ 24,480 | $/₹ 92.05 | ಚಿನ್ನ (Std. 10g) ₹1,69,400 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,87,700 (ಬೆಂಗಳೂರು)

ಮೊಜ್ತಾಬಾ ಉತ್ತರಾಧಿಕಾರಿ?

ಇರಾನ್ ಮೇಲೆ ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಬದುಕುಳಿದಿದ್ದ ಖಮೇನಿ ಪುತ್ರ

ದುಬೈ (ಎಎಫ್‌ಪಿ/ಎಪಿ): 'ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ದಾಳಿಯಲ್ಲಿ ಹತರಾದ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಸ್ಥಾನಕ್ಕೆ ಅವರ ಪುತ್ರ ಮೊಜ್ತಾಬಾ ಖಮೇನಿ (57) ನೇಮಕಗೊಳ್ಳುವ ಸಾಧ್ಯತೆಗಳಿವೆ. ಸಂಭವನೀಯ ಉತ್ತರಾಧಿಕಾರಿಗಳ ಪಟ್ಟಿಯಲ್ಲಿ ಮೊಜ್ತಾಬಾ ಹೆಸರು ಮುಂಚೂಣಿಯಲ್ಲಿದೆ' ಎಂದು ಮೂಲಗಳು ಹೇಳಿವೆ.



ಮೊಜ್ತಾಬಾ ಖಮೇನಿ

ಖಮೇನಿ ಉತ್ತರಾಧಿಕಾರಿಯಾಗಿ ಮೊಜ್ತಾಬಾ ಅವರ ಹೆಸರು ಬಹುಕಾಲದಿಂದ ಕೇಳಿಬರುತ್ತಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ಜತೆಗೆ ನಿಕಟ ಸಂಬಂಧ ಹೊಂದಿರುವ, ಮಧ್ಯಮ ಶ್ರೇಣಿಯ ಧರ್ಮಗುರುವಾಗಿರುವ ಮೊಜ್ತಾಬಾ ಖಮೇನಿ, ಇರಾನಿನ ಇಸ್ಲಾಮಿಕ್ ಧಾರ್ಮಿಕ ವ್ಯವಸ್ಥೆಯಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದಾರೆ. ರಾಜಕೀಯ ಕೌಶಲ, ಸಾಟಿಯಿಲ್ಲದ ಧಾರ್ಮಿಕ ಮೈತ್ರಿ ಮತ್ತು ಅಪಾರ ಸಂಪತ್ತಿನ ಮೂಲಕ ದೇಶದಲ್ಲಿ ತನ್ನದೇ ಆದ ಅಧಿಕಾರ ಬಲವನ್ನು ಮೊಜ್ತಾಬಾ ಹೊಂದಿದ್ದಾರೆ.

ಇತ್ತೀಚೆಗೆ ಅಮೆರಿಕ– ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಮೊಜ್ತಾಬಾ ಖಮೇನಿ ಬದುಕುಳಿದಿದ್ದರು. ಅವರ ಪತ್ನಿ ಜಹ್ರಾ ಹದ್ದಾದ್ ಅಡೆಲ್ ಮೃತಪಟ್ಟಿದ್ದರು. 'ಮೊಜ್ತಾಬಾ ಜೀವಂತವಾಗಿದ್ದಾರೆ, ಖಮೇನಿ ಕಚೇರಿಯನ್ನು ಗುರಿಯಾಗಿಸಿ ದಾಳಿ ನಡೆದಾಗ ಮೊಜ್ತಾಬಾ ಟೆಹರಾನ್‌ನಲ್ಲಿ ಇರಲಿಲ್ಲ' ಎಂದು ಮೂಲಗಳು ಹೇಳಿವೆ.

▶10

'ಉತ್ತರಾಧಿಕಾರಿ ಯಾರಾದರೂ ಹತ್ಯೆ ಮಾಡುತ್ತೇವೆ'

ಜೆರುಸಲೇಂ (ಎಎಫ್‌ಪಿ): 'ಇರಾನ್‌ನಲ್ಲಿ ಆಯತೊಲ್ಲಾ ಅಲಿ ಖಮೇನಿ ಅವರ ಉತ್ತರಾಧಿಕಾರಿಯಾಗಿ ಯಾರೇ ನೇಮಕಗೊಂಡರೂ ಅವರನ್ನು ಹತ್ಯೆ ಮಾಡುತ್ತೇವೆ' ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಎಚ್ಚರಿಕೆ ನೀಡಿದ್ದಾರೆ.



'ಇಸ್ರೇಲ್‌ನ ನಾಶಕ್ಕೆ ಯೋಜನೆ ರೂಪಿಸಿ, ಅಮೆರಿಕ, ಕೊಲ್ಲಿ ವಲಯಕ್ಕೆ ಬೆದರಿಕೆ ಹಾಕುತ್ತಿರುವ ಇರಾನ್‌ನ ಭಯೋತ್ಪಾದಕ ಆಡಳಿತವು, ಅಲ್ಲಿನ ಪರಮೋಚ್ಚ ನಾಯಕನ ಹುದ್ದೆಗೆ ಯಾರನ್ನೇ ಆಯ್ಕೆ ಮಾಡಿದರೂ ನಮ್ಮ ಸೇನೆ ಅವರನ್ನು ಹತ್ಯೆ ಮಾಡಲಿದೆ. ಉತ್ತರಾಧಿಕಾರಿ ಹೆಸರು ಏನೇ ಇರಲಿ, ಅವರು ಎಲ್ಲೇ ಅಡಗಿಕೊಂಡಿರಲಿ ಹತ್ಯೆ ಮಾಡಲಾಗುವುದು' ಎಂದು ಕಾಟ್ಜ್ 'ಎಕ್ಸ್' ಪೋಸ್ಟ್‌ನಲ್ಲಿ ಹೇಳಿದ್ದಾರೆ.



ಇಸ್ರೇಲ್ ನಡೆಸಿದ ಬಾಂಬ್ ದಾಳಿಯಿಂದ ದಕ್ಷಿಣ ಲೆಬನಾನ್‌ನ ಖಿಯಾಂ ಗ್ರಾಮದಲ್ಲಿ ದಟ್ಟ ಹೊಗೆ ಎದ್ದಿತ್ತು –ಎಎಫ್‌ಪಿ ಚಿತ್ರ

'ಅಮೆರಿಕದೊಂದಿಗೆ ಮಾತುಕತೆ ನಡೆಸಲ್ಲ'

ಟೆಹರಾನ್ (ಎಎಫ್‌ಪಿ): 'ಅಮೆರಿಕದೊಂದಿಗೆ ಮಾತುಕತೆ ನಡೆಸುವ ಯಾವುದೇ ಉದ್ದೇಶ ಹೊಂದಿಲ್ಲ, ಪಶ್ಚಿಮ ಏಷ್ಯಾ ಯುದ್ಧವನ್ನು ಎಲ್ಲಿಯವರೆಗೆ ಬೇಕಾದರೂ ಮುಂದುವರಿಸಬಹುದು' ಎಂದು ಇರಾನ್ ಪರಮೋಚ್ಚ ನಾಯಕನ ಹಿರಿಯ ಸಲಹೆಗಾರ ಮೊಹಮ್ಮದ್ ಮೊಖ್ಬರ್ ಹೇಳಿದ್ದಾರೆ.

ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಟಿವಿಯೊಂದಿಗೆ ಮಾತನಾಡಿದ ಮೊಹಮ್ಮದ್, 'ಅಮೆರಿಕನ್ನರ ಮೇಲೆ ನಮಗೆ ನಂಬಿಕೆ ಇಲ್ಲ, ಅವರೊಂದಿಗೆ ಮಾತುಕತೆ ನಡೆಸಲು ಯಾವುದೇ ಕಾರಣ ಉಳಿದಿಲ್ಲ. ನಾವು ಎಲ್ಲಿಯವರೆಗೆ ಬೇಕಾದರೂ ಯುದ್ಧ ಮುಂದುವರಿಸುತ್ತೇವೆ' ಎಂದು ಹೇಳಿದ್ದಾರೆ.

ಇರಾನ್ ನೌಕೆ ಮೇಲೆ ಅಮೆರಿಕ ದಾಳಿ: 87 ಶವ ಪತ್ತೆ



ಕೊಲಂಬೊ (ಎಪಿ/ಎಎಫ್‌ಪಿ): ಶ್ರೀಲಂಕಾದ ದಕ್ಷಿಣ ಕರಾವಳಿಯಲ್ಲಿ ಇರಾನ್‌ನ ನೌಕೆಯ ಮೇಲೆ ಅಮೆರಿಕ ದಾಳಿ ಮಾಡಿದ್ದು, ಅದರಲ್ಲಿದ್ದ ಹಲವರು ಮೃತಪಟ್ಟಿದ್ದಾರೆ. ಈವರೆಗೆ 87 ಶವಗಳನ್ನು ಶ್ರೀಲಂಕಾ ನೌಕಾಪಡೆ ಪತ್ತೆಹಚ್ಚಿದೆ.

'ಐರೀಸ್ ಡೆನಾ' ಹೆಸರಿನ ನೌಕೆಯಲ್ಲಿದ್ದ 32 ಜನರನ್ನು ರಕ್ಷಿಸಲಾಗಿದೆ. ಆದರೆ, ಹಲವರ ಸುಳಿವು ಸಿಕ್ಕಿಲ್ಲ ಎಂದು ಶ್ರೀಲಂಕಾದ ವಿದೇಶಾಂಗ ವ್ಯವಹಾರಗಳು ಮತ್ತು ರಕ್ಷಣಾ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲವು ಮೃತದೇಹಗಳು ಪತ್ತೆಯಾಗಿವೆ. ಸಾವಿಗೀಡಾದವರ ನಿಖರ ಸಂಖ್ಯೆ ತಿಳಿದಿಲ್ಲ ಎಂದು ನೌಕಾ ಪಡೆಯ ವಕ್ತಾರರು ಮಾಹಿತಿ ನೀಡಿದ್ದಾರೆ. ಒಬ್ಬರ ಸ್ಥಿತಿ ಗಂಭೀರವಾಗಿದೆ, ಏಳು ಜನರಿಗೆ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ ಮತ್ತು ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

▶10

ಕಾನೂನು ಸಮರಕ್ಕೆ ಕೆಎಸ್‌ಎಟಿ ಇತಿಶ್ರೀ

ಕೊನೆಗೂ ಒಲಿದ ಶಿಕ್ಷಕಿ ಹುದ್ದೆ

15,000 ಅಧಿಸೂಚನೆ ಹೊರಡಿಸಿದ್ದ ಖಾಲಿ ಹುದ್ದೆಗಳು	13,351 ಅಂತಿಮ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳು	11,494 ಮೊದಲ ಹಂತದಲ್ಲಿ ನೇಮಕಾತಿಗೊಂಡವರು	1,857 ನೇಮಕಾತಿ ಆದೇಶ ಸಿಗದವರು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ತಂದೆಯ ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಿದ ಕಾರಣಕ್ಕೆ ನೇಮಕಾತಿ ಅವಕಾಶ ದಿಂದ ವಂಚಿತರಾಗಿದ್ದ ವಿವಾಹಿತ ಮಹಿಳಾ ಅಭ್ಯರ್ಥಿಗಳಿಗೆ ಕೊನೆಗೂ ಪ್ರಾಥಮಿಕ ಶಾಲಾ ಶಿಕ್ಷಕಿಯರ ಹುದ್ದೆ ಪಡೆಯುವ ಯೋಗ ಕೂಡಿಬಂದಿದೆ.



ನಾಲ್ಕು ವರ್ಷಗಳ ಕಾನೂನು ಹೋರಾಟಕ್ಕೆ ಜಯ ಸಿಕ್ಕಿದ್ದು, ಬೀದರ್‌ನ ಸಮೀನಾ ಫಾತೀಮಾ ಸೇರಿದಂತೆ ಹಲವರು ಸಲ್ಲಿಸಿದ್ದ ಅರ್ಜಿಗಳನ್ನು ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯ ಮಂಡಳಿ (ಕೆಎಸ್‌ಎಟಿ–ಕಲಬುರಗಿ) ಪುರಸ್ಕರಿಸಿದೆ. ಅರ್ಹತೆಯ ಆಧಾರದಲ್ಲಿ ಪರಿಷ್ಕೃತ ಅಂತಿಮ ಆಯ್ಕೆಪಟ್ಟಿ ಪ್ರಕಟಿಸಿ, ನೇಮಕಾತಿ ಆದೇಶ ನೀಡುವಂತೆ ಶಾಲಾ ಶಿಕ್ಷಣ ಇಲಾಖೆಗೆ ಸೂಚಿಸಿದೆ.

ಸರ್ಕಾರಿ ಶಾಲೆಗಳಲ್ಲಿ (6ರಿಂದ 8ನೇ ತರಗತಿ) ಖಾಲಿ ಇರುವ ಪದವೀಧರ ಪ್ರಾಥಮಿಕ ಶಿಕ್ಷಕ ವೃಂದದ 15 ಸಾವಿರ ಶಿಕ್ಷಕರ ಹುದ್ದೆಗಳ ನೇಮಕಾತಿಗೆ 2022ರ ಮಾರ್ಚ್‌ನಲ್ಲಿ ಶಾಲಾ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಮೀಸಲಾತಿ ಅನ್ವಯ ಹುದ್ದೆಗಳಿಗೆ ಆಯ್ಕೆ ಬಯಸುವವರು ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸುವುದು ನಿಯಮ. 'ಅವಿವಾಹಿತೆಯರು ತಂದೆಯ ಆದಾಯ, ವಿವಾಹಿತೆಯರು ಗಂಡನ ಆದಾಯ ಪ್ರಮಾಣಪತ್ರ ಸಲ್ಲಿಸಬೇಕಿತ್ತು. ಆದರೆ, ಮದುವೆಯಾಗಿದ್ದರೂ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ' ಎಂಬ ಕಾರಣ ನೀಡಿ ಒಂದು ಸಾವಿರಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಿ, ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಲಾಗಿತ್ತು.

ನೇಮಕಾತಿಗೆ ಹೊರಡಿಸಿದ್ದ ಅಧಿಸೂಚನೆಯಲ್ಲಿ ಮದುವೆಯಾದ ಮಹಿಳೆಯರು ಗಂಡನ ಆದಾಯ ಪ್ರಮಾಣ ಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ಯಾವುದೇ ಸ್ಪಷ್ಟ ನಿರ್ದೇಶನ ಇರಲಿಲ್ಲ. ಈ ಅಂಶವನ್ನು ಮುಂದಿಟ್ಟು ವಿವಾಹಿತೆಯರು ಹೈಕೋರ್ಟ್ ಮೊರೆ ಹೋಗಿದ್ದರು.

ವಿಚಾರಣೆ ನಡೆಸಿದ ಹೈಕೋರ್ಟ್ ಏಕಸದಸ್ಯ ಪೀಠ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿರುವ ವಿವಾಹಿತ ಮಹಿಳೆಯರನ್ನೂ ಮೆರಿಟ್ ಆಧಾರದಲ್ಲಿ ಗಣನೆಗೆ ತೆಗೆದುಕೊಂಡು ಆಯ್ಕೆಪಟ್ಟಿ ಪ್ರಕಟಿಸಲು ಸೂಚಿಸಿತ್ತು. ಕೋರ್ಟ್ ಸೂಚನೆಯಂತೆ 2023ರ ಜನವರಿಯಲ್ಲಿ ಅಂತಿಮಪಟ್ಟಿ ಪ್ರಕಟಿಸಲಾಗಿತ್ತು. ಆದರೆ, ವಿಭಾಗೀಯ ಪೀಠದ ತೀರ್ಪಿನ ಬಳಿಕ ಮರುಪರಿಶೀಲನೆ ವೇಳೆ ಕೌನ್ಸೆಲಿಂಗ್ ಪಟ್ಟಿಯಿಂದ ಅವರ ಹೆಸರನ್ನು ಕೈಬಿಡಲಾಗಿತ್ತು.

ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ ವಿವಾದ: ಹೈಕೋರ್ಟ್ ವಿಭಾಗೀಯ ಪೀಠದ ಆದೇಶ ಪ್ರಶ್ನಿಸಿ ವಿವಾಹಿತ ಮಹಿಳೆಯರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ತಾತ್ಕಾಲಿಕ ಆಯ್ಕೆಪಟ್ಟಿ ಮತ್ತು ಅಂತಿಮ ಪಟ್ಟಿಯಲ್ಲಿ ವ್ಯತ್ಯಾಸವಾಗಿದ್ದ ವಿವಾಹಿತ ಮಹಿಳೆಯರನ್ನು ಹೊರತುಪಡಿಸಿ, ಉಳಿದವರಿಗೆ ಅಂತಿಮ ತೀರ್ಪಿನ ಷರತ್ತಿಗೆ ಒಳಪಟ್ಟು ನೇಮಕಾತಿ ಆದೇಶ ನೀಡಲು ಕೋರ್ಟ್ ಸಮ್ಮತಿಸಿತ್ತು. ನಂತರ ಪ್ರಕರಣವನ್ನು ಇತ್ಯರ್ಥಪಡಿಸಲು ಕೆಎಸ್‌ಎಟಿಗೆ ಸೂಚಿಸಲಾಗಿತ್ತು. ಕೆಎಸ್‌ಎಟಿ ವಿವಾಹಿತ ಮಹಿಳೆಯರ ಪರ ಆದೇಶ ನೀಡಿದೆ.

ಎಲ್ಲರೂ ಹಿಂದುಳಿದ ವರ್ಗದವರು

ಸುಪ್ರೀಂ ಕೋರ್ಟ್‌ನ ಮಧ್ಯಂತರ ತೀರ್ಪಿನಂತೆ 11,494 ಅಭ್ಯರ್ಥಿಗಳಿಗೆ ಶಾಲಾ ಶಿಕ್ಷಣ ಇಲಾಖೆ ಸ್ಥಳ ನಿಯುಕ್ತಿ ಆದೇಶ ನೀಡಿತ್ತು. ಆದರೆ, ಮೆರಿಟ್ ಇದ್ದರೂ ತಂದೆಯ ಆದಾಯ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ಕಾರಣಕ್ಕೆ ವಿವಾಹಿತ ಮಹಿಳೆಯರು ಅವಕಾಶ ವಂಚಿತರಾಗಿದ್ದರು. ಈ ಎಲ್ಲರೂ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಗಳು.

'ಮಹಿಳೆ ಇತರೆ ಯಾವುದೇ ಜಾತಿಯ ಪುರುಷನನ್ನು ಮದುವೆಯಾದರೂ, ಜಾತಿ ತಂದೆಯದೇ ಆಗಿರುತ್ತದೆ. ಹಾಗಾಗಿ, ತಂದೆಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಬೇಕಾಗುತ್ತದೆ ಎಂದು ಉದ್ಯೋಗ, ಚುನಾವಣೆ ಉಮೇದುವಾರಿಕೆಯ ಹಲವು ಪ್ರಕರಣಗಳಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ತೀರ್ಪು ನೀಡಿವೆ. ಹಿಂದೆ ನಡೆದ ಶಿಕ್ಷಕರ ನೇಮಕಾತಿಯಲ್ಲೂ ಈ ಸಮಸ್ಯೆ ಇರಲಿಲ್ಲ' ಎನ್ನುವುದನ್ನು ಹಿಂದುಳಿದ ವರ್ಗಗಳಿಗೆ ಸೇರಿದ ಮಹಿಳಾ ಅಭ್ಯರ್ಥಿಗಳು ಪ್ರತಿಪಾದಿಸಿದ್ದರು.

ಒಳ ಮೀಸಲು ಜಟಾಪಟಿ: ಇಂದು ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಾಗ, ಪರಿಶಿಷ್ಟ ಜಾತಿಗಿರುವ ಶೇ 15ರಷ್ಟು ಮೀಸಲಾತಿಯಲ್ಲಿಯೇ ಒಳ ಮೀಸಲಾತಿ ಅಳವಡಿಸುವ ಕುರಿತಂತೆ ದಲಿತ ಎಡಗೈ ಮತ್ತು ಬಲಗೈ ಸಮುದಾಯ ಭಿನ್ನ ನಿಲುವು ತಳೆದಿರುವುದು ರಾಜ್ಯ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಗುರುವಾರ (ಮಾರ್ಚ್ 5) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರಲಿದೆ.

ಶೇ 15ರ ಮೀಸಲಾತಿಯಲ್ಲಿಯೇ ಒಳ ಮೀಸಲಾತಿ ಕಲ್ಪಿಸುವಂತೆ ಎಡಗೈ ಸಮುದಾಯದ ಸಚಿವರು, ಮುಖಂಡರು ಪಟ್ಟು ಹಿಡಿದಿದ್ದಾರೆ. ಆದರೆ, ರೋಸ್ಟರ್ ಗೊಂದಲ, ನ್ಯಾಯಾಲಯದ ಅಡೆತಡೆ ನಿವಾರಣೆ ಆಗುವರೆಗೆ ಒಳ ಮೀಸಲಾತಿ ರಹಿತವಾಗಿ ಶೇ 15ರಷ್ಟು ಮೀಸಲಾತಿ ಜಾರಿಗೊಳಿಸಬೇಕು ಎಂದು ಬಲಗೈ ಸಮುದಾಯ ಒತ್ತಡ ಹೇರಿದೆ.

ಒಳ ಮೀಸಲಾತಿ ವಿಷಯದಲ್ಲಿ ಪರಿಶಿಷ್ಟ ಜಾತಿಯ ನಾಯಕರ ನಡುವೆ ಜಟಾಪಟಿ ತೀವ್ರಗೊಂಡಿರುವ ನಡುವೆ, ಬಲಗೈ ಹಾಗೂ ಎಡಗೈ ಸಮುದಾಯದ ನಾಯಕರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಪ್ರತ್ಯೇಕವಾಗಿ ಬುಧವಾರ ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

▶6

ತಾಂತ್ರಿಕ ಸಮಿತಿ ರಚನೆ?



ಒಳ ಮೀಸಲಾತಿ ಹಂಚಿಕೆ ಮಾಡಿ ಈಗಾಗಲೇ ನಿಗದಿಪಡಿಸಿರುವ 'ರೋಸ್ಟರ್ ಬಿಂದು' ಪ್ರಕಾರ ನೇಮಕಾತಿ ಪ್ರಕ್ರಿಯೆ ನಡೆದರೆ ಗ್ರೂಪ್ 'ಎ'ಗೆ (ಎಡಗೈ ಸಂಬಂಧಿತ ಜಾತಿಗಳು) ಅವಕಾಶ ಹೆಚ್ಚು ಸಿಗುತ್ತಿದ್ದು, ಗ್ರೂಪ್ 'ಬಿ' (ಬಲಗೈ ಸಂಬಂಧಿತ ಜಾತಿಗಳು) ಮತ್ತು ಗ್ರೂಪ್ 'ಸಿ'ಗೆ (ಸ್ಪೃಶ್ಯ ಸಂಬಂಧಿತ ಮತ್ತು ಅಲೆಮಾರಿ, ಅರೆ ಅಲೆಮಾರಿ ಜಾತಿಗಳು) ಹುದ್ದೆ ಸಿಗುವ ಅವಕಾಶಗಳು ಕಡಿಮೆ ಎನ್ನುವುದು ಬಲಗೈ ಸಮುದಾಯದ ನಾಯಕರ ಆಕ್ಷೇಪ.

ಸಚಿವ ಸಂಪುಟ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರಲಿದೆ. ಮೂರೂ ಗುಂಪುಗಳಿಗೆ ಸಮಾನ ಅವಕಾಶ ಸಿಗುವಂತೆ 'ರೋಸ್ಟರ್ ಬಿಂದು' ಮರು ನಿಗದಿಪಡಿಸಲು ತಾಂತ್ರಿಕ ಸಮಿತಿಯನ್ನು ರಚಿಸುವ ಬಗ್ಗೆ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕೆಪಿಎಸ್‌ಸಿ ಅಕ್ರಮ ಆರೋಪ: ವರದಿ ಕೇಳಿದ ಸಿ.ಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ಆಯ್ಕೆಗೆ ನಡೆದ ಮುಖ್ಯ ಪರೀಕ್ಷೆಯಿಂದ 1:3ರ ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಅಭ್ಯರ್ಥಿಗಳ ಅರ್ಹತಾ ಪಟ್ಟಿ ಸಿದ್ಧಪಡಿಸಿದ ವೇಳೆ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಕೆಪಿಎಸ್‌ಸಿಯಿಂದ ವರದಿ ಕೇಳಿದ್ದಾರೆ.



ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಎಸ್‌ಸಿ ಕಾರ್ಯದರ್ಶಿ ಕೆ. ಜ್ಯೋತಿ, 'ಮುಖ್ಯ ಪರೀಕ್ಷೆಯಿಂದ ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿ ತಯಾರಿಸುವ ವೇಳೆಯಲ್ಲಿ ಯಾವುದೇ ರೀತಿಯ ಭ್ರಷ್ಟಾಚಾರ ನಡೆದಿಲ್ಲ. ಅತ್ಯಂತ ಪಾರದರ್ಶಕವಾಗಿ ಪರೀಕ್ಷೆ ನಡೆಸಿ ಪಟ್ಟಿ ಬಿಡುಗಡೆ ಮಾಡಲಾಗಿದೆ. ಆಧಾರವಿಲ್ಲದೆ ಭ್ರಷ್ಟಾಚಾರದ ಆರೋಪ ಮಾಡುವುದು ಸರಿಯಲ್ಲ' ಎಂದರು.

'ಈ ವಿಚಾರವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿ ವರದಿ ಕೇಳಿದ್ದಾರೆ. ಆಯೋಗದಿಂದ ವಿವರವಾದ ವರದಿಯನ್ನು ಗುರುವಾರ (ಮಾ.5) ಸಲ್ಲಿಸುತ್ತೇವೆ. ಅಭ್ಯರ್ಥಿಗಳು ಮಾಡಿರುವ ಆರೋಪ ಗಳ ಬಗ್ಗೆ ಆಂತರಿಕವಾಗಿಯೂ ಪರಿಶೀಲಿಸುತ್ತೇವೆ' ಎಂದರು.

'ಒಂದೇ ಪರೀಕ್ಷಾ ಕೊಠಡಿಯಲ್ಲಿ ಮುಖ್ಯ ಪರೀಕ್ಷೆ ಬರೆದ 10ಕ್ಕೂ ಹೆಚ್ಚು ಅಭ್ಯರ್ಥಿಗಳು, ಅಲ್ಲದೆ, ಒಂದೇ ಕುಟುಂಬದ ಇಬ್ಬರು, ಮೂವರು ವ್ಯಕ್ತಿತ್ವ ಪರೀಕ್ಷೆಗೆ ಅರ್ಹತೆ ಪಡೆದಿರುವುದು ಅನುಮಾನಗಳಿಗೆ ಕಾರಣವಾಗಿದೆ' ಎಂದು ಕೆಲ ಅಭ್ಯರ್ಥಿಗಳು ದೂರಿದ್ದಾರೆ. ಈ ಬಗ್ಗೆಯೂ ಸ್ಪಷ್ಟನೆ ನೀಡಿರುವ ಜ್ಯೋತಿ, '5,700ಕ್ಕೂ ಹೆಚ್ಚು ಅಭ್ಯರ್ಥಿಗಳು ಮುಖ್ಯ ಪರೀಕ್ಷೆ ಬರೆದಿದ್ದಾರೆ. ಒಂದು ಕೊಠಡಿಯಲ್ಲಿ 24 ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಲಾಗಿತ್ತು. ಅದರಲ್ಲಿ 10ರಿಂದ 12 ಅಭ್ಯರ್ಥಿಗಳು ಆಯ್ಕೆಯಾಗುವುದು ಸಹಜ' ಎಂದರು.

ವ್ಯಕ್ತಿತ್ವ ಪರೀಕ್ಷೆಗೆ ಅರ್ಹರ ಪಟ್ಟಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಕೆಲವು ಅಭ್ಯರ್ಥಿಗಳು, ಸಂದರ್ಶನಕ್ಕೆ ಅರ್ಹತೆ ಪಡೆದಿರುವವರ ಆಯ್ಕೆಯ ವೇಳೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪೋಸ್ಟ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಟ್ಯಾಗ್ ಮಾಡಿ, ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದ್ದಾರೆ.

'ಹೊಣೆ ಹೊರಬೇಕು'



ಕೆಪಿಎಸ್‌ಸಿ ನಡೆಸುವ ನೇಮಕಾತಿಗಳ ಬಗ್ಗೆ ಬಹಳ ವರ್ಷಗಳಿಂದ ದೂರುಗಳು ಬರುತ್ತಲೇ ಇವೆ. ಈ ಬಗ್ಗೆ ಮುಖ್ಯಮಂತ್ರಿಯವರು ಕೆಪಿಎಸ್‌ಸಿ ಆಡಳಿತ ಮಂಡಳಿಯವರನ್ನು ಕರೆಯಿಸಿ ಹಲವು ಬಾರಿ ಮಾತನಾಡಿದ್ದಾರೆ. ಅಲ್ಲದೆ, ಕಾರ್ಯದರ್ಶಿ ಅವರನ್ನೂ ಬದಲಾಯಿಸಲಾಗಿದೆ. ಹಲವು ಕ್ರಮಗಳನ್ನೂ ತೆಗೆದುಕೊಳ್ಳಲಾಗಿದೆ. ಆದರೂ ಈ ರೀತಿ ಆಗುತ್ತದೆ ಎಂದಾಗ, ಕಾರ್ಯದರ್ಶಿಯೊ, ಅಧ್ಯಕ್ಷರೊ ಅದರ ಹೊಣೆ ಹೊರಬೇಕಾಗುತ್ತದೆ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

> ಒಂದೇ ಕೊಠಡಿಯಲ್ಲಿ ಪರೀಕ್ಷೆ ಬರೆದವರ ಪೈಕಿ ಇಷ್ಟು ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳು ಅರ್ಹತೆ ಪಡೆದಿರುವುದು ಕೆಪಿಎಸ್‌ಸಿ ಇತಿಹಾಸದಲ್ಲೇ ಇದೇ ಮೊದಲು ಎನಿಸುತ್ತದೆ. ಇದು ಭ್ರಷ್ಟಾಚಾರವಲ್ಲ, ಇತಿಹಾಸ. ಈ ಬಗ್ಗೆಯೂ ಪರಿಶೀಲನೆ ಮಾಡುವೆ
>
> **ಕೆ. ಜ್ಯೋತಿ,** ಕೆಪಿಎಸ್‌ಸಿ ಕಾರ್ಯದರ್ಶಿ



ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್, ಅಭಿಷೇಕ್ ಶರ್ಮಾ, ಶಿವಂ ದುಬೆ –ಪಿಟಿಐ ಚಿತ್ರ

ಟಿ20 ವಿಶ್ವಕಪ್ ಸೆಮಿ: ಭಾರತ–ಇಂಗ್ಲೆಂಡ್ ಹಣಾಹಣಿ ಇಂದು

ಮುಂಬೈ (ಪಿಟಿಐ): 'ಮುಂಬೈಕರ್' ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡ ಗುರುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಆಡಲಿದೆ.

ಸತತ ಮೂರನೇ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗುತ್ತಿವೆ. ಹಾಲಿ ಚಾಂಪಿಯನ್ ಮತ್ತು ಆತಿಥೇಯ ಭಾರತ ತಂಡವು ಸೂಪರ್ 8ರ ಘಟ್ಟದ ಕೊನೆಯ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಜಯಿಸಿತ್ತು. ಅಲ್ಲಿ ಆಡಿದ್ದ 11ರ ಬಳಗವನ್ನೇ ಇಲ್ಲಿಯೂ ಉಳಿಸಿಕೊಳ್ಳುವ ಸಾಧ್ಯತೆ ಇದೆ. ಸಂಜು ಸ್ಯಾಮ್ಸನ್, ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ಹಾಗೂ ಶಿವಂ ದುಬೆ ಅವರು ಉತ್ತಮ ಲಯದಲ್ಲಿದ್ದಾರೆ.

ಬುಧವಾರ ರಾತ್ರಿ ಕೋಲ್ಕತ್ತದಲ್ಲಿ ನಡೆದ ಮೊದಲ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಜಯಿಸಿದ ನ್ಯೂಜಿಲೆಂಡ್ ತಂಡವು ಫೈನಲ್ ಪ್ರವೇಶಿಸಿತು.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಖಾಸಗಿ ಶಾಲಾ ಶುಲ್ಕ: ಶೇ 12ರವರೆಗೆ ಹೆಚ್ಚಳ?

ಬೆಂಗಳೂರು: ರಾಜ್ಯದ ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು 2026–27ನೇ ಶೈಕ್ಷಣಿಕ ಸಾಲಿನಿಂದ ಶಾಲಾ ಶುಲ್ಕವನ್ನು ಶೇ 8ರಿಂದ ಶೇ 12ರವರೆಗೆ ಹೆಚ್ಚಿಸಲು ನಿರ್ಧರಿಸಿವೆ.

ಸಾಮಾನ್ಯವಾಗಿ ಪ್ರತಿವರ್ಷ ಶೇ 2ರಿಂದ ಶೇ4ರವರೆಗೆ ಮಾತ್ರ ಹೆಚ್ಚಳ ಮಾಡಲಾಗುತ್ತಿತ್ತು. ಮಕ್ಕಳ ದಾಖಲಾತಿ ಕುಸಿತ, ಸಿಬ್ಬಂದಿ ವೇತನ ಹೆಚ್ಚಳ, ನೀರು, ವಿದ್ಯುತ್ ಶುಲ್ಕ, ವೃತ್ತಿಪರ ತೆರಿಗೆ, ಪಿಎಫ್, ಇಎಸ್‌ಐ ಭರಿಸುವುದು ಹಾಗೂ ಹೊಸ ಶಾಲೆಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಆದಾಯ ಕುಂಠಿತವಾಗಿರುವು-ದರಿಂದ ವೆಚ್ಚ ಭರಿಸಲು ಶುಲ್ಕ ಹೆಚ್ಚಳದ ಮೊರೆ ಹೋಗಿವೆ.

ಸೂರ್ಯೋದಯ: 6:34 ಸೂರ್ಯಾಸ್ತ : 6:29 ಚಂದ್ರೋದಯ: ಸಂ. 7:18 ಚಂದ್ರಾಸ್ತ: ಬೆ. 6:58 | ಬುಧವಾರದ ಉಷ್ಣಾಂಶ : ಗರಿಷ್ಠ 33° ಕನಿಷ್ಠ 20°
ಗುರುವಾರ ● ಮಾರ್ಚ್ 5, 2026
ಗುರುವಾರದ ಉಷ್ಣಾಂಶ 33° ಗರಿಷ್ಠ 20° ಕನಿಷ್ಠ | ಶುಕ್ರವಾರ 32° : 19° | ಶನಿವಾರ 32° : 18° | ಭಾನುವಾರ 32° : 18°
ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ

ರಾಮನಗರ, ಕನಕಪುರಕ್ಕೆ 'ವಜ್ರ ವಿಸ್ತಾರ'

ಪ್ರಜಾವಾಣಿ ವಾರ್ತೆ



ರಾಮನಗರ ಹಾಗೂ ಕನಕಪುರಕ್ಕೆ ಬಿಎಂಟಿಸಿ 'ವಜ್ರ ವಿಸ್ತಾರ' ಹವಾನಿಯಂತ್ರಿತ ಬಸ್ ಸಂಚಾರಕ್ಕೆ ರಾಮಲಿಂಗಾರೆಡ್ಡಿ ಚಾಲನೆ ನೀಡಿದರು

ಬೆಂಗಳೂರು: ಬಿಬಿಎಂಪಿ ಬದಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾಗಿದೆ. ಅದಕ್ಕೆ ಅನುಗುಣವಾಗಿ ಬಿಎಂಟಿಸಿ ಬಸ್ ಮಾರ್ಗಗಳ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ. ಬಿಬಿಎಂಪಿ ವ್ಯಾಪ್ತಿಯಿಂದ 25 ಕಿ.ಮೀ.ವರೆಗೆ ಇದ್ದ ಬಿಎಂಟಿಸಿ ಕಾರ್ಯಾಚರಣೆಯನ್ನು ಈಗ ಜಿಬಿಎ ವ್ಯಾಪ್ತಿಯಿಂದ 40 ಕಿ.ಮೀ.ಗೆ ವಿಸ್ತರಿಸಲಾಗಿದೆ.

ಮೊದಲ ಹಂತದಲ್ಲಿ ಬೆಂಗಳೂರು ನಗರದಿಂದ ರಾಮನಗರ ಹಾಗೂ ಕನಕಪುರಕ್ಕೆ 'ವಜ್ರ ವಿಸ್ತಾರ' ಹವಾನಿಯಂತ್ರಿತ ಬಸ್‌ಗಳ ಸಂಚಾರ ಬುಧವಾರ ಆರಂಭವಾಯಿತು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಬಸ್‌ಗಳ ಕಾರ್ಯಾಚರಣೆಗೆ ಚಾಲನೆ ನೀಡಿದರು.

ಬಿಎಂಟಿಸಿ ಅಧ್ಯಕ್ಷ ವಿ.ಎಸ್. ಆರಾಧ್ಯ, ಉಪಾಧ್ಯಕ್ಷ ನಿಕೇತ್ ರಾಜ್ ಎಂ., ಶಾಸಕ ಎಚ್.ಎ. ಇಕ್ಬಾಲ್ ಹುಸೇನ್, ಬಿಎಂಟಿಸಿ ವ್ಯವಸ್ಥಾಪನ ನಿರ್ದೇಶಕ ಕೆ.ಬಿ. ಶಿವಕುಮಾರ್, ರಾಮನಗರ, ಕನಕಪುರದ ಪ್ರತಿನಿಧಿಗಳು, ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಂಪೇಗೌಡ ಬಸ್ ನಿಲ್ದಾಣದಿಂದ ರಾಮನಗರಕ್ಕೆ 6 ಬಸ್‌ಗಳು ದಿನಕ್ಕೆ 36 ಟ್ರಿಪ್‌ಗಳಲ್ಲಿ ಎಂಆರ್‌ಬಿಎಸ್, ನಾಯಂಡಹಳ್ಳಿ, ರಾಜರಾಜೇಶ್ವರಿನಗರ ಗೇಟ್, ಕೆಂಗೇರಿ, ನೈಸ್ ರಸ್ತೆ ಜಂಕ್ಷನ್ ಮೂಲಕ ಸಂಚರಿಸಲಿವೆ.

ಬನಶಂಕರಿಯಿಂದ ಕನಕಪುರಕ್ಕೆ 8 ಬಸ್‌ಗಳು ದಿನಕ್ಕೆ 48 ಟ್ರಿಪ್‌ಗಳಲ್ಲಿ ಕೋಣನಕುಂಟೆ ಕ್ರಾಸ್, ತಲಗಟ್ಟಪುರ, ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣ, ಕಗ್ಗಲಿಪುರ, ಹಾರೋಹಳ್ಳಿ, ದಯಾನಂದ ಸಾಗರ ಕಾಲೇಜು, ಜೈನ್ ಯುನಿವರ್ಸಿಟಿ ಗೇಟ್ ಮೂಲ ಸಂಚರಿಸಲಿವೆ.

ಎಂ.ಜಿ. ರಸ್ತೆ: ಬ್ಲ್ಯಾಕ್ ಟಾಪಿಂಗ್ ಆರಂಭ

ಸಿ.ಎಂ. ವಿಶೇಷ ಅನುದಾನ ಬಳಕೆ ರಾತ್ರಿ ವೇಳೆಯಲ್ಲಿ ಮಾತ್ರ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ರಸ್ತೆಯಲ್ಲಿ ಬ್ಲ್ಯಾಕ್ ಟಾಪಿಂಗ್ ಕಾಮಗಾರಿ ಬುಧವಾರ ಆರಂಭವಾಗಿದ್ದು, ರಾತ್ರಿ ವೇಳೆಯಲ್ಲಿ ಮಾತ್ರ ಕೆಲಸ ನಡೆಯಲಿದೆ.

ವೈಟ್ ಟಾಪಿಂಗ್ ನಡೆಸಲು ಈ ಹಿಂದೆ ಯೋಜಿಸಲಾಗಿತ್ತು. 45 ದಿನ ವಾಹನ ಸಂಚಾರವನ್ನು ಬದಲಾಯಿಸಲು ನಗರ ಸಂಚಾರ ಪೊಲೀಸರು ಸಮ್ಮತಿ ನೀಡಿರಲಿಲ್ಲ. ಹೀಗಾಗಿ, ಬ್ಲ್ಯಾಕ್ ಟಾಪಿಂಗ್ ಕಾಮಗಾರಿಗೆ ಕೇಂದ್ರ ನಗರ ಪಾಲಿಕೆ ಮುಂದಾಗಿದೆ. ಮುಖ್ಯಮಂತ್ರಿಯವರ ವಿಶೇಷ ಅನುದಾನದಲ್ಲಿ ಮಹಾತ್ಮ ಗಾಂಧಿ ರಸ್ತೆಯಲ್ಲಿ ಬ್ಲ್ಯಾಕ್ ಟಾಪಿಂಗ್ ಕಾಮಗಾರಿ ಮುಂದಿನ 15 ರಾತ್ರಿ ನಡೆಯಲಿದೆ.

'ಮಹಾತ್ಮ ಗಾಂಧಿ ರಸ್ತೆಯ ಅನಿಲ್ ಕುಂಬ್ಳೆ ವೃತ್ತದಿಂದ ಟ್ರಿನಿಟಿ ವೃತ್ತದವರೆಗಿನ 2.2 ಕಿ.ಮೀ. ಉದ್ದದ ರಸ್ತೆಯನ್ನು ಬ್ಲ್ಯಾಕ್ ಟಾಪಿಂಗ್ ಮಾಡಲಾಗುತ್ತದೆ. ಒಂದೇ ಬಾರಿ ಕಾಮಗಾರಿಯನ್ನು ನಡೆಸಲು ಸಾಧ್ಯವಿಲ್ಲ. ಹಂತ ಹಂತವಾಗಿ, ಒಂದು ಭಾಗವನ್ನು ಅಗೆಸಿಕೊಂಡು ಅದನ್ನು 'ಮಿಲ್ಲಿಂಗ್' ಮಾಡಿ, ನಂತರ ಡಾಂಬರ್ ಹಾಕಲಾಗುತ್ತದೆ' ಎಂದು ಕೇಂದ್ರ ನಗರ ಪಾಲಿಕೆಯ ಕಾರ್ಯಪಾಲಕ ಎಂಜಿನಿಯರ್ ಆಸಿಫ್ ತಿಳಿಸಿದರು.

'ವಾಹನ ಸಂಚಾರಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ. ರಸ್ತೆ ಕಾಮಗಾರಿಯನ್ನು ರಾತ್ರಿ ವೇಳೆ ಮಾತ್ರ ಮಾಡಲಾಗುತ್ತದೆ. ಸಂಚಾರ ಪೊಲೀಸರು, ರಾತ್ರಿ 10ರಿಂದ ಬೆಳಗಿನ ಜಾವದವರೆಗೆ ಕಾಮಗಾರಿ ನಡೆಸಲು ಅನುಮತಿ ನೀಡಿದ್ದಾರೆ. ಆದಷ್ಟು ಶೀಘ್ರವೇ ಬ್ಲ್ಯಾಕ್ ಟಾಪಿಂಗ್ ಕಾಮಗಾರಿಯನ್ನು ಮುಗಿಸಲಾಗುತ್ತದೆ' ಎಂದು ಹೇಳಿದರು.

ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಪರಿಶೀಲನೆ ಸಂದರ್ಭದಲ್ಲಿ 'ಮುಖ್ಯಮಂತ್ರಿಯವರ ಅನುದಾನದಲ್ಲಿ ಎಂ.ಜಿ. ರಸ್ತೆ ಸೇರಿದಂತೆ ಎಲ್ಲ ಪ್ರಮುಖ ರಸ್ತೆಗಳನ್ನೂ ಅಭಿವೃದ್ಧಿಗೊಳಿಸಿ, ಗುಂಡಿಮುಕ್ತಗೊಳಿಸಬೇಕು' ಎಂದು ಸೂಚಿಸಿದ್ದರು. ಅದರಂತೆ ಎಂ.ಜಿ. ರಸ್ತೆಯಲ್ಲಿ ಕಾಮಗಾರಿ ಆರಂಭವಾಗಿದೆ.



ಮುಖ್ಯಮಂತ್ರಿ ವಿಶೇಷ ಅನುದಾನದಿಂದ ಬುಧವಾರ ರಾತ್ರಿ ಎಂ.ಜಿ. ರಸ್ತೆ ಬ್ಲ್ಯಾಕ್ ಟಾಪಿಂಗ್ ಕಾಮಗಾರಿ ಕೆಲಸ ಪ್ರಾರಂಭವಾಯಿತು –ಚಿತ್ರ: ಪ್ರಶಾಂತ್ ಎಚ್.ಜಿ.

ಒಳಚರಂಡಿ ವ್ಯವಸ್ಥೆಯಲ್ಲಿ ಬದಲಾವಣೆ ಇಲ್ಲ: ಎಂ.ಜಿ. ರಸ್ತೆಯಲ್ಲಿ ಸುಮಾರು 40 ವರ್ಷಗಳ ಹಿಂದೆ ಅಳವಡಿಸಲಾಗಿರುವ ಒಳಚರಂಡಿ ಮಾರ್ಗವನ್ನು ಬೆಂಗಳೂರು ಜಲಮಂಡಳಿ ಬದಲಾಯಿಸದಿರಲು ನಿರ್ಧರಿಸಿದೆ.

'ವೈಟ್ ಟಾಪಿಂಗ್ ಕಾಮಗಾರಿ ಮಾಡುವ ಯೋಜನೆ ಇದ್ದಾಗ, 'ಯುಟಿಲಿಟಿ ಸೌಲಭ್ಯಗಳನ್ನು' ಪ್ರತ್ಯೇಕಗೊಳಿಸುವುದು ಅಗತ್ಯವಾಗಿತ್ತು. ಆದರೆ, ಈ ಯೋಜನೆಯನ್ನು ಕೈಬಿಡಲಾಗಿದೆ. ಎಂ.ಜಿ. ರಸ್ತೆಯ ಒಂದರೆಡು ಭಾಗಗಳಲ್ಲಿ ಪೈಪ್ ಸೋರಿಕೆ ಸಮಸ್ಯೆ ಇತ್ತು. ಅದನ್ನು ಸರಿಪಡಿಸಲಾಗಿದ್ದು, ಬ್ಲ್ಯಾಕ್ ಟಾಪಿಂಗ್ ಕಾಮಗಾರಿ ನಡೆಸಬಹುದು' ಎಂದು ಜಲಮಂಡಳಿ ಎಂಜಿನಿಯರ್ ತಿಳಿಸಿದರು.

ಸೆ.4ರಿಂದ 'ಅಕ್ಕ' ರಜತ ಮಹೋತ್ಸವ

ಬೆಂಗಳೂರು: ಅಮೆರಿಕ ಕನ್ನಡ ಕೂಟಗಳ ಆಗರವು (ಅಕ್ಕ) ಸೆಪ್ಟೆಂಬರ್ 4ರಿಂದ 6ರವರೆಗೆ ಅಮೆರಿಕದ ಫಿಲಡೆಲ್ಫಿಯಾದಲ್ಲಿ ರಜತ ಮಹೋತ್ಸವ ಸಮಾರಂಭ ಹಮ್ಮಿಕೊಂಡಿದೆ.

'ಇದು ಅಮೆರಿಕದ ಕನ್ನಡಿಗರ ಸಂಸ್ಥೆಯಾಗಿದ್ದು, 25 ವರ್ಷಗಳಿಂದ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆಯನ್ನು ಉತ್ತೇಜಿಸುವ ಕಾರ್ಯದಲ್ಲಿ ನಿರತವಾಗಿದೆ. ರಜತ ಮಹೋತ್ಸವ ಸಂಭ್ರಮವು ವಿಶ್ವದ ಕನ್ನಡಿಗರ ಏಕತೆಯ ಪ್ರತೀಕವಾಗಿದ್ದು, ಅಮೆರಿಕದ ವಿವಿಧ ರಾಜ್ಯಗಳಿಂದ ಹಾಗೂ ಕರ್ನಾಟಕದಿಂದ ವಿವಿಧೆಡೆಯಿಂದ ಕನ್ನಡಾಭಿಮಾನಿಗಳು ಭಾಗವಹಿಸಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾಣಿಜ್ಯ ಹಾಗೂ ಉದ್ಯಮಿಗಳ ಸಮ್ಮೇಳನ, ಕನ್ನಡ ಚಲನಚಿತ್ರ ಹಾಗೂ ನಾಟಕಗಳ ಪ್ರದರ್ಶನ ಸೇರಿ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು 'ಅಕ್ಕ'ದ ಅಧ್ಯಕ್ಷ ಮಧು ರಂಗಯ್ಯ ತಿಳಿಸಿದ್ದಾರೆ. 'ಕೆಲವೇ ದಿನಗಳಲ್ಲಿ ಕಾರ್ಯಕ್ರಮದ ರೂಪುರೇಷೆ ಹಾಗೂ ನೋಂದಣಿ ವಿವರಗಳನ್ನು ಪ್ರಕಟಿಸಲಾಗುವುದು' ಎಂದು ಅವರು ಹೇಳಿದ್ದಾರೆ.

ಮಹಾ ರುದ್ರಾಕ್ಷಿ ಪ್ರದರ್ಶನ, ಮಾರಾಟ



ಬೆಂಗಳೂರು: ನಗರದ ಹೋಟೆಲ್ ಲಿ ಫೋಲೀಗೆಯಲ್ಲಿ ಹೈದರಾಬಾದ್ ಮೂಲದ ಇಂಡಸ್-ನೇಪಾಳ ರುದ್ರಾಕ್ಷ ಸಂಸ್ಥೆ ಇದೇ 9ರವರೆಗೆ ನೇಪಾಳದ ರುದ್ರಾಕ್ಷಿಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಿದೆ.

ಈ ಮೇಳದಲ್ಲಿ ವಿರಳವಾಗಿ ದೊರಕುವ ರತ್ನದ ಹರಳುಗಳು ಸಹ ಲಭ್ಯ ಇವೆ. ಜಗತ್ತಿನಲ್ಲಿ ಅತ್ಯಂತ ವಿರಳವಾಗಿರುವ ದುಂಡುಮುಖದ ಏಕಮುಖಿ ರುದ್ರಾಕ್ಷಿಗಳು (ಸುಮಾರು ₹4.5 ಲಕ್ಷ ಬೆಲೆಯುಳ್ಳ) ಲಭ್ಯವಿವೆ.

ಇಂಡಸ್-ನೇಪಾಳ ಸಂಸ್ಥೆಯ ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ ಮಾತನಾಡಿ, 'ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಅಸಲಿ ಹಾಗೂ ನಕಲಿ ರುದ್ರಾಕ್ಷಿಗಳ ಭಿನ್ನತೆ ತಿಳಿಸಲಾಗುವುದು.


ವ್ಯಕ್ತಿಯ ಜನ್ಮದಿನಾಂಕ ಆಧರಿಸಿ ಯಾವ ರಾಶಿಗೆ ಯಾವ ಮುಖದ ರುದ್ರಾಕ್ಷಿ ಸೂಕ್ತ ಎಂದು ನಿರ್ಧರಿಸಿ ಆ ಪ್ರಕಾರದ ರುದ್ರಾಕ್ಷಿ ಕೊಡಲಾಗುವುದು. ಮಾಂಸಾಹಾರಿಗಳು ಸಹ ಧರಿಸಬಹುದು. ಮೇಳವು ಬೆಳಿಗ್ಗೆ 10-30 ರಿಂದ ರಾತ್ರಿ 8ರವರೆಗೆ ತೆರೆದಿರುತ್ತದೆ' ಎಂದು ತಿಳಿಸಿದ್ದಾರೆ.

ಸ್ಥಳ: ಹೋಟೆಲ್ ಲಿ ಫೋಲೀಗೆ, ಸಂಗಮ ಸರ್ಕಲ್ ಬಸ್‌ಸ್ಟಾಪ್ ಹತ್ತಿರ, ಮೆಟ್ರೊ ಪಿಲ್ಲರ್ ಇಪಿ-09 ಎದುರು, 46ನೇ ಅಡ್ಡರಸ್ತೆ, 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, ಬೆಂಗಳೂರು. ಸಂಪರ್ಕ: 7097296666

ಜೆಡಿಎಸ್: ವಾರದೊಳಗೆ ಅಭ್ಯರ್ಥಿಗಳ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ಐದು ನಗರ ಪಾಲಿಕೆಗಳ 369 ವಾರ್ಡ್‌ಗಳಲ್ಲಿ ಸ್ಪರ್ಧಿಸುವ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ವಾರದ ಒಳಗೆ ಅಂತಿಮಗೊಳಿಸಲು ಜೆಡಿಎಸ್ ನಿರ್ಧರಿಸಿದೆ.



ರಮೇಶ್ ಗೌಡ

ಜಿಬಿಎ ಐದು ಪಾಲಿಕೆಗಳು ಹಾಗೂ ವಿಧಾನಸಭೆ ಕ್ಷೇತ್ರಗಳ ಅಧ್ಯಕ್ಷರ ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಜೆಡಿಎಸ್ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, 'ಚುನಾವಣೆಗೆ ಸ್ಪರ್ಧಿಸುವ ಪಕ್ಷದ ಅಭ್ಯರ್ಥಿಗಳನ್ನು ಗುರುತಿಸಲು ಒಂದು ವಾರದ ಗಡುವು ನೀಡಲಾಗಿದೆ. ಅಂತಿಮ ಪಟ್ಟಿ ಸಿದ್ಧವಾದ ನಂತರ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಪರಿಶೀಲಿಸಲಿದ್ದಾರೆ' ಎಂದರು.

ಎಚ್.ಡಿ.ದೇವೇಗೌಡರು, ಕುಮಾರಸ್ವಾಮಿ ಅವರ ಸೂಚನೆಯಂತೆ, ಗೆಲ್ಲುವ ಸಾಮರ್ಥ್ಯ ಇರುವ, ಪಕ್ಷಕ್ಕಾಗಿ ದುಡಿದ ಅಭ್ಯರ್ಥಿಗಳನ್ನು ವಾರ್ಡ್‌ವಾರು ಗುರುತಿಸಲಾಗುತ್ತಿದೆ. ಪಟ್ಟಿ ಅಂತಿಮವಾದ ನಂತರ ಬಿಜೆಪಿ ಜತೆಗಿನ ಮೈತ್ರಿ ಗಮನದಲ್ಲಿಟ್ಟುಕೊಂಡು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗುವುದು ಎಂದು ಹೇಳಿದರು.

ಮತಗಟ್ಟೆ ಹಾಗೂ ವಾರ್ಡ್‌ಮಟ್ಟದಲ್ಲಿ ಸದಸ್ಯತ್ವ ನೋಂದಣಿ ಅಭಿಯಾನವನ್ನು ಚುರುಕುಗೊಳಿಸಲಾಗಿದೆ. ಬೆಂಗಳೂರಿನಲ್ಲಿ ಶೀಘ್ರ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಪಕ್ಷದ ವರಿಷ್ಠರು ಸೂಚಿದ್ದಾರೆ. ಜಿಬಿಎ ಐದು ಪಾಲಿಕೆಗಳು, ವಿಧಾನಸಭೆ ಕ್ಷೇತ್ರಗಳ ಅಧ್ಯಕ್ಷರು ಪರಸ್ಪರ ಸಮನ್ವಯದಿಂದ ಕೆಲಸ ಮಾಡಲು ಸೂಚಿಸಲಾಗಿದೆ ಎಂದರು.

ಸಿಸಿಎಲ್ ಮಗುವಿನ ಹಕ್ಕು: ಹೈಕೋರ್ಟ್

ಬೆಂಗಳೂರು: 'ಒಬ್ಬ ಉದ್ಯೋಗಿಗೆ ಯಾವುದೇ ರೀತಿಯ ರಜೆಗಳನ್ನು ನೀಡುವ ವಿವೇಚನಾಧಿಕಾರ ಉದ್ಯೋಗದಾತರಿಗೆ ಇದೆ. ಆದರೆ, ಮಕ್ಕಳ ಆರೈಕೆ ರಜೆ (ಸಿಸಿಎಲ್) ಕೋರಿಕೆ ಬಂದಾಗ ಅದನ್ನು ನಿರಾಕರಿಸದೆ ಆದ್ಯತೆ ಮೇರೆಗೆ ರಜೆ ಮಂಜೂರು ಮಾಡಬೇಕು. ಸಿಸಿಎಲ್ ಎಂಬುದು ಮಗುವಿನ ಹಕ್ಕು' ಎಂದು ಹೈಕೋರ್ಟ್ ಆದೇಶಿಸಿದೆ.

ರಜೆ ನೀಡುವಂತೆ ಕೇಂದ್ರೀಯ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಕಳೆದ ಫೆ. 5ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಕೇಂದ್ರ ಸರ್ಕಾರದ, 'ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸಡ್ ಕಂಪ್ಯೂಟಿಂಗ್'ನಲ್ಲಿ (ಸಿ-ಡಾಕ್) ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಮೂಲ ಅರ್ಜಿದಾರರಾದ ಕವಿತಾ ವಡ್ಡೆ ಅವರಿಗೆ ಫೆಬ್ರುವರಿ 6ರಿಂದ ಮೇ 20ರವರೆಗೆ ಚೈಲ್ಡ್ ಕೇರ್ ಲೀವ್(ಸಿಸಿಎಲ್) ನೀಡುವಂತೆ ನ್ಯಾಯಪೀಠ ನಿರ್ದೇಶಿಸಿದೆ.

'ತಾಯಿಗೆ ರಜೆ ನಿರಾಕರಿಸಿದರೆ ಅದು ಮಕ್ಕಳ ಮೇಲೆ ಒತ್ತಡಕ್ಕೆ ಕಾರಣವಾಗಬಹುದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಸಿಎಟಿ ಆದೇಶವನ್ನು ಎತ್ತಿಹಿಡಿದಿದೆ.

'ರಜೆ ಮಂಜೂರು ಮಾಡುವುದು ಉದ್ಯೋಗದಾತರ ವಿವೇಚನೆಗೆ ಬಿಟ್ಟಿದ್ದು, ಸಿಸಿಎಲ್ ವಿಚಾರ ಬಂದಾಗ ಅದರಲ್ಲಿ ವಿವೇಚನಾಧಿಕಾರದ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಅದು ಮಕ್ಕಳ ಆರೈಕೆಗೆಂದೇ ಮೀಸಲಾಗಿದೆ. ಹಾಗಾಗಿ, ತಾಯಿಯ ಸಿಸಿಎಲ್ ಕೋರಿಕೆಯನ್ನು ನಿರಾಕರಿಸಲು ಆಗದು' ಎಂದು ಆದೇಶಿಸಿದೆ.


ನಗರದಲ್ಲಿ ಇಂದು

ಸಂತ ಜ್ಞಾನೇಶ್ವರ ಮಹಾರಾಜರ ಜನ್ಮೋತ್ಸವ, ಸಂತ ತುಕಾರಾಮ ಮಹಾರಾಜರ ಸದೇಹ ವೈಕುಂಠ ಗಮನದ ಮಹೋತ್ಸವ ಜ್ಞಾನೇಶ್ವರಿ ಪಾರಾಯಣ: ಆಯೋಜನೆ ಮತ್ತು ಸ್ಥಳ: ವಿಠೋಬಾ (ಪಾಂಡುರಂಗ) ದೇವಸ್ಥಾನ, ಬಸೆಟ್ಟಿಪೇಟೆ, ಬೆಳಿಗ್ಗೆ 6.30ರಿಂದ

'ಗದಾಯುದ್ಧ' ನಾಟಕ ಪ್ರದರ್ಶನ: ಆಯೋಜನೆ: ಹರಿಹರಸುತ ಕಲಾ ಮಂಡಲಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಮಧ್ಯಾಹ್ನ 3

'ಮನರೇಗಾ ವರ್ಸಸ್ ವಿಬಿ ರಾಮ್‌ಜಿ ಕಟು ವಾಸ್ತವಗಳು' ಸಂವಾದ: ಜಾನ್ ಡ್ರೀಝ್, ಆಯೋಜನೆ: ಮನರೇಗಾ ರಕ್ಷಣಾ ಒಕ್ಕೂಟ ಕರ್ನಾಟಕ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 4.30ರಿಂದ


ಆರ್. ಹಂಸಾ ಅವರ 'ಮಳೆರಾಯ ನಕ್ಕನು' ಪುಸ್ತಕ ಬಿಡುಗಡೆ: ಆರ್. ಸುನಂದಮ್ಮ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಅತಿಥಿ: ವೀರಕಪುತ್ರ ಶ್ರೀನಿವಾಸ್, ಪುಸ್ತಕ ಪರಿಚಯ: ಶಾರದಾ ವಿ. ಮೂರ್ತಿ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಆರ್. ಸುನಂದಮ್ಮ

ಭರತನಾಟ್ಯ ಪ್ರದರ್ಶನ: ಶ್ರೀಕಂಠೇಶ್ವರ ಕಲಾ ಕೇಂದ್ರ ವಿದ್ಯಾರ್ಥಿಗಳು, ನಿರ್ದೇಶನ: ಗೌರಿ ಸಾಗರ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

'ಪಾಲಕತ್ವದ ಜವಾಬ್ದಾರಿ' ಉಪನ್ಯಾಸ: ಗುರುರಾಜ ಕರಜಗಿ, ಆಯೋಜನೆ ಮತ್ತು ಸ್ಥಳ: ವಿದ್ಯಾ ಸಂಸ್ಕೃತಿ ಶಾಲೆ, 16ನೇ ಅಡ್ಡ ರಸ್ತೆ, ಗಾಯತ್ರಿದೇವಿ ಪಾರ್ಕ್ (ಎಕ್ಸಟೆನ್ಶನ್) ವೈಯಾಲಿ ಕಾವಲ್, ಸಂಜೆ 6ರಿಂದ



ಗುರುರಾಜ

ಹರಿದಾಸ ಮಂಜರಿ: ಗಾಯನ: ಸಂಗೀತಾ ಬಾಲು, ಕೀ–ಬೋರ್ಡ್: ಕುಮಾರ್, ಮೃದಂಗ: ಬಾಲಸುಬ್ರಹ್ಮಣ್ಯ, ಖಂಜೀರ: ಮನೋಜ್, ಜಂಬೆ: ಕೃಷ್ಣಕುಮಾರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ, ಆರ್.ಕೆ. ಲೇಔಟ್, ಪದ್ಮನಾಭನಗರ, ಸಂಜೆ 6.30

ದಾಸವಾಣಿ: ಗಾಯನ: ವಿದ್ಯಾಶ್ರೀ ಪವನ್, ಪಿಟೀಲು: ಎಂ.ಎನ್. ಸತ್ಯನಾರಾಯಣ, ಮೃದಂಗ: ಶ್ರೀನಿವಾಸ ಅನಂತರಾಮಯ್ಯ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಆರನೇ ಹಂತ, ಬನಶಂಕರಿ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಅಂತ್ಯಕ್ರಿಯೆ ವೇಳೆ ಕೃತ್ಯ ಬಯಲು

ಮನೆ ಖಾಲಿ ಮಾಡುವ ವಿಚಾರಕ್ಕೆ ಗಲಾಟೆ: ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಖಾಲಿ ಮಾಡುವ ವಿಚಾರಕ್ಕೆ ಸೋದರ ಮಾವ ಹಾಗೂ ಅಳಿಯನ ನಡುವೆ ನಡೆದ ಗಲಾಟೆಯು ಕೊಲೆಯಲ್ಲಿ ಅಂತ್ಯವಾಗಿದೆ.

ಆಸ್ಟಿನ್‌ಟೌನ್ ನಿವಾಸಿ ಇನಾಯತ್ ಪಾಷಾ(52) ಕೊಲೆ ಆದವರು. ಕೃತ್ಯ ಎಸಗಿದ ಇನಾಯತ್ ಅವರ ಸೋದರ ಅಳಿಯ, ಟೆಕಿ ಮಸ್ರೂರ್ ಅಹಮದ್ (22) ಅವರನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸಾಫ್ಟ್‌ವೇರ್ ಕಂಪನಿಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.


ಮಸ್ರೂರ್ ಅಹಮದ್

ಆರೋಪಿ ಮಾರ್ಚ್ 1ರಂದು ಇನಾಯತ್ ಪಾಷಾ ಅವರ ಮೇಲೆ ಹಲ್ಲೆ ನಡೆಸಿ, ಕೊಲೆ ಮಾಡಿ ಆಕಸ್ಮಿಕ ಸಾವು ಎಂದು ಬಿಂಬಿಸಿದ್ದ. ಅಂತ್ಯಕ್ರಿಯೆಗೆ ಸಿದ್ಧತೆ ನಡೆಸಿದ್ದ ಸಂದರ್ಭದಲ್ಲಿ ಕೊಲೆ ಎಂಬುದು ಗೊತ್ತಾಗಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

11 ವರ್ಷಗಳ ಹಿಂದೆ ತನ್ನ ಅಕ್ಕ ಉಸ್ನಾಬಾನು ಮತ್ತು ಭಾವ ಮುಬಾರಕ್ ಪಾಷಾ ಅವರಿಗೆ ಸೇರಿದ ನೆಲಮಹಡಿಯಲ್ಲಿ ಇರುವ ಮನೆಯನ್ನು ₹3.5 ಲಕ್ಷಕ್ಕೆ ಭೋಗ್ಯಕ್ಕೆ ಪಡೆದು, ಪತ್ನಿ ಮತ್ತು ಮಗನ ಜತೆಗೆ ಇನಾಯತ್ ಪಾಷಾ ವಾಸವಾಗಿದ್ದರು. ಆದರೆ, ಕೌಟುಂಬಿಕ ವಿಚಾರಕ್ಕೆ ಪತ್ನಿ ಕೆಲವು ವರ್ಷಗಳ ಹಿಂದೆ ದೂರವಾಗಿದ್ದರು. ಹೀಗಾಗಿ ಇನಾಯತ್ ಪಾಷಾ ಒಬ್ಬರೆ ಮನೆಯಲ್ಲಿ ವಾಸವಾಗಿದ್ದರು ಎಂದು ಮೂಲಗಳು ಹೇಳಿವೆ.

ಮನೆ ಖಾಲಿ ಮಾಡುವಂತೆ ಒತ್ತಡ: ಉಸ್ನಾಬಾನು ಮತ್ತು ಅವರ ಪುತ್ರ ಮಸ್ರೂರ್ ಅಹಮದ್ ಅವರು ಮನೆ ಖಾಲಿ ಮಾಡುವಂತೆ ಇನಾಯತ್ ಪಾಷಾ ಅವರಿಗೆ ಸೂಚಿಸಿದ್ದರು. ಆದರೆ, ಇನಾಯತ್ ಪಾಷಾ ಅವರು 'ತನ್ನ ಹಣ ಕೊಡಿ ವಾಪಸ್ ಹೋಗುತ್ತೇನೆ' ಎಂದಿದ್ದರು. ಹಣ ಕೊಡಲು ತಾಯಿ ಹಾಗೂ ಮಗ ಹಿಂದೇಟು ಹಾಕಿ, ಇನಾಯತ್ ಪಾಷಾ ಅವರ ಜತೆಗೆ ಜಗಳ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಮಾರ್ಚ್ 1ರಂದು ಸಂಜೆ 5 ಗಂಟೆ ಸುಮಾರಿಗೆ ಇನಾಯತ್ ಅವರಿದ್ದ ಮನೆ ಬಳಿಗೆ ಆರೋಪಿ ಹೋಗಿ ಮನೆ ಖಾಲಿ ಮಾಡುವಂತೆ ಸೂಚಿಸಿದ್ದರು. ಆದರೆ, ಮದ್ಯದ ಅಮಲಿನಲ್ಲಿದ್ದ ಇನಾಯತ್, 'ಮನೆ ಖಾಲಿ ಮಾಡುವುದಿಲ್ಲ' ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಗಲಾಟೆ ವಿಕೋಪಕ್ಕೆ ಹೋಗಿ ಇನಾಯತ್ ಪಾಷಾ ಅವರನ್ನು ಮಸ್ರೂರ್ ಅಹಮದ್ ಕೊಲೆ ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಇನಾಯತ್ ಪುತ್ರ ಸೈಯದ್ ಮೊಹಮ್ಮದ್ ಅವರಿಗೆ ಕರೆ ಮಾಡಿದ್ದ ಆರೋಪಿ, 'ನಿಮ್ಮ ತಂದೆ ಮನೆಯಲ್ಲಿ ಮಕಾಡೆ ಸ್ಥಿತಿಯಲ್ಲಿ ಬಿದ್ದಿದ್ದು, ಎಚ್ಚರಿಸಿದ್ದರೂ ಮೇಲಕ್ಕೆ ಏಳುತ್ತಿಲ್ಲ' ಎಂದು ಹೇಳಿದ್ದರು. ಅದನ್ನು ನಂಬಿದ್ದ ಪುತ್ರ ಸ್ಥಳಕ್ಕೆ ಬಂದಿದ್ದರು. ಅಂತ್ಯಕ್ರಿಯೆಗೆ ಸಿದ್ದತೆ ನಡೆಸಿದ್ದರು. ಅಷ್ಟರಲ್ಲಿ ಇನಾಯತ್ ಅವರ ಸಂಬಂಧಿ ಅತಾವುಲ್ಲಾ ಷರೀಫ್ ಅವರು ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು.

ಅದಾದ ಮೇಲೆ ಪೊಲೀಸರಿಗೆ ದೂರು ನೀಡಲಾಗಿತ್ತು. ಪೊಲೀಸರು ತನಿಖೆ ನಡೆಸಿದಾಗ ಕೊಲೆ ಎಂಬುದು ಗೊತ್ತಾಗಿತ್ತು.

ಕೃತ್ಯ ಒಪ್ಪಿಕೊಂಡ ಆರೋಪಿ

ವಿವೇಕನಗರ ಠಾಣೆಯ ಪೊಲೀಸರಿಗೆ ಸೈಯದ್ ಮೊಹಮ್ಮದ್ ಅವರು ದೂರು ನೀಡಿದ್ದರು. ಸ್ಥಳಕ್ಕೆ ಭೇಟಿ ನೀಡಿದ್ದ ಪೊಲೀಸರು, 'ಮೃತರ ಸಾವಿನ ಬಗ್ಗೆ ಅನುಮಾನವಿದ್ದು, ಮರಣೋತ್ತರ ಪರೀಕ್ಷೆ ನಡೆಸಬೇಕು' ಎಂದು ಹೇಳಿದ್ದರು. ಬಳಿಕ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

ಮುಖ, ಕಣ್ಣು, ತುಟಿ ಹಾಗೂ ಎದೆಯ ಭಾಗಕ್ಕೆ ಬಲವಾದ ಪೆಟ್ಟು ಬಿದ್ದಿದೆ ಎಂದು ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ವೈದ್ಯರು ಉಲ್ಲೇಖಿಸಿದ್ದರು. ಮಸ್ರೂರ್ ಅಹಮದ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೃತ್ಯ ಎಸಗಿರುವುದನ್ನು ಒಪ್ಪಿಕೊಂಡಿದ್ದರು ಎಂದು ತನಿಖಾ ಮೂಲಗಳು ತಿಳಿಸಿವೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಮಾಹಿತಿ

ಅಕ್ರಮ ವಲಸಿಗರ ಪತ್ತೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಮಲೆನಾಡು ಜಿಲ್ಲೆಗಳ ಕಾಫಿ ಎಸ್ಟೇಟ್‌ಗಳಲ್ಲಿ ಅಕ್ರಮ ವಲಸಿಗರು ಕೆಲಸ ಮಾಡುತ್ತಿದ್ದಾರೆ ಎನ್ನುವ ಮಾಹಿತಿಯಿದೆ. ಅಕ್ರಮ ವಲಸಿಗರನ್ನು ಪತ್ತೆಹಚ್ಚಿ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಯಾ ಜಿಲ್ಲೆಗಳ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಹೇಳಿದರು.

ಬೆಂಗಳೂರು ಪ್ರೆಸ್ ಕ್ಲಬ್ ಬುಧವಾರ ಇಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, 'ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಪರಿಶೀಲನಾ ಕಾರ್ಯಗಳು ನಡೆಯುತ್ತಿವೆ' ಎಂದು ಹೇಳಿದರು.

'ದಾಖಲೆಗಳನ್ನು ಪರಿಶೀಲಿಸಿ ಬೆಂಗಳೂರಿನಲ್ಲಿ ಮನೆಗಳನ್ನು ಬಾಡಿಗೆಗೆ ನೀಡಬೇಕು. ಮನೆಯ ಮಾಲೀಕರು ಎಚ್ಚರಿಕೆ ವಹಿಸಬೇಕು' ಎಂದು ಹೇಳಿದರು.

ಎಎನ್‌ಟಿಎಫ್‌ಗೆ ಸಿಬ್ಬಂದಿಯ ಬಲ: ಮಾದಕ ವಸ್ತು (ಡ್ರಗ್ಸ್) ಪೂರೈಕೆ, ಮಾರಾಟ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಮಾದರಿಯಲ್ಲಿಯೇ ರಾಜ್ಯದಲ್ಲೂ 'ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ' (ಎಎನ್‌ಟಿಎಫ್) ಅಸ್ತಿತ್ವಕ್ಕೆ ತರಲಾಗಿದೆ. ಆ ಪಡೆಗೆ 66 ಸಿಬ್ಬಂದಿಯನ್ನು ನೇಮಿಸಲಾಗಿದೆ ಎಂದು ಹೇಳಿದರು.

'ಡ್ರಗ್ಸ್ ವಿರುದ್ಧ ಸಮರದ ರೀತಿಯಲ್ಲೇ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದುವರೆಗೂ ಪೂರೈಕೆದಾರರು, ಪೆಡ್ಲರ್‌ಗಳನ್ನು ಮಾತ್ರ ಪತ್ತೆ ಮಾಡಿ ಕ್ರಮ ತೆಗೆದುಕೊಳ್ಳಲಾಗುತ್ತಿತ್ತು. ಎಎನ್‌ಟಿಎಫ್ ಸ್ಥಾಪನೆಯಾದ ಮೇಲೆ ಡ್ರಗ್ಸ್ ತಯಾರಕರನ್ನೂ ಪತ್ತೆ ಹಚ್ಚುತ್ತಿದ್ದೇವೆ. 2024ರಲ್ಲಿ 6,800, 2025ರಲ್ಲಿ ನಾಲ್ಕು ಸಾವಿರ ಡ್ರಗ್ಸ್ ಪ್ರಕರಣಗಳು ದಾಖಲಾಗಿದ್ದವು. ಈ ವರ್ಷ ಎರಡೇ ತಿಂಗಳಲ್ಲಿ 2,378 ಪ್ರಕರಣ ದಾಖಲು ಮಾಡಲಾಗಿದೆ. ಇದೇ ರೀತಿ ಕಾರ್ಯಾಚರಣೆ ನಡೆದರೆ, ಈ ವರ್ಷ 15 ಸಾವಿರಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗುವ ಸಾಧ್ಯತೆಯಿದೆ. ಪೆಡ್ಲರ್, ಪೂರೈಕೆದಾರರ, ಉತ್ಪಾದಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ದಂಧೆಕೋರರನ್ನು ಮಟ್ಟ ಹಾಕಲಾಗುವುದು' ಎಂದು ಹೇಳಿದರು.


'ಇಲಾಖೆಯಲ್ಲಿ ತಂತ್ರಜ್ಞಾನದ ಬಳಕೆ ಹೆಚ್ಚಿಸಲಾಗಿದೆ. ಸಂಚಾರ ನಿಯಮ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರಂಭದಲ್ಲಿ ವಾಹನ ತಡೆದು ದಂಡ ಹಾಕಲಾಗುತ್ತಿತ್ತು. ಆದರೆ, ಈಗ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರತಿನಿತ್ಯ 40 ಸಾವಿರ ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ಪತ್ತೆ ಹಚ್ಚಲಾಗುತ್ತಿದೆ. ತಂತ್ರಜ್ಞಾನ ಇಲ್ಲದಿದ್ದರೆ ಆ ಕೆಲಸಗಳಿಗೆ ಸಿಬ್ಬಂದಿಯನ್ನೇ ಬಳಕೆ ಮಾಡಿಕೊಳ್ಳಬೇಕಿತ್ತು' ಎಂದರು.

'ಪ್ರಕರಣಗಳ ತನಿಖೆ, ಆರೋಪಿಗಳ ಪತ್ತೆಕಾರ್ಯದಲ್ಲೂ ತಂತ್ರಜ್ಞಾನ ಪ್ರಧಾನ ಪಾತ್ರ ವಹಿಸುತ್ತಿದೆ. ಸಿಸಿಟಿವಿ ಕ್ಯಾಮೆರಾ ಬಂದ ಮೇಲೆ ಪೊಲೀಸರ ಕೆಲಸ ಮತ್ತಷ್ಟು ಸರಳ ಆಗಿದೆ. ಜತೆಗೆ, ತಂತ್ರಜ್ಞಾನ ಬೆಳೆದಂತೆ ಸೈಬರ್ ಅಪರಾಧ ಪ್ರಕರಣಗಳೂ ಹೆಚ್ಚಾಗಿವೆ. 46 ಮಾದರಿಯ ಸೈಬರ್ ಅಪರಾಧ ಪ್ರಕರಣಗಳಿವೆ. ಆರೋಪಿಗಳ ಪತ್ತೆಗೆ ಪೊಲೀಸರಿಗೂ ನಿರಂತರವಾಗಿ ತರಬೇತಿ ನೀಡಲಾಗುತ್ತಿದೆ' ಎಂದು ಪ್ರಶ್ನೆಯೊಂದಕ್ಕೆ ಸಲೀಂ ಉತ್ತರಿಸಿದರು.

ಬೆಂಗಳೂರಿನಲ್ಲಿ ವಾಹನ ದಟ್ಟಣೆ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಗೊರಗುಂಟೆಪಾಳ್ಯದಲ್ಲಿ ವಾಹನ ದಟ್ಟಣೆ ನಿಯಂತ್ರಣಕ್ಕೆ ಹೊಸ ವ್ಯವಸ್ಥೆ ಜಾರಿಗೆ ತರಲಾಗುವುದು ಎಂದರು.

ಪ್ರೆಸ್ ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಉಪಸ್ಥಿತರಿದ್ದರು.

ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ


ಎಂ.ಎ. ಸಲೀಂ

'ಭ್ರಷ್ಟಾಚಾರ, ಕರ್ತವ್ಯಲೋಪ ಎಸಗಿದ ಪೊಲೀಸ್ ಸಿಬ್ಬಂದಿ, ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಎಂ.ಎ.ಸಲೀಂ ಹೇಳಿದರು. 'ಸಿವಿಲ್ ಪ್ರಕರಣಗಳಲ್ಲಿ ಪೊಲೀಸರು ಮಧ್ಯ ಪ್ರವೇಶಿಸು ವಂತಿಲ್ಲ. ಇಂತಹ ಪ್ರಕರಣಗಳಲ್ಲಿ ನ್ಯಾಯ ಕೇಳಿಕೊಂಡು ಠಾಣೆಗೆ ಬಂದವರಿಗೆ ಮಾರ್ಗದರ್ಶನ ನೀಡಬಹುದು. ಆಗ, ಸಾರ್ವಜನಿಕರಲ್ಲಿ ಪೊಲೀಸರ ಮೇಲೆ ನಂಬಿಕೆ, ವಿಶ್ವಾಸ ಬರಲಿದೆ' ಎಂದು ಹೇಳಿದರು.

ಅಡುಗೆ ವಿಚಾರಕ್ಕೆ ಅತ್ತೆ ಜತೆ ಗಲಾಟೆ: ಸೊಸೆ ಆತ್ಮಹತ್ಯೆ

ಬೆಂಗಳೂರು: ಅಡುಗೆ ಮಾಡುವ ವಿಚಾರಕ್ಕೆ ಅತ್ತೆಯ ಜತೆ ನಡೆದ ಗಲಾಟೆಯಿಂದ ನೊಂದ ಸೊಸೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಬ್ಬಿಗೆರೆಯಲ್ಲಿ ಘಟನೆ ನಡೆದಿದೆ.

ಸುಷ್ಮಾ(35) ಆತ್ಮಹತ್ಯೆ ಮಾಡಿಕೊಂಡ ಟೆಕಿ. ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಸುಷ್ಮಾ ಅವರು ಐದು ವರ್ಷಗಳ ಹಿಂದೆ ಪುನೀತ್ ಕುಮಾರ್ ಅವರನ್ನು ಮದುವೆ ಆಗಿದ್ದರು. ದಂಪತಿಗೆ ನಾಲ್ಕು ವರ್ಷದ ಪುತ್ರ ಇದ್ದಾನೆ.

'ಮನೆಯಲ್ಲಿ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆಗಳು ನಡೆಯುತ್ತಿದ್ದವು. ಅತ್ತೆ ಕಲ್ಪನಾ ಅವರೊಂದಿಗೆ ಮಂಗಳವಾರ ಅಡುಗೆ ಮಾಡುವ ವಿಚಾರದಲ್ಲಿ ವಾಗ್ವಾದ ಉಂಟಾಗಿತ್ತು. ಗಲಾಟೆ ವಿಕೋಪಕ್ಕೆ ಹೋದ ಮೇಲೆ ನೊಂದುಕೊಂಡು ಸುಷ್ಮಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಸುಷ್ಮಾ ಕುಟುಂಬಸ್ಥರು ಆರೋಪಿಸಿದ್ದಾರೆ.

'ವರದಕ್ಷಿಣೆ ಕಿರುಕುಳ ಸಂಬಂಧ ಪುನೀತ್ ಕುಮಾರ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುವುದು. ಪ್ರಕರಣದ ಸಂಬಂಧ ಕಲ್ಪನಾ ಅವರನ್ನೂ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

ಸೋಲದೇವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೈದ್ಯಕೀಯ ಸೀಟು ಕೊಡಿಸುವುದಾಗಿ ನಂಬಿಸಿ ₹25 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಂಬಿಬಿಎಸ್ ಸೀಟು ಕೊಡಿಸುವುದಾಗಿ ನಂಬಿಸಿ, ಯುವತಿಯಿಂದ ₹25 ಲಕ್ಷ ಪಡೆದು ವಂಚಿಸಿರುವ ಆರೋಪದಡಿ ನಾಲ್ವರ ವಿರುದ್ಧ ಬನಶಂಕರಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಯೇಷಾ ಖಥುಮ್ ಎಂಬ ವಿದ್ಯಾರ್ಥಿನಿಗೆ ಎಂಬಿಬಿಎಸ್ ಸೀಟು ಕೊಡಿಸುವುದಾಗಿ ನಂಬಿಸಿದ್ದ ಕೆ.ಪಿ.ಶರತ್ ಸೇರಿದಂತೆ ನಾಲ್ವರ ವಿರುದ್ಧ ಬನಶಂಕರಿ ಠಾಣೆಯಲ್ಲಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 318(4), 318(2) ಸೇರಿ ಒಟ್ಟು 8 ಸೆಕ್ಷನ್‌ಗಳಡಿ ಪ್ರಕರಣ ದಾಖಲು ಮಾಡಲಾಗಿದೆ. ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಿಮ್ಸ್ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸಲಾಗಿದೆ ಎಂದು ಆರೋಪಿಸಲಾಗಿದೆ. ಆಯೇಷಾ ಅವರ ತಂದೆ ಲಾಲ್ ಬಾಬು ಅವರು ದೂರು ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

'ಮಗಳಿಗೆ ಉತ್ತಮ ಕಾಲೇಜಿನಲ್ಲಿ ಎಂಬಿಬಿಎಸ್ ಸೀಟು ಕೊಡಿಸುವ ಪ್ರಯತ್ನದಲ್ಲಿ ತಂದೆ ಲಾಲ್‌ಬಾಬು ಇದ್ದರು. ಈ ನಡುವೆ ಸೈಯದ್ ತಬ್ರೇಜ್ ಹಾಗೂ ಶಂಶೇರ್ ಬೇಗ್ ಅವರ ಪರಿಚಯವಾಗಿತ್ತು. ತಮಗೆ ಕಿಮ್ಸ್ ಮೆಡಿಕಲ್ ಕಾಲೇಜಿನ ಅಧ್ಯಕ್ಷರು ಪರಿಚಯ ಇರುವುದಾಗಿ ಹೇಳಿಕೊಂಡಿದ್ದರು. ಮೆಡಿಕಲ್ ಕಾಲೇಜಿನ ಅಧ್ಯಕ್ಷರೆಂದು ಹೇಳಿ ಕೆ.ಪಿ. ಶರತ್ ಅವರನ್ನು ಆರೋಪಿಗಳು ಪರಿಚಯಿಸಿದ್ದರು. ಬನಶಂಕರಿ 2ನೇ ಹಂತದಲ್ಲಿ ಶರತ್ ಅವರನ್ನು ಭೇಟಿ ಮಾಡಲಾಗಿತ್ತು. ಈ ವೇಳೆ ಆಯೇಷಾ ಖಥುಮ್ ಅವರಿಗೆ ಸೀಟು ಕೊಡಿಸುವುದಾಗಿ ನಂಬಿಸಿ, ಶೈಕ್ಷಣಿಕ ದಾಖಲೆ ಪಡೆದುಕೊಳ್ಳಲಾಗಿತ್ತು' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಅದಾದ ಕೆಲವು ದಿನಗಳ ಬಳಿಕ ಲಾಲ್‌ಬಾಬು ಅವರನ್ನು ಆರೋಪಿಗಳು ಹೋಟೆಲ್‌ನಲ್ಲಿ ಭೇಟಿ ಮಾಡಿದ್ದರು. ನಂತರ, ಹೋಟೆಲ್ ಒಂದರಲ್ಲಿ ಭೇಟಿಯಾಗಿದ್ದ ಆರೋಪಿಗಳು, ₹25 ಲಕ್ಷ ಕೊಟ್ಟರೆ ಸೀಟು ಕೊಡಿಸುವುದಾಗಿ ಹೇಳಿದ್ದರು. ಆರೋಪಿಗಳ ಮಾತು ನಂಬಿದ್ದ ಯುವತಿ ಕಡೆಯವರು ಹಂತ ಹಂತವಾಗಿ ಯುಪಿಐ, ಚೆಕ್ ರೂಪದಲ್ಲಿ ₹10 ಲಕ್ಷ ಹಣ ನೀಡಿದ್ದರು. ಬಳಿಕ, ₹15 ಲಕ್ಷವನ್ನು ನಗದು ರೂಪದಲ್ಲಿ ನೀಡಲಾಗಿತ್ತು' ಎಂದು ದೂರು ನೀಡಲಾಗಿದೆ.

ಪವಿತ್ರಾ ಗೌಡ ಮನೆ ಊಟಕ್ಕೆ ಕೋರ್ಟ್ ಕೊಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾಗಿ ಸದ್ಯ ಜೈಲಿನಲ್ಲಿರುವ ಪವಿತ್ರಾ ಗೌಡ, ನಾಗರಾಜ್ ಮತ್ತು ಲಕ್ಷ್ಮಣ್ ಅವರಿಗೆ ವಾರಕ್ಕೊಮ್ಮೆ ಮನೆಯಿಂದ ಊಟ ತರಿಸಿಕೊಳ್ಳಲು ಅನುಮತಿ ನೀಡಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ನಗರದ 57ನೇ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ 2026ರ ಜನವರಿ 12ರಂದು ಅನುಮತಿ ನೀಡಿದ್ದನ್ನು ಪ್ರಶ್ನಿಸಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. 'ವಿಚಾರಣಾಧೀನ ಕೈದಿಗಳಿಗೆ ಮನೆ ಊಟ ಒದಗಿಸಲು ನಿಷೇಧವೇನೂ ಇಲ್ಲ. ಆದರೆ, ಜೈಲು ನಿಯಮಗಳು ಮತ್ತು ಪ್ರಕ್ರಿಯೆ ಅನುಸಾರ ಮಾತ್ರವೇ ಮನೆ ಊಟ ಪೂರೈಸಬಹುದು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಸುತ್ತೋಲೆ: 'ಕೈದಿಗಳ ಆಹಾರದ ಬಗ್ಗೆ ಅಹವಾಲು ದಾಖಲಿಸಲು ವ್ಯವಸ್ಥೆ ಇಲ್ಲದಿದ್ದರೆ, ಅದನ್ನು ಜಾರಿಗೊಳಿಸಬೇಕು. ಕೈದಿಗಳಿಗೆ ತಯಾರಿಸುವ ಆಹಾರದ ಗುಣಮಟ್ಟದ ಕುರಿತು ಪರಿಶೀಲನೆ ನಡೆಸಿ ದಾಖಲೆ ಸಲ್ಲಿಸಬೇಕು. ಈ ಕುರಿತು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಬೇಕು' ಎಂದು ನಿರ್ದೇಶಿಸಿದೆ.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ದಿಢೀರ್ ಭೇಟಿ, ಪರಿಶೀಲನೆ

ಕಿದ್ವಾಯಿ: ಅಕ್ರಮಗಳ ಇನ್ನಷ್ಟು ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಆಸ್ಪತ್ರೆಯಲ್ಲಿ ಅಕ್ರಮ ನಡೆಯುತ್ತಿರುವ ಆರೋಪದ ಸಂಬಂಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ಲೋಕಾಯುಕ್ತ ಸಂಸ್ಥೆಗೆ ಇನ್ನಷ್ಟು ದೂರುಗಳು ಸಲ್ಲಿಕೆಯಾಗಿದ್ದು, ತನಿಖೆ ನಡೆಸುವಂತೆ ಆಗ್ರಹಿಸಲಾಗಿದೆ.

ಕಿದ್ವಾಯಿ ಆಸ್ಪತ್ರೆಯಲ್ಲಿ ಅಕ್ರಮಗಳು ನಡೆಯುತ್ತಿವೆ ಎಂದು ಲೋಕಾಯುಕ್ತ ಸಂಸ್ಥೆಗೆ ಈಚೆಗೆ ದೂರೊಂದು ಬಂದಿತ್ತು. ಅದರ ಆಧಾರದಲ್ಲಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಸೋಮವಾರ ಕಿದ್ವಾಯಿ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಿದ್ದರು.

ಆಸ್ಪತ್ರೆಯಲ್ಲಿ ಅಗತ್ಯ ಔಷಧಗಳ ಕೊರತೆ ಇರುವುದು, ತಜ್ಞವೈದ್ಯರು ಇಲ್ಲದೇ ಇರುವುದರ ಬಗ್ಗೆ ಸಂಸ್ಥೆಯ ನಿರ್ದೇಶಕ ಡಾ.ನವೀನ್ ಅವರನ್ನು ಲೋಕಾಯುಕ್ತರು ಪ್ರಶ್ನಿಸಿದ್ದರು. ಅಗತ್ಯ ಔಷಧಗಳ ಪೂರೈಕೆ ಮತ್ತು ತಜ್ಞವೈದ್ಯರ ನೇಮಕಕ್ಕೆ ತಕ್ಷಣವೇ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಈ ಬಗ್ಗೆ ಏಪ್ರಿಲ್ 24ರಂದು ವರದಿ ಸಲ್ಲಿಸುವಂತೆ ಲೋಕಾಯುಕ್ತರು ಸೂಚಿಸಿದ್ದರು.

ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ನಂತರ ಇನ್ನೂ ಹಲವು ದೂರಗಳು ಬಂದಿವೆ.

ಆರೋಪಗಳೇನು?

- ದುಬಾರಿ ಬೆಲೆಯ ಕಿಮೊಥೆರಪಿ ಪಡೆದುಕೊಳ್ಳಲು ಸಾಧ್ಯವಿಲ್ಲದ ರೋಗಿಗಳಿಗೆ ಇನ್ನೂ ಅಭಿವೃದ್ಧಿ ಹಂತದಲ್ಲಿರುವ ಚುಚ್ಚುಮದ್ದು/ಕಿಮೊಗಳನ್ನು ಖಾಸಗಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡುವ ಆಫರ್ ನೀಡಲಾಗುತ್ತದೆ. ಇದಕ್ಕೆ ಒಪ್ಪುವ ರೋಗಿಗಳಿಗೆ ಹಣವನ್ನೂ ನೀಡುವ ಆಮಿಷ ಒಡ್ಡಲಾಗುತ್ತದೆ
- ಮೆಮೊಗ್ರಫಿ ಮತ್ತಿತರ ಪರೀಕ್ಷೆಗಳಿಗೆ ನೂರಾರು ರೋಗಿಗಳ ಸರದಿ ಇದ್ದು, ಸಿಬ್ಬಂದಿಗೆ ಹಣ ನೀಡುವ ರೋಗಿಗಳನ್ನು ಅಕ್ರಮವಾಗಿ ಮೊದಲು ಪರೀಕ್ಷೆಗೆ ಕಳುಹಿಸಲಾಗುತ್ತದೆ. ಶಸ್ತ್ರಚಿಕಿತ್ಸೆಗೆ ಬೆಡ್ ಮತ್ತು ಚಿಕಿತ್ಸಾ ಕೊಠಡಿ ನಿಗದಿ ಮಾಡುವಲ್ಲಿಯೂ ಹಣ ನೀಡಿದರೆ ಕೆಲಸ ಬೇಗನೆ ಆಗುತ್ತದೆ
- ರೇಡಿಯಾಲಜಿ ವಿಭಾಗದಲ್ಲಿ ಪ್ರತಿ ಸೈಕಲ್‌ನ ಚಿಕಿತ್ಸೆಗೂ ಸಿಬ್ಬಂದಿಗೆ ಇಂತಿಷ್ಟು ಹಣ ನೀಡಲೇಬೇಕು. ಇಲ್ಲದಿದ್ದಲ್ಲಿ, ಅವಧಿ ಮುಗಿದಿದೆ ಎಂದು ರೋಗಿಗಳನ್ನು ವಾಪಸ್ ಕಳುಹಿಸಲಾಗುತ್ತದೆ. ನಿರಂತರವಾಗಿ ಚಿಕಿತ್ಸೆ ಮುಂದುವರಿಯಬೇಕಿರುವ ಕಾರಣ ರೋಗಿಗಳು ಅನಿವಾರ್ಯವಾಗಿ ಲಂಚ ನೀಡಲೇಬೇಕಾಗುತ್ತದೆ

ಜೀವನದಲ್ಲಿ ಹಣ ಅತ್ಯಂತ ಮುಖ್ಯ ಎಂದು ನಾನು ಚಿಕ್ಕವನಾಗಿದ್ದಾಗ ಭಾವಿಸಿದ್ದೆ; ವಯಸ್ಸಾದ ನಂತರ ನನಗೆ ಅದು ನಿಜ ಎಂಬುದು ಅರ್ಥವಾಗಿದೆ
ಆಸ್ಕರ್ ವೈಲ್ಡ್, ಕವಿ

ದುಡ್ಡಿನಂಥಾ ಮಾತು

ನಿವೃತ್ತಿ ಸೂಚ್ಯಂಕಗಳು ನೆರವಾಗಬಲ್ಲವೇ?

• ಚಿಂತನ್ ಹಾರಿಯಾ

ಹೂಡಿಕೆದಾರರು ಯಾವುದೇ ವರ್ಗಕ್ಕೆ ಸೇರಿರಲಿ, ಕೊನೆಗಾಲಕ್ಕೆ ಒಂದಿಷ್ಟು ಹಣ ಉಳಿಸಿಕೊಳ್ಳುವ, ನಿವೃತ್ತಿ ನಂತರದ ಜೀವನಕ್ಕೆ ಆದಾಯ ಮೂಲವೊಂದನ್ನು ರೂಪಿಸಿಕೊಳ್ಳುವ ಗುರಿ ಎಲ್ಲರಲ್ಲೂ ಇರುತ್ತದೆ. ದಶಕಗಳಲ್ಲಿ ದೊಡ್ಡ ಇಡುಗಂಟೊಂದನ್ನು ಹೊಂದಿಸಿಕೊಳ್ಳುವುದು, ಅದು ನಿವೃತ್ತಿಯ ನಂತರ 25 ವರ್ಷಗಳಿಗೆ ಸಾಕಾಗುವಂತೆ ಮಾಡಿಕೊಳ್ಳುವುದು ಬಹಳ ಶ್ರಮ, ಶಿಸ್ತು ಬಯಸುವ ಕೆಲಸ. ಅಲ್ಲದೆ ದೀರ್ಘ ಅವಧಿಗೆ ಹೂಡಿಕೆ ಮಾಡಲು ಸರಿಯಾದ ಆಯ್ಕೆಯೊಂದನ್ನು ಮಾಡಿಕೊಳ್ಳುವ ಅಗತ್ಯವೂ ಇರುತ್ತದೆ.

ನಿವೃತ್ತಿಯ ನಂತರದ ಜೀವನಕ್ಕಾಗಿ ಯೋಜನೆ ರೂಪಿಸುವಾಗ ಹಣವನ್ನು ಎಲ್ಲೆಲ್ಲಿ ತೊಡಗಿಸಬೇಕು ಎಂಬ ಬಗ್ಗೆ ಸರಿಯಾಗಿ ಆಲೋಚಿಸಬೇಕಿರುವುದು ಮಹತ್ವದ ಕೆಲಸ. ಷೇರು, ನಿಶ್ಚಿತ ವರಮಾನ ನೀಡುವ ಹೂಡಿಕೆಗಳು, ಚಿನ್ನ ಹಾಗೂ ಬೆಳ್ಳಿಯಂತಹ ಸರಕುಗಳ ಮೇಲೆ ಹಣ ತೊಡಗಿಸಬೇಕು. ಉದ್ದೇಶಿತ ಮೊತ್ತವನ್ನು ಸಾಧ್ಯವಾದಷ್ಟು ಆರಾಮವಾಗಿ ಒಗ್ಗೂಡಿಸಲು ನಾವು ನಮ್ಮ ಹೂಡಿಕೆ ಪಯಣದಲ್ಲಿ ಮಾಡಬೇಕಿರುವ ಬಹುಮುಖ್ಯ ಕೆಲಸ ಇದು. ಎಲ್ಲಕ್ಕಿಂತ ಮುಖ್ಯವಾಗಿ, ಹೂಡಿಕೆಯ ಮೊತ್ತವನ್ನು ಸರಿಯಾಗಿ ಹಂಚಿಕೆ ಮಾಡಿ ತೊಡಗಿಸಿದಲ್ಲಿ ಸಿಗುವ ಲಾಭವು ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರುತ್ತದೆ. ನಿವೃತ್ತಿ ನಂತರದ ಜೀವನಕ್ಕಾಗಿನ ನಿಧಿಯು ಬಹುಕಾಲ ಉಳಿಯಬೇಕು ಎಂದಾದರೆ ಈ ರೀತಿ ಮಾಡಬೇಕಿರುವುದು ಮುಖ್ಯವಾಗುತ್ತದೆ.

ಹೂಡಿಕೆ ಮೊತ್ತವನ್ನು ಯಾವುದರ ಮೇಲೆ ತೊಡಗಿಸಲಾಗಿದೆ ಎಂಬುದು ಆ ಹೂಡಿಕೆಗಳಿಂದ ಎಷ್ಟರಮಟ್ಟಿಗೆ ಲಾಭ ಸಿಗುತ್ತದೆ ಎನ್ನುವುದನ್ನು ಬಹುಪಾಲು ತೀರ್ಮಾನಿಸುತ್ತದೆ. ಇದನ್ನು 1991ರಲ್ಲಿ ಅಮೆರಿಕದಲ್ಲಿ ಮೂವರು ಹಣಕಾಸು ತಜ್ಞರು ನಡೆಸಿದ ಅಧ್ಯಯನವೊಂದು ಹೇಳಿದೆ. ಹಣವನ್ನು ಯಾವ ಷೇರುಗಳ ಮೇಲೆ ತೊಡಗಿಸಲಾಗಿದೆ, ಮಾರುಕಟ್ಟೆಯ ಯಾವ ಸಂದರ್ಭದಲ್ಲಿ ತೊಡಗಿಸಲಾಗಿದೆ ಎನ್ನುವುದು ಕಡಿಮೆ ಪ್ರಾಧಾನ್ಯ ಪಡೆಯುತ್ತದೆ. ಖ್ಯಾತ ನಿಧಿ ನಿರ್ವಾಹಕ ಹಾಗೂ ಬ್ರಿಜ್‌ವಾಟರ್ ಅಸೋಸಿಯೇಟ್ಸ್‌ನ ಸಂಸ್ಥಾಪಕ ರೇ ಡಾಲಿಯೊ ಸಣ್ಣ ಹೂಡಿಕೆದಾರರನ್ನು ಉದ್ದೇಶಿಸಿ ಹೇಳಿರುವ ಮಾತು: ‘ಹೂಡಿಕೆಗೆ ಇರುವ ಹಣವನ್ನು ಸರಿಯಾಗಿ ಹಂಚಿಕೆ ಮಾಡುವುದು ಮುಖ್ಯವಾಗುತ್ತದೆ. ಹೀಗಾಗಿ, ಹೂಡಿಕೆದಾರರು ಸಮತೋಲನದಿಂದ ಕೂಡಿದ ಪೋರ್ಟ್‌ಫೋಲಿಯೊ ಹೊಂದಬೇಕು. ಆ ಪೋರ್ಟ್‌ಫೋಲಿಯೊ ಭಿನ್ನ ಸನ್ನಿವೇಶಗಳಲ್ಲಿ ಕೂಡ ಒಳ್ಳೆಯ ಲಾಭ ತಂದುಕೊಡಬೇಕು’.

ನಿರ್ದಿಷ್ಟವಾದ ಕಡೆಗಳಲ್ಲಿ ಹಣವನ್ನು ತೊಡಗಿಸಬೇಕು ಎಂದಾದರೆ ಯಾವುದರ ಮೂಲಕ ಹೂಡಿಕೆ ಮಾಡಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕೂಡ ಮುಖ್ಯ.

ವಿವಿಧೆಡೆ ಹೂಡಿಕೆ

ಬೇರೆ ಬೇರೆ ಆಸ್ತಿಗಳ ಮೇಲಿನ ಹೂಡಿಕೆಯು ಭಿನ್ನ ಸಂದರ್ಭಗಳಲ್ಲಿ ಭಿನ್ನ ರೀತಿಯಲ್ಲಿ ಲಾಭ ತಂದುಕೊಡುತ್ತದೆ. 2004–05ನೇ ಹಣಕಾಸು ವರ್ಷದಿಂದ 2024–25ನೇ ಹಣಕಾಸು ವರ್ಷದ ವರೆಗಿನ 21 ವರ್ಷಗಳ ಅವಧಿಯಲ್ಲಿ ನಿಫ್ಟಿ–50 ಟಿಆರ್‌ಐ ಸೂಚ್ಯಂಕವು 12 ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಲಾಭ ತಂದುಕೊಟ್ಟಿದೆ. ಚಿನ್ನವು ಎಂಟು ವರ್ಷಗಳಲ್ಲಿ ಉತ್ತಮ ಲಾಭ ತಂದುಕೊಟ್ಟಿದೆ (ವಿಶ್ವ ಚಿನ್ನ ಸಮಿತಿ ದಾಖಲಿಸಿರುವ ಬೆಲೆ ಪ್ರಕಾರ). ಸಾಲಪತ್ರಗಳು (ನಿಫ್ಟಿ ಕಾಂಪೊಸಿಟ್ ಸಾಲಪತ್ರ ಸೂಚ್ಯಂಕ) ಒಂದು ವರ್ಷ ಹೆಚ್ಚಿನ ಲಾಭ ತಂದುಕೊಟ್ಟಿವೆ. ಯಾವ ಸಂದರ್ಭದಲ್ಲಿ ಯಾವ ಆಸ್ತಿಯ ಮೇಲಿನ ಹೂಡಿಕೆಯು ಉತ್ತಮ ಲಾಭ ನೀಡುತ್ತದೆ ಎಂಬುದನ್ನು ನಿಖರವಾಗಿ ಊಹಿಸುವುದನ್ನು ಸಾಧ್ಯವೇ ಇಲ್ಲವಾದ ಕಾರಣಕ್ಕೆ, ಸಣ್ಣ ಹೂಡಿಕೆದಾರರು ಬೇರೆ ಬೇರೆ ಕಡೆಗಳಲ್ಲಿ ಹೂಡಿಕೆ ಮಾಡಿರಬೇಕು.

ಯಾವುದೇ ಹೂಡಿಕೆಯಲ್ಲಿ ಮುಖ್ಯ ಪಾಲು ಸಾಮಾನ್ಯವಾಗಿ ಷೇರುಗಳದ್ದಾಗಿರುತ್ತದೆ. ಅದರಲ್ಲೂ, ನಿವೃತ್ತಿ ನಂತರದ ಜೀವನದಂತಹ ದೀರ್ಘಾವಧಿಯ ಹಣಕಾಸಿನ ಗುರಿಗಳನ್ನು ತಲುಪುವಾಗ ಈ ಮಾತು ಹೆಚ್ಚು ಅನ್ವಯ. ಈಕ್ವಿಟಿ ಹೂಡಿಕೆಗಳು ಪೋರ್ಟ್‌ಫೋಲಿಯೊ ಮೌಲ್ಯ ಹೆಚ್ಚಳದ ಯಂತ್ರಗಳಂತೆ ಕೆಲಸ ಮಾಡುತ್ತವೆ. ಅರ್ಥ ವ್ಯವಸ್ಥೆಯು ಚೆನ್ನಾಗಿ ಬೆಳವಣಿಗೆ ಕಂಡಾಗ, ಕಾರ್ಪೊರೇಟ್ ಕಂಪನಿಗಳ ಹೂಡಿಕೆಗಳು ಸ್ಥಿರವಾಗಿ ಹಾಗೂ ಬೆಳವಣಿಗೆಯ ಹಂತದಲ್ಲಿದ್ದಾಗ ಈ ಹೂಡಿಕೆಗಳೂ ಉತ್ತಮ ಲಾಭ ನೀಡುತ್ತವೆ.

ನಿಶ್ಚಿತ ವರಮಾನ ನೀಡುವ ಹೂಡಿಕೆಗಳು ಒಟ್ಟಾರೆ ಪೋರ್ಟ್‌ಫೋಲಿಯೊಗೆ ಸ್ಥಿರತೆ ತಂದುಕೊಡುತ್ತವೆ.


ಕಲೆ: ಸಂತೋಷ್ ಸಸಿಹಿತ್ಲು

> ನಿವೃತ್ತಿಯ ನಂತರದ ಜೀವನಕ್ಕಾಗಿ ಯೋಜನೆ ರೂಪಿಸುವಾಗ ಹಣ ಎಲ್ಲಿ ತೊಡಗಿಸಬೇಕು ಎಂಬ ಬಗ್ಗೆ ಸರಿಯಾಗಿ ಆಲೋಚಿಸಬೇಕಿರುವುದು ಮಹತ್ವದ ಕೆಲಸ.

ಕಳೆದ 2–3 ವರ್ಷಗಳಲ್ಲಿ ಚಿನ್ನದ ಮೇಲಿನ ಹೂಡಿಕೆಯು ಭಾರಿ ಪ್ರಮಾಣದಲ್ಲಿ ಲಾಭ ತಂದುಕೊಟ್ಟಿದೆಯಾದರೂ, ಚಿನ್ನದ ಮೇಲೆ ಹಣ ತೊಡಗಿಸುವುದು ಸಾಮಾನ್ಯವಾಗಿ ಸುರಕ್ಷತೆಯ ದೃಷ್ಟಿಯಿಂದ. ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಲಾಭವನ್ನು ಚಿನ್ನದ ಮೇಲಿನ ಹೂಡಿಕೆ ನೀಡುತ್ತದೆ. ಚಿನ್ನದ ಬೆಲೆಯು ಈಚಿನ ವರ್ಷಗಳಲ್ಲಿ ತೀವ್ರ ಪ್ರಮಾಣದಲ್ಲಿ ಏರಿಕೆ ಕಂಡಿರುವುದಕ್ಕೆ ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟುಗಳು, ಪ್ರತಿಸುಂಕ ಹೇರಿಕೆ, ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿ ದರದ ವಿಚಾರವಾಗಿ ಇರುವ ಅನಿಶ್ಚಿತತೆಗಳು ಹಾಗೂ ಅಮೆರಿಕದ ಸಾಲಕ್ಕೆ ಸಂಬಂಧಿಸಿದ ಅಸ್ಪಷ್ಟ ಚಿತ್ರಣ ಮುಖ್ಯ ಕಾರಣಗಳು.

ಬೆಳ್ಳಿ ಕೂಡ ಹಣದುಬ್ಬರ ಪ್ರಮಾಣಕ್ಕಿಂತ ಹೆಚ್ಚಿನ ಲಾಭ ತಂದುಕೊಡಬಹುದು. ಅಲ್ಲದೆ, ಹೊಸ ಕಾಲದ ಉದ್ದಿಮೆ ಗಳಲ್ಲಿ ಬೆಳ್ಳಿಗೆ ಹೆಚ್ಚಿನ ಬೇಡಿಕೆ ಕೂಡ ಇದೆ. ಕಳೆದ ಮೂರು ವರ್ಷಗಳಲ್ಲಿ ಬೆಳ್ಳಿಯ ಬೆಲೆ ಏರಿಕೆ ಪ್ರಮಾಣವು ಚಿನ್ನದ ಬೆಲೆ ಏರಿಕೆ ಪ್ರಮಾಣಕ್ಕಿಂತ ಜಾಸ್ತಿ ಆಗಿದೆ.



ಲಾರ್ಜ್‌ಕ್ಯಾಪ್ ಮೇಲೆ ಹೂಡಿಕೆ

ನಿವೃತ್ತಿ ನಂತರದ ಬದುಕಿಗಾಗಿ ಹಣ ಒಗ್ಗೂಡಿಸುವ ಉದ್ದೇಶ ಇರುವ ಸಣ್ಣ ಹೂಡಿಕೆದಾರರು ಷೇರುಗಳಲ್ಲಿ ಹೂಡಿಕೆ ಮಾಡಲು, ಸೂಚ್ಯಂಕಗಳ ಮೇಲೆ ಹಣ ತೊಡಗಿಸುವುದು ಹೆಚ್ಚು ಸೂಕ್ತವಾಗುತ್ತದೆ. ಲಾರ್ಜ್‌ಕ್ಯಾಪ್ ವರ್ಗಕ್ಕೆ ಸೇರಿದ ಕಂಪನಿಗಳು ಇರುವ ನಿಫ್ಟಿ–50 ಅಥವಾ ಸೆನ್ಸೆಕ್ಸ್ ಮೇಲಿನ ಹೂಡಿಕೆಯು ದೀರ್ಘಾವಧಿಯಲ್ಲಿ ಬಹಳ ಉತ್ತಮ ಪ್ರಮಾಣದ ಲಾಭ ತಂದುಕೊಟ್ಟಿದೆ.

ಕಳೆದ 10 ವರ್ಷಗಳಲ್ಲಿ ನಿಫ್ಟಿ–50 ಟಿಆರ್‌ಐ ಸೂಚ್ಯಂಕವು ವಾರ್ಷಿಕ ಶೇ 14.6ರಷ್ಟು ಸಂಯುಕ್ತ ವಾರ್ಷಿಕ ಲಾಭ ನೀಡಿದೆ, 20 ವರ್ಷಗಳಲ್ಲಿ ಇದು ಶೇ 13ರಷ್ಟು ಪ್ರಮಾಣದಲ್ಲಿದೆ. ಹಿಂದೆ ಲಾಭ ಆಗಿತ್ತು ಎಂಬುದು ಮುಂದೆಯೂ ಲಾಭ ಆಗುತ್ತದೆ ಎಂಬುದಕ್ಕೆ ಖಾತರಿ ಅಲ್ಲ. ಹೀಗಿದ್ದರೂ ಈ ಅಂಕಿ–ಅಂಶಗಳು ದೀರ್ಘಾವಧಿಗೆ ಹೂಡಿಕೆ ಮಾಡುವುದರಿಂದ ಸಿಗುವ ಲಾಭವನ್ನು ಹೇಳುತ್ತವೆ. ನಿವೃತ್ತಿ ನಂತರದ ಜೀವನಕ್ಕಾಗಿ ಹೂಡಿಕೆ ಮಾಡುವವರಿಗೆ ಅಗತ್ಯವಾಗಿ ಇರಬೇಕಾದ ಗುಣ ದೀರ್ಘಾವಧಿಗೆ ಹೂಡಿಕೆ ಮಾಡುವ ತಾಳ್ಮೆ.

ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳ ಮೇಲೆ ಹಣ ತೊಡಗಿಸುವ ಮೂಲಕ, ದೇಶದ ಲಾರ್ಜ್‌ಕ್ಯಾಪ್ ವರ್ಗದ ಆಯ್ದ ಕಂಪನಿಗಳ ಷೇರುಗಳ ಮೇಲೆ ಹೂಡಿಕೆ ಆಗುವಂತೆ ನೋಡಿಕೊಳ್ಳಬಹುದು. ಸೆನ್ಸೆಕ್ಸ್ ಸೂಚ್ಯಂಕದ ಮೇಲೆ ಹೂಡಿಕೆ ಮಾಡಿದವರಿಗೆ 30 ಷೇರುಗಳು, ನಿಫ್ಟಿ–50 ಮೇಲೆ ಹೂಡಿಕೆ ಮಾಡಿದವರಿಗೆ 50 ಕಂಪನಿಗಳ ಷೇರುಗಳು ಲಭ್ಯವಾಗುತ್ತವೆ.

ಲಾರ್ಜ್‌ಕ್ಯಾಪ್ ವರ್ಗದ ಕಂಪನಿಗಳಲ್ಲಿ ನಗದು ಹರಿವಿನ ಪ್ರಮಾಣ ಚೆನ್ನಾಗಿ ಇರುತ್ತದೆ, ಆರ್ಥಿಕವಾಗಿ ಇವು ಹೆಚ್ಚು ಸದೃಢವಾಗಿ ಇರುತ್ತವೆ, ಈ ಕಂಪನಿಗಳ ಲಾಭದ ಪ್ರಮಾಣ ಉತ್ತಮವಾಗಿರುತ್ತದೆ ಮತ್ತು ಜಾಗತಿಕ ಹಾಗೂ ಆಂತರಿಕ ಆರ್ಥಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡು ಮುನ್ನಡೆಯುವ ಸಾಮರ್ಥ್ಯ ಈ ಕಂಪನಿಗಳಲ್ಲಿ ಹೆಚ್ಚಿರುತ್ತದೆ.

ಪಾರದರ್ಶಕವಾದ ಪ್ರಕ್ರಿಯೆಯ ಮೂಲಕ ಹಾಗೂ ನಿಯಮಗಳಿಗೆ ಅನುಗುಣವಾಗಿ ನಿಫ್ಟಿ–50 ಅಥವಾ ಸೆನ್ಸೆಕ್ಸ್ ಸೂಚ್ಯಂಕವನ್ನು ರೂಪಿಸಲಾಗಿದೆ. ಈ ಸೂಚ್ಯಂಕದಲ್ಲಿ ಯಾವ ಕಂಪನಿಯ ಷೇರು ಇರಬೇಕು, ಇರಬಾರದು ಎಂಬ ಬಗ್ಗೆ ಆಗಾಗ ಪರಿಶೀಲನೆ ನಡೆಯುತ್ತಿರುತ್ತದೆ, ವರ್ಷಕ್ಕೆ ಎರಡು ಬಾರಿ ಈ ಸೂಚ್ಯಂಕಗಳಲ್ಲಿ ಬದಲಾವಣೆ ತರಲಾಗುತ್ತದೆ. ಸೂಚ್ಯಂಕಗಳ ಮೇಲೆ ಹೂಡಿಕೆ ಮಾಡುವವರು ಪಾವತಿಸಬೇಕಾದ ವೆಚ್ಚವು ಬಹಳ ಕಡಿಮೆ ಇರುತ್ತದೆ. ಹೂಡಿಕೆಯ ನಿರ್ವಹಣಾ ವೆಚ್ಚವು (ಎಕ್ಸ್‌ಪೆನ್ಸ್ ರೇಷ್ಯೊ) ಇಟಿಎಫ್‌ಗಳಿಗೆ ಸಾಮಾನ್ಯವಾಗಿ ಶೇ 0.10ಕ್ಕಿಂತ ಕಡಿಮೆ ಇರುತ್ತದೆ. ಸೂಚ್ಯಂಕ ಆಧಾರಿತ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿದವರಿಗೆ ಅದನ್ನು ನಗದಾಗಿ ಪರಿವರ್ತಿಸಿಕೊಳ್ಳುವುದು ಕೂಡ ಬಹಳ ಸುಲಭದ ಕೆಲಸ ಆಗಿರುತ್ತದೆ.

ಈಗಿನ ಸಂದರ್ಭದಲ್ಲಿ ಲಾರ್ಜ್‌ಕ್ಯಾಪ್ ವಲಯದ ಷೇರುಗಳ ಮೌಲ್ಯವು ಮಿಡ್‌ಕ್ಯಾಪ್ ಹಾಗೂ ಸ್ಮಾಲ್‌ಕ್ಯಾಪ್ ವರ್ಗದ ಷೇರುಗಳಿಗಿಂತ ಕಡಿಮೆ ಇದೆ. ಬಿಎಸ್‌ಇ ಸೆನ್ಸೆಕ್ಸ್ ಸೂಚ್ಯಂಕವು, ಬಿಎಸ್‌ಇ ಮಿಡ್‌ಕ್ಯಾಪ್ ಹಾಗೂ ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕಕ್ಕಿಂತ ಕಡಿಮೆ ಮೌಲ್ಯಕ್ಕೆ ಸಿಗುತ್ತಿದೆ. ಡಿಮ್ಯಾಟ್ ಖಾತೆ ಹಾಗೂ ಟ್ರೇಡಿಂಗ್ ಖಾತೆ ಇರುವವರಿಗೆ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳನ್ನು ಅನುಕರಣೆ ಮಾಡುವ ಇಟಿಎಫ್‌ಗಳು ಉತ್ತಮ ಹೂಡಿಕೆ ಆಯ್ಕೆಗಳು. ಡಿಮ್ಯಾಟ್ ಹಾಗೂ ಟ್ರೇಡಿಂಗ್ ಖಾತೆ ಇಲ್ಲದವರು ಸೆನ್ಸೆಕ್ಸ್ ಅಥವಾ ನಿಫ್ಟಿ–50 ಸೂಚ್ಯಂಕ ಆಧಾರಿತ ಮ್ಯೂಚುವಲ್ ಫಂಡ್‌ಗಳ ಮೂಲಕ ಹಣ ತೊಡಗಿಸಬಹುದು.

ಈ ಬರಹದಲ್ಲಿ ಹೇಳಿರುವ ತತ್ತ್ವ, ಹೂಡಿಕೆ ಆಯ್ಕೆಗಳು ನಿವೃತ್ತಿ ನಂತರದ ಬದುಕಿನ ಬಗ್ಗೆ ಯೋಜನೆ ರೂಪಿಸುವವರಿಗೆ ವಿಸ್ತೃತವಾದ ರೂಪುರೇಖೆಗಳಿದ್ದಂತೆ. ಆದರೆ ಹೂಡಿಕೆ ಮಾಡಲು ಬಯಸುವವರು ತಮ್ಮ ವೈಯಕ್ತಿಕ ರಿಸ್ಕ್ ಸಾಮರ್ಥ್ಯವನ್ನು, ಹೂಡಿಕೆ ಅವಧಿ ಮತ್ತು ಅಗತ್ಯಗಳನ್ನು ಆಧರಿಸಿ ಸರಿಯಾದ ಹೂಡಿಕೆ ಆಯ್ಕೆಯನ್ನು ಅಂತಿಮಗೊಳಿಸುವ ಮುನ್ನ ಪ್ರಮಾಣೀಕೃತ ಹೂಡಿಕೆ ಸಲಹೆಗಾರರಿಂದ ಸಲಹೆ ಪಡೆಯಬೇಕಾಗಬಹುದು.

(ಲೇಖನದಲ್ಲಿನ ಅಂಕಿ–ಅಂಶಗಳು 2026ರ ಜನವರಿ 16ರವರೆಗಿನ ಮಾಹಿತಿ ಆಧರಿಸಿವೆ)

ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಆಸ್ತಿ ನಿರ್ವಹಣಾ ಕಂಪನಿಯ ಹೂಡಿಕೆ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ

ಜೆನ್ ಝೀ–ಮಿಲೆನಿಯಲ್ಸ್ ತಲೆಮಾರಿನವರಿಗೆ ಚಿನ್ನವೇ ಹೂಡಿಕೆಯ ಮೊದಲ ಆಯ್ಕೆ

ಜೆನ್ ಝೀ ಮತ್ತು ಮಿಲೆನಿಯಲ್ಸ್ ತಲೆಮಾರಿನವರಿಗೆ ಚಿನ್ನವು ಅತ್ಯಂತ ವಿಶ್ವಾಸಾರ್ಹ ಹೂಡಿಕೆಯಾಗಿದೆ. ಚಿನ್ನದಲ್ಲಿ ಹೂಡಿಕೆ ಮಾಡುವುದು ಅವರ ಮೊದಲ ಆಯ್ಕೆ ಆಗಿದೆ ಎಂದು ಸ್ಮಿಟನ್ ಪಲ್ಸ್ ಎ.ಐ ಸಮೀಕ್ಷೆ ತಿಳಿಸಿದೆ.

ಆರ್ಥಿಕ ಅನಿಶ್ಚಿತತೆಯ ವೇಳೆ ಬ್ಯಾಂಕ್‌ನ ಉಳಿತಾಯ ಖಾತೆ, ಮ್ಯೂಚುವಲ್ ಫಂಡ್‌ಗಳು ಅಥವಾ ಷೇರುಗಳಿಗೆ ಹೋಲಿಸಿದರೆ ಚಿನ್ನವು ಸುರಕ್ಷಿತ ಆಯ್ಕೆಯಾಗಿದೆ ಎಂದು ಶೇ 65.7ರಷ್ಟು ಜನರು ಹೇಳಿದ್ದಾರೆ.

ಜೆನ್ ಝೀ ಮತ್ತು ಮಿಲೆನಿಯಲ್ಸ್ ತಲೆಮಾರಿನವರು ದೊಡ್ಡ ಪ್ರಮಾಣದಲ್ಲಿ, ಯಾವಾಗಲೋ ಒಮ್ಮೆ ಚಿನ್ನ ಖರೀದಿಸುವ ಬದಲು ಸಣ್ಣ ಪ್ರಮಾಣದಲ್ಲಿ, ಆಗಾಗ ಚಿನ್ನ ಖರೀದಿಸುತ್ತ ಇರುತ್ತಾರೆ ಎಂಬುದನ್ನು ಸಮೀಕ್ಷೆ ಕಂಡುಕೊಂಡಿದೆ.

ಈಚೆಗೆ ಚಿನ್ನ ಖರೀದಿಸಿದವರಲ್ಲಿ ಯಾರು, ಎಷ್ಟು ಖರೀದಿ ಮಾಡಿದ್ದಾರೆ?

ಹೂಡಿಕೆದಾರರು	ಖರೀದಿಸಿದ ಪ್ರಮಾಣ
61.9%	5 ಗ್ರಾಂ
34.4%	2 -5 ಗ್ರಾಂ
27.5%	2 ಗ್ರಾಂ ಗಿಂತ ಕಡಿಮೆ




ಅಂಕಿ ಅಂಶಗಳು

5,000 ಸಮೀಕ್ಷೆಯಲ್ಲಿ ಭಾಗವಹಿಸಿದವರು

18-39 ವರ್ಷ ಸಮೀಕ್ಷೆಯಲ್ಲಿ ಭಾಗವಹಿಸಿದವರ ವಯೋಮಾನ

ನಿಮ್ಮ ಬಳಿ ₹25 ಸಾವಿರ ಇದ್ದರೆ ಯಾವುದರಲ್ಲಿ ಹೂಡಿಕೆ ಮಾಡುತ್ತೀರಿ ಎಂಬ ಪ್ರಶ್ನೆಗೆ ಸಿಕ್ಕ ಉತ್ತರ (ಶೇಕಡವಾರು)





ಎಂಟಿಎಆರ್ ಟೆಕ್ನಾಲಜೀಸ್

ಬ್ರೋಕರೇಜ್ ಮಾತು



ದೇಶದ ಪ್ರಮುಖ ಎಂಜಿನಿಯರಿಂಗ್ ಕಂಪನಿಯಾದ ಎಂಟಿಎಆರ್ ಟೆಕ್ನಾಲಜೀಸ್ ಷೇರಿನ ಬೆಲೆ ₹4,810ಕ್ಕೆ ತಲುಪಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ಕಂಪನಿಯು ರಕ್ಷಣೆ, ವೈಮಾಂತರಿಕ್ಷ, ಅಣು ವಿದ್ಯುತ್ ಮತ್ತು ಶುದ್ಧ ಇಂಧನ ವಲಯದ ಕಂಪನಿಗಳಿಗೆ ಸೇವೆ ಒದಗಿಸುತ್ತದೆ. ಅಲ್ಲದೆ, ಕಂಪನಿಯು ಬ್ಲೂಮ್ ಎನರ್ಜಿ ಜೊತೆ ದಶಕದ ಪಾಲುದಾರಿಕೆ ಹೊಂದಿದೆ.

ಎಂಟಿಎಆರ್ ಟೆಕ್ನಾಲಜೀಸ್, ಜಾಗತಿಕವಾಗಿ ಕೃತಕ ಬುದ್ಧಿಮತ್ತೆ ಆಧಾರಿತ ದತ್ತಾಂಶ ಕೇಂದ್ರ ವಿಸ್ತರಣೆಯ ಪರೋಕ್ಷ ಫಲಾನುಭವಿಯಾಗಿ ಹೊರಹೊಮ್ಮುತ್ತಿದೆ. 2026–30ರ ಅವಧಿಯಲ್ಲಿ ಈ ವಲಯದ ದತ್ತಾಂಶ ಕೇಂದ್ರಗಳ ಒಟ್ಟು ಸಾಮರ್ಥ್ಯವು ಅಂದಾಜು 100 ಗಿಗಾವಾಟ್ ಆಗುವ ನಿರೀಕ್ಷೆ ಇದೆ.

ಬ್ಲೂಮ್ ಎನರ್ಜಿ ಕಂಪನಿ ಪ್ರಮುಖ ವಸ್ತುಗಳ ಏಕೈಕ ಪೂರೈಕೆದಾರ ಎಂಟಿಎಆರ್ ಟೆಕ್ನಾಲಜೀಸ್. ಬ್ಲೂಮ್ ಎನರ್ಜಿಗೆ ಹೆಚ್ಚುತ್ತಿರುವ ಕಾರ್ಯಾದೇಶಗಳಿಂದಾಗಿ, ಎಂಟಿಎಆರ್ ಮುಂದಿನ ಮೂರರಿಂದ ಐದು ವರ್ಷಗಳಲ್ಲಿ ₹2,700 ಕೋಟಿಯಿಂದ ₹5,300 ಕೋಟಿವರೆಗೆ ವರಮಾನ ಪಡೆದುಕೊಳ್ಳುವ ನಿರೀಕ್ಷೆ ಇದೆ.

2024–25ರಿಂದ 2027–28ರಲ್ಲಿ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇ 40ರಷ್ಟು ಮತ್ತು ತೆರಿಗೆ ನಂತರದ ಲಾಭ ಶೇ 78ರಷ್ಟು ಇರುವ ನಿರೀಕ್ಷೆ ಇದೆ. ತೆರಿಗೆ, ಬಡ್ಡಿ, ಸಾಲ ತೀರುವಳಿ ಪೂರ್ವದ ವರಮಾನ (ಇಬಿಐಟಿಡಿಎ) ಶೇ 55ರಷ್ಟಿರಲಿದೆ ಎಂದು ಹೇಳಿದೆ.

ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಷೇರಿನ ಬೆಲೆ ₹3,514 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಇಂಗ್ಲಿಷ್

ಎಸ್ಎಸ್ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ದ್ವಿತೀಯ ಭಾಷೆ ಇಂಗ್ಲಿಷ್ ವ್ಯಾಕರಣ ಮಾದರಿ ಪ್ರಶ್ನೋತ್ತರಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಶಂಕರನಾರಾಯಣ್ ರಾವ್, ನಿವೃತ್ತ ಇಂಗ್ಲಿಷ್ ಅಧ್ಯಾಪಕ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

(B) Read the following passage and answer the questions that follow :

Padmavathibai Burli, wife of the renowned freedom fighter Bindacharya Burli, was a silent and pious woman, circumstances so conspired against the family that they had to struggle for two square meals a day. Bindacharya Burli breathed patriotism and lived patriotism. The cause and call of Mother India was always above his domestic obligations. Padmavathibai not only stood by her husband but led a silent agitation herself by feeding the tired and hungry freedom fighters. She used to tell her own children to eat a little less so that the sons of the nation, committed to free mother India, could be fed. She used to take food to the freedom fighters who were in hiding. Once she was found serving food to freedom fighters who were on Satyagraha. She was arrested and sentenced to three month imprisonment.

82 (a) How did Bindacharya Burli serve the cause of freedom ?

(b) Why was Padmavathibai arrested and sentenced to three month imprisonment ?

Ans : (a) Bindacharya Burli breathed patriotism and lived patriotism. The cause and call of Mother India was always above his domestic obligations.

(b) Padmavathibai led a silent agitation herself by feeding the tired and hungry freedom fighters who were in hiding. Once she was found serving food to freedom fighters who were on Satyagraha and was arrested and sentenced to three months imprisonment

A dialogue is given below. Read it and answer the questions that follow (Questions 83 & 84)

Father : Father, I suggest we sell the Land

Grand Father : (keeps silent for a moment) No, we should not

Father : But, why ?

Grand Father : It is inherited it's my prized possession

83. The silence of the grand father Suggests his ______ (willingness/unwillingness) to sell the land (tick the right underlined word)

84. Which word in the conversation above means 'property'?

Ans (83) unwillingness.
(84) prized possession

85. Given below is a profile, write a paragraph using the clues given below:

(A)
Name: Sudhakar
Age: 40 years
Date of Birth: 25th October
Qualification: MBA
Place of Birth: Bellary
Name of the spouse: Smt. Radhika-homemaker
Daughter: Latha - studying in 7th Standard
Work experience: Working as Manager at Ranbaxy India Ltd, Chennai.

Ans: Mr. Sudhakar is a middle aged man about fourty years old living in Chennai. He was born on 25th of October in Bellary District. He has completed his Masters in Business Administation i.e., MBA . His spouse is Radhika, who is a home maker. He has a daughter Latha who is studying in 7th grade. He is working as Manager at Ranbaxy India Ltd, Chennai.

(B)
Name: Mr. Vinay
Place and date : of birth Madikeri, 12th November, 1991
Qualification: B.E.
Profession: Assistant Executive Engineer in BESCOM
Family: Wife and a daughter
Hobbies : Trekking and cycling
Reasons for popularity : He is very transparent in his work and upholds the rights of the Consumer

Ans:-

Mr. Vinay was born on November 12th, 1991 in Madikeri, He is a serving as Assistant Executive Engineer at BESCOM. With a strong educational background in engineering, he has built a reputation for his transparency and dedication to upholding consumer rights. Outside of work, Mr. Vinay enjoys trekking and cycling, reflecting his adventurous spirit. He is a family man, living with his wife and daughter. His commitment to his profession and values has earned him popularity and trust among the people he serves.

86. Develop the story using the clues given below:

(A)

In a village - a clever elephant – there a river nearby - go for bath daily - passing by a tailor shop - The tailor - bananas daily - one day bananas were not given- pricked needle - elephant angry - came with muddy water in its trunk - sprayed - tailor's shop dirty - he repented

Ans:-

Once a clever elephant was living in a village.There was a river nearby the village in which the elephant would go for a bath daily. On its way, the elephant would take a quick detour passing by a tailor shop The tailor was fond of elephants, so he gave bananas to it daily, this became a habit for both. On one such day the tailor was not in a pleasant mood and so, he forgot to give banana to the elephant. The elephant decided to throw a tantrum which in turn irritated the tailor leading him to prick the elephant with a needle. The elephant became angry and brought some muddy water in its trunk and sprayed on the tailor's shop. The shop became very dirty, and the tailor repented for his action.

Moral: Think before you act.

(B) 32. Once there was a sailor…. Sindbad…. a violent storm…… ship got wrecked…. drifted off to an unknown island…. discovered the egg of a

(Contd)

MULTIPLE CHOICE QUESTIONS

1) Statement (A): The primary transcript produced in eukaryotes is translated without undergoing any modification or processing.


Statement (B): The hnRNA in humans has exons and introns

(a) Both the statements 'A' and 'B' are correct
(b) Both the statements 'A' and 'B' are wrong
(c) Statement 'B' is correct and statement 'A' is wrong
(d) Statement 'A' is correct and statement 'B' is wrong

Ans:c

Expln:- The primary transcripts contains both introns and exons and are non-functional. Therefore, they undergo a process of splicing for removing introns and joining exons in the proper order. It will further undergo post transcriptional modifications, i.e., capping and tailing. After which a fully processed hnRNA is now called mRNA and thus, transported out of the nucleus for translation.

2)



Which of these options is true in the context of the above diagram of pollen grain ?

(a) 'A' is a vegetative cell which gives rise to male gametes and 'B' is a generative cell which produces pollen tube
(b) 'A' is a generative cell which gives rise to pollen tube and 'B' is a vegetative cell which form male gametes
(c) 'A' is a vegetative cell with abundant food reserve and 'B' is a generative cell which form male gametes
(d) 'A' is a generative cell which forms male gametes and 'B' is a vegetative cell which produces pollen tube

Ans:- C

3) Which among the following is used to treat Emphysema?

(a) Human Hormone - alpha-Antitrypsin
(b) Human alpha-Interferon
(c) Human protein - alpha-Antitrypsin
(d) Human alpha-Lactalbumin

Ans:- C

Expln:- Emphysema is a chronic respiratory disease caused by damage to alveoli, often due to excessive enzymatic activity. Human protein alpha-Antitrypsin acts as a protease inhibitor and helps protect lung tissues by inhibiting elastase, an enzyme that breaks down lung elasticity.

4) Natural killer lymphocytes are an example of

a) Cytokine barrier   b) Physiological barrier
c). Physical barrier   d). Cellular barrier

Ans: d

Expln:- Innate immune System is a non-Specific type of defence i.e., present at the time of birth. They are providing different types of barriers to the entry of the foreign agents into our body. It consists of 4 types of barriers:-

(A) Cytokine to cellular barrier: Virus-infected cells secrete proteins called interferons which protect non-infected cells from further viral infection.
(B) Physiological barriers: Acid in the stomach, saliva in the mouth tears from eyes all prevents microbial growth.
(C) Physical barriers: Skin is the main barrier which prevents entry of the micro-organism.
(D) Cellular barriers: Leukocytes (WBC) acts like polymorphonuclear leukocytes (PMNL-neutrophils), Single-celled organism i.e. Cellular barriers. It also includes monocytes, natural killer cells in the blood, as well as Macrophages in tissue can phagocytose and destroy microbes.

5) Knee joint is an example for

(a) ball and socket joint   (b) hinge joint
(c) Pivot joint   (d) gliding joint

Ans:b

Expln:- Knee joint is an example of hinge joint, a type of synovial joint which allows the movement in one plane. While, ball and socket joint is present is found between pectoral girdle and head of humerus (i.e., a shoulder joint), pivot joint is found between atlas and axis and gliding joints is found between carpal bones or tarsal bones.

6) The free-living fungus Trichoderma can be used for –

a) Killing insects
b) Biological control of plant diseases
c) Controlling butterfly caterpillars
d) Producing antibiotics   **Ans:- b**

7) Match the animals given in column A with their location in Column B.

	Column A		*Column B*
i	Dodo	a	Africa
ii	Quagga	b	Russia
iii	Thylacine	c	Mauritius
iv	Stellar's sea cow	d	Australia

Choose the correct match-

b) i – a, ii – c, iii – b, iv – d
c) i – d, ii – c, iii – a, iv – b
d) i – c, ii – a, iii – b, iv – d
e) i – c, ii – a, iii – d, iv – b   **Ans:- d**

8) Which of the following is abbreviated as ZIFT?

(a) Zygote Intra Fallopian Tube
(b) Zygote Intra Fallopian Transfer
(c) Zygote Inter Fallopian Tube
(d) Zygote Inter Fallopian Transfer

Ans. b

ಹೋಳಿ ಹರ್ಷದ ಹೊನಲು...

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಬುಧವಾರ ಹೋಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಮಕ್ಕಳು, ಯುವಜನರೆನ್ನದೇ ಎಲ್ಲ ವಯೋಮಾನದವರು ಬಣ್ಣದ ಓಕುಳಿಯಲ್ಲಿ ಮಿಂದೆದ್ದರು.

ಯುವಜನರು ರಸ್ತೆ, ಬೀದಿಗಳಲ್ಲಿ ಪರಸ್ಪರ ಬಣ್ಣ ಎರಚಿಕೊಂಡು ಖುಷಿಪಟ್ಟರು. ಹೋಟೆಲ್‌ಗಳು, ಮೈದಾನಗಳಲ್ಲಿಯೂ ಹೋಳಿ ಆಚರಿಸಲಾಯಿತು. ಕೆಲ ವಸತಿ ಸಮುಚ್ಚಯ ಹಾಗೂ ಮನೆಗಳಲ್ಲಿ ಪರಸ್ಪರ ಹೋಳಿ ಆಚರಿಸಿ, ನಂತರ ಸಿಹಿ ಹಂಚಿ ಸವಿದರು.

ಯುವಕ, ಯುವತಿಯರು, ಮಕ್ಕಳು, ಮಹಿಳೆಯರು ಬಣ್ಣದಾಟದಲ್ಲಿ ಮುಳುಗಿದ್ದರು. ಚಿಕ್ಕಮಕ್ಕಳು ಪಿಚಕಾರಿಯಿಂದ ದೊಡ್ಡವರಿಗೆ ಬಣ್ಣ ಎರಚಿ ಸಂಭ್ರಮಪಟ್ಟರು. ರಸ್ತೆಗಳೆಲ್ಲ ಬಣ್ಣಮಯವಾಗಿದ್ದವು.

ಚರ್ಚ್ ಸ್ಟ್ರೀಟ್, ಶೇಷಾದ್ರಿಪುರ, ಕುಮಾರಕೃಪಾ ಮತ್ತು ಶಿವಾನಂದ ವೃತ್ತದಲ್ಲಿ ಮತ್ತು ಅರಮನೆ ಮೈದಾನದಲ್ಲಿ ಯುವಕ–ಯುವತಿಯರು ಬಣ್ಣದಾಟದಲ್ಲಿ ತೊಡಗಿದ್ದರು. ಖಾಸಗಿ ಕಂಪನಿಗಳ ಕಚೇರಿಗಳಲ್ಲಿ ಹೋಳಿ ಸಂಭ್ರಮ ಕಂಡುಬಂದಿತು.

ಪಂಚತಾರಾ ಹೋಟೆಲ್‌ಗಳು ಸೇರಿದಂತೆ ಹಲವು ಪ್ರದೇಶಗಳಲ್ಲಿ ಹೋಳಿ ಹಬ್ಬವನ್ನು ಒಂದು ಕಾರ್ಯಕ್ರಮದ ರೀತಿಯಲ್ಲಿ ಆಚರಿಸಲಾಯಿತು. ವಿವಿಧ ಬಡಾವಣೆಗಳಲ್ಲಿ ಹೋಳಿಯಲ್ಲಿ ಪಾಲ್ಗೊಂಡು, ಬಣ್ಣ ಎರಚಿ ಸ್ನೇಹ, ಪ್ರೀತಿಯ ರಂಗು ಹೆಚ್ಚಿಸಿಕೊಂಡರು.

ಕಾಲೇಜುಗಳಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಪರಸ್ಪರ ಬಣ್ಣ ಹಚ್ಚಿಕೊಂಡು ಕೇಕೆ ಹಾಕಿ ಸಂಭ್ರಮಿಸಿದರು.





ಒಲವಿನ ಬಣ್ಣದ ಸಿಂಚನ
ಚಿತ್ರ: ಪುಷ್ಕರ್



ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಆಯೋಜಿಸಿದ್ದ ಹೋಳಿ ಆಚರಣೆಯಲ್ಲಿ ಬಣ್ಣಗಳಲ್ಲಿ ಮಿಂದೆದ್ದವರ ಸಂಭ್ರಮ
ಚಿತ್ರ: ರಂಜು ಪಿ

‘ಅನ್ಯಾಯದ ವಿರುದ್ಧ ಹೋರಾಟ’

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ ಸಮಾವೇಶದಲ್ಲಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಯಿಂದ ಭೋವಿ, ಬಂಜಾರ (ಲಂಬಾಣಿ), ಕೊರಮ, ಕೊರಚ, ಸಮಗಾರ, ಚರ್ಮಕಾರ ಮತ್ತು ಅಲೆಮಾರಿ ಸಮುದಾಯಗಳಿಗೆ ಆಗಲಿರುವ ಅನ್ಯಾಯವನ್ನು ಸರಿಪಡಿಸದೇ ಇದ್ದರೆ, ರಾಜ್ಯ ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗವುದು ಎಂದು ಚಿತ್ರದುರ್ಗದ ಭೋವಿ ಗುರುಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಎಚ್ಚರಿಕೆ ನೀಡಿದರು.

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟವು ಬುಧವಾರ ಆಯೋಜಿಸಿದ್ದ ರಾಜ್ಯಮಟ್ಟದ ಸಮಾವೇಶ ಉದ್ದೇಶಿಸಿ ಅವರು ಮಾತನಾಡಿದರು.

‘ಒಳಮೀಸಲಾತಿಯಿಂದ ಈ ಸಮುದಾಯಗಳಿಗೆ ಅನ್ಯಾಯವಾಗಲಿದೆ. ಈ ಬಗ್ಗೆ ಅಧ್ಯಯನ ನಡೆಸಲು ಒಂದು ಸಮಿತಿ ರಚಿಸಿ, ವರದಿಯನ್ನು ಸಿದ್ಧಪಡಿಸಬೇಕು. ಅದರ ಆಧಾರದಲ್ಲಿ ವಾಸ್ತವ ಸ್ಥಿತಿಯನ್ನು ರಾಜ್ಯ ಸರ್ಕಾರಕ್ಕೆ ಮನದಟ್ಟು ಮಾಡಿಕೊಡಬೇಕು. ಈ ಕ್ರಿಯೆಯಲ್ಲಿ ಎಲ್ಲ ಸಮುದಾಯಗಳೂ ಒಟ್ಟಾಗಬೇಕು’ ಎಂದು ಕರೆ ನೀಡಿದರು.

ಬಿಜೆಪಿ ಮುಖಂಡ ಅರವಿಂದ ಲಿಂಬಾವಳಿ, ‘ವಿವಿಧ ಹಂತಗಳಲ್ಲಿ ಮೀಸಲಾತಿಯನ್ನೇ ನೀಡಲು ಸಾಧ್ಯವಾಗಿಲ್ಲ. ಆ ಅನ್ಯಾಯವನ್ನು ಮೊದಲು ಸರಿಪಡಿಸಬೇಕು. ಒಳಮೀಸಲಾತಿಯಲ್ಲಿನ ಅನ್ಯಾಯವನ್ನೂ ಸರಿಪಡಿಸಬೇಕು’ ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿಗಳಿಗೆ ಶೇ 17ರಷ್ಟು ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇ 7ರಷ್ಟು ಮೀಸಲಾತಿ ಘೋಷಣೆಯನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಮನವಿ ಮಾಡಬೇಕು ಎಂದು ಒತ್ತಾಯಿಸಬೇಕು ಎಂಬ ನಿರ್ಣಯವನ್ನು ಸಮಾವೇಶದಲ್ಲಿ ತೆಗೆದುಕೊಳ್ಳಲಾಯಿತು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಅನಂತನಾಯ್ಕ, ಮಾಜಿ ಶಾಸಕರಾದ ಬಿ.ಟಿ.ಲಲಿತಾನಾಯಕ್, ಎಂ.ವಿ.ನಾಗರಾಜ್, ಜಲಜಾನಾಯಕ್, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರಾಮಪ್ಪ, ಕೊರಮ ಕೊರಚ ರಾಜ್ಯ ಘಟಕ ಮಹಿಳಾ ಅಧ್ಯಕ್ಷೆ ಚಂದ್ರಿಕಾ, ಛಲವಾದಿ ಸಮಾಜದ ಮುಖಂಡ ರಾಜಗೋಪಾಲ್, ಭೋವಿ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚೌಡಯ್ಯ ಅವರು ಸಮಾವೇಶದಲ್ಲಿ ಭಾಗಿಯಾಗಿದ್ದರು.



ಭೋವಿ ಗುರುಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಸಮಾವೇಶದಲ್ಲಿ ಮಾತನಾಡಿದರು. ಬಿ.ಟಿ.ಲಲಿತಾನಾಯಕ್, ಬಂಜಾರ ಪೀಠಾಧ್ಯಕ್ಷ ಸರ್ದಾರ್ ಸೇವಾಲಾಲ್ ಸ್ವಾಮೀಜಿ ಉಪಸ್ಥಿತರಿದ್ದರು

ಒಳಮೀಸಲಾತಿ ರಹಿತ ಹಳೆ ಮೀಸಲಾತಿಗೆ ‘ಬಲಗೈ’ ಆಗ್ರಹ

‘ಒಳಮೀಸಲಾತಿ ಹಂಚಿಕೆ ಸಂಬಂಧಿಸಿದಂತೆ ಗೊಂದಲ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವವರೆಗೆ ಹಾಗೂ ನ್ಯಾಯಾಲಯದ ಅಡೆತಡೆಗಳು ನಿವಾರಣೆ ಆಗುವವರೆಗೆ ಒಳ ಮೀಸಲಾತಿರಹಿತವಾಗಿ ಹಳೆ ಮೀಸಲಾತಿಯನ್ನು (ಶೇ 15) ಜಾರಿಗೊಳಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಮನವಿ ಸಲ್ಲಿಸಿದೆ.

‘ಒಟ್ಟು ಮೀಸಲಾತಿಯನ್ನು ಶೇ 56ಕ್ಕೆ ಹೆಚ್ಚಿಸಿರುವುದಕ್ಕೆ ತಡೆಯಾಜ್ಞೆ ನೀಡಿರುವ ಹೈಕೋರ್ಟ್, ಶೇ 50ರ ಮೀಸಲಾತಿಯಲ್ಲಿ ನೇಮಕಾತಿಗೆ ಯಾವುದೇ ತೊಂದರೆ ಇಲ್ಲ ಎಂದು ಹೇಳಿದೆ. ಒಳ ಮೀಸಲಾತಿ ಹಂಚಿಕೆ ವಿಷಯವೂ ಹೈಕೋರ್ಟ್‌ನಲ್ಲಿದೆ. ಹೀಗಾಗಿ, ಒಳ ಮಿಸಲಾತಿರಹಿತವಾಗಿ ಹಳೆ ಮೀಸಲಾತಿಯಡಿ ನೇಮಕಾತಿ ನಡೆಸಬೇಕು’ ಎಂದು ಮನವಿಯಲ್ಲಿ ಒಕ್ಕೂಟದ ಅಧ್ಯಕ್ಷರಾದ ಜ್ಞಾನಪ್ರಕಾಶ ಸ್ವಾಮೀಜಿ ಮತ್ತು ಸಂಚಾಲಕ ಸಿದ್ದಯ್ಯ ಒತ್ತಾಯಿಸಿದ್ದಾರೆ.

‘ಹೊಸ ಜಾತಿ ಪ್ರಮಾಣಪತ್ರದ ಜೊತೆ ಹಳೆಯ ಜಾತಿ ಪ್ರಮಾಣಪತ್ರವನ್ನು ಪರಿಗಣಿಸುವಂತೆ ಆದೇಶ ಹೊರಡಿಸಬೇಕು, ವಿವಿಧ ಇಲಾಖೆಗಳು ನೇಮಕಾತಿಗೆ ಈಗಾಗಲೇ ಹೊರಡಿಸಿರುವ ಅಧಿಸೂಚನೆಯನ್ನು ರದ್ದುಪಡಿಸಿ ಮರು ಅಧಿಸೂಚನೆ ಹೊರಡಿಸಲು ಸೂಕ್ತ ಆದೇಶ ಹೊರಡಿಸಬೇಕು, ಬಲಗೈ ಸಮುದಾಯಕ್ಕೆ ಸೇರಿರುವ 63 ಜಾತಿಗಳು ಬಲಗೈ ಗುಂಪಿನಲ್ಲಿ ಉದ್ಯೋಗ, ಶಿಕ್ಷಣ ಮತ್ತು ಇತರ ಸೌಲಭ್ಯ ಪಡೆಯಲು ಆದೇಶ ಹೊರಡಿಸಬೇಕು. ಪರಿಶಿಷ್ಟ ಜಾತಿಯ ಸಮೀಕ್ಷೆ ನಡೆಸಿ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಆಯೋಗ ಸಲ್ಲಿಸಿರುವ ವರದಿಯು ಅವೈಜ್ಞಾನಿಕ ಹಾಗೂ ಪಕ್ಷಪಾತದಿಂದ ಕೂಡಿರುವುದರಿಂದ ಅದನ್ನು ತಿರಸ್ಕರಿಸಬೇಕು’ ಎಂದೂ ಆಗ್ರಹಿಸಿದ್ದಾರೆ.

ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಳಕ್ಕೆ ಆಂಧ್ರ ಪ್ರದೇಶ ಸರ್ಕಾರ ಅಡ್ಡಗಾಲು

ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಲಿ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಲಮಟ್ಟಿ ಅಣೆಕಟ್ಟು ಎತ್ತರ ಹೆಚ್ಚಿಸುವ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಭೂಸ್ವಾಧೀನಕ್ಕೆ ಅವಕಾಶ ನೀಡಬಾರದೆಂದು ಕೇಂದ್ರ ಸರ್ಕಾರಕ್ಕೆ ಆಂಧ್ರ ಪ್ರದೇಶ ಸರ್ಕಾರ ಪತ್ರ ಬರೆದಿದೆ. ಕೇಂದ್ರ ಸರ್ಕಾರ ತಕ್ಷಣ ಮಧ್ಯ ಪ್ರವೇಶಿಸಿ, ಈ ಹಿಂದೆ ಆಗಿರುವ ಆದೇಶದಂತೆ ನಡೆದು ಕೊಳ್ಳಬೇಕು’ ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 519 ಮೀಟರ್‌ನಿಂದ 524 ಮೀಟರ್‌ಗೆ ಹೆಚ್ಚಿಸುವ ವಿಚಾರದಲ್ಲಿ ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶ ಸರ್ಕಾರ ಮಧ್ಯಪ್ರವೇಶ ಮಾಡುವುದು ಸರಿಯಲ್ಲ’ ಎಂದರು.

‘ಮಾರ್ಚ್ 10ರಿಂದ ಲೋಕಸಭೆ ಕಲಾಪ ಆರಂಭವಾಗಲಿದ್ದು,ರಾಜ್ಯದ ಸಂಸದರು ಈ ವಿಚಾರವಾಗಿ ಪ್ರಧಾನಿ ಹಾಗೂ ಜಲಶಕ್ತಿ ಸಚಿವರ ಮೇಲೆ ಒತ್ತಡ ಹೇರಬೇಕು. ಬಜೆಟ್ ಅಧಿವೇಶನದ ಮಧ್ಯೆಯೇ ದೆಹಲಿಗೆ ಹೋಗಿ ಕೇಂದ್ರದ ಸಚಿವರನ್ನು ನಾನು ಭೇಟಿ ಮಾಡುತ್ತೇನೆ. ಈ ಬಗ್ಗೆ ಮುಖ್ಯಮಂತ್ರಿಯ ಗಮನಕ್ಕೂ ತರುತ್ತೇನೆ’ ಎಂದರು.

‘ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೀಗೇಕೆ ಮಾಡುತ್ತಿದ್ದಾರೆಂದು ತಿಳಿಯುತ್ತಿಲ್ಲ. ತುಂಗಭದ್ರಾ ವಿಚಾರವಾಗಿಯೂ ಅವರು ಮಾತುಕತೆಗೆ ಬರುತ್ತಿಲ್ಲ. 30 ಟಿಎಂಸಿ ಅಡಿಯಷ್ಟು ತುಂಗಭದ್ರಾ ನದಿ ನೀರು ನಮಗೆ ನಷ್ಟವಾಗುತ್ತಿದೆ. ಅದನ್ನು ಸರಿದೂಗಿಸಲು ಪರ್ಯಾಯ ವ್ಯವಸ್ಥೆಗಾಗಿ ಪ್ರಯತ್ನಿಸುತ್ತಿದ್ದೇವೆ’ ಎಂದರು.

‘ಭೂಸ್ವಾಧೀನಕ್ಕೆ ₹70 ಸಾವಿರ ಕೋಟಿ ಖರ್ಚಾಗಲಿದೆ. ಅದಕ್ಕಾಗಿ ಮೂರು ಹಂತಗಳಲ್ಲಿ ಪ್ರತಿವರ್ಷ ₹20 ಸಾವಿರ ಕೋಟಿ ಮೀಸಲಿಟ್ಟು ಯೋಜನೆ ಪೂರ್ಣಗೊಳಿಸಲು ತೀರ್ಮಾನಿಸಿದ್ದೆವು. ಬಜೆಟ್‌ನಲ್ಲಿಯೂ ಹಣ ಮೀಸಲಿಡಲು ಯೋಚಿಸಿದ್ದೇವೆ. ಆದರೆ, ಯೋಜನೆ ಅನುಷ್ಠಾನಗೊಳಿಸಲು ಮಹಾರಾಷ್ಟ್ರ, ಆಂಧ್ರ ಪ್ರದೇಶ ಬಿಡುತ್ತಿಲ್ಲ’ ಎಂದು ಹೇಳಿದರು.

‘ಈ ಹಿಂದೆ ಆದೇಶ ಬಂದಾಗ, ನಮ್ಮ ರಾಜ್ಯದವರು ಸುಪ್ರೀಂ ಕೋರ್ಟ್‌ಗೆ ಹೋಗಿದ್ದೇ ತಪ್ಪಾಯಿತು. ಅಂದು ಈ ತೀರ್ಮಾನವನ್ನು ಯಾರು ಮಾಡಿದರೊ ಗೊತ್ತಿಲ್ಲ. ನ್ಯಾಯಾಲಯಕ್ಕೆ ಹೋದರೆ ನಾವೇ ನಮ್ಮ ಕೈಯನ್ನು ಮೊಸಳೆ ಬಾಯಿಗೆ ನೀಡಿದಂತೆ’ ಎಂದರು.

‘ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕರೆದುಕೊಂಡು ಹೋಗುವ ಯೋಜನೆ ಇದೆಯೇ’ ಎಂಬ ಪ್ರಶ್ನೆಗೆ, ‘ಇದರ ಪರಿಹಾರಕ್ಕೆ ಸರ್ವಪಕ್ಷ ನಿಯೋಗವನ್ನೇ ಕರೆದುಕೊಂಡು ಹೋಗಬೇಕು’ ಎಂದು ಹೇಳಿದರು.

ಈ ವಿಚಾರದಲ್ಲಿ ದೇವೇಗೌಡರ ಸಲಹೆ ಪಡೆಯಬಹುದಲ್ಲವೇ ಎಂದಾಗ, ‘ಅವರ ಆರೋಗ್ಯ ಸರಿಯಿಲ್ಲ. ಅದನ್ನು ಕಾಪಾಡಿಕೊಳ್ಳಬೇಕು. ಅವರ ಕಡೆ ಹೋರಾಟ ಏನು ಮಾಡಬೇಕೊ ಮಾಡಲಿ’ ಎಂದರು.

ರಾಜ್ಯದೆಲ್ಲೆಡೆ ಕಾಮಗಾರಿ ಸ್ಥಗಿತ; ಎಲ್ಲ ಜಿಲ್ಲೆಗಳ ಗುತ್ತಿಗೆದಾರರು ಭಾಗಿ

ಇದೇ 6ಕ್ಕೆ ಗುತ್ತಿಗೆದಾರರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಹಲವು ಇಲಾಖೆಗಳಲ್ಲಿ ಬಾಕಿ ಇರುವ ₹37 ಸಾವಿರ ಕೋಟಿ ಮೊತ್ತದ ಬಿಲ್ ಪಾವತಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ, ರಾಜ್ಯದ ಎಲ್ಲ ಭಾಗಗಳಲ್ಲಿ ಮಾರ್ಚ್ 6ರಂದು ಕಾಮಗಾರಿಗಳನ್ನು ನಿಲ್ಲಿಸಿ ರಾಜ್ಯ ಗುತ್ತಿಗೆದಾರರ ಸಂಘ ಮುಷ್ಕರ ನಡೆಸಲಿದೆ.

ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂದು ನಡೆಯಲಿರುವ ಪ್ರತಿಭಟನೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಗುತ್ತಿಗೆದಾರರು ಭಾಗವಹಿಸಲಿದ್ದಾರೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಸಚಿವರನ್ನು ಭೇಟಿ ಹಣ ಬಿಡುಗಡೆಗೆ ಎರಡು ವರ್ಷದಿಂದ ಮನವಿ ಮಾಡಿಕೊಳ್ಳಲಾಗಿದೆ. ಆದರೆ, ಈವರೆಗೆ ಹಣ ಬಿಡುಗಡೆಗೆ ಆಸಕ್ತಿ ತೋರಿಲ್ಲ. ಹೀಗಾಗಿ, ನಾವು ಮುಷ್ಕರ ನಡೆಸುತ್ತಿದ್ದೇವೆ’ ಎಂದು ಹೇಳಿದರು.

‘ಎರಡೂವರೆ ವರ್ಷದಲ್ಲಿ ಹಂತಹಂತವಾಗಿ ಹಣ ಬಿಡುಗಡೆ ಮಾಡಿದ್ದರೂ ಈ ವೇಳೆಗೆ ಸಾಕಷ್ಟು ಬಾಕಿ ಕಡಿಮೆಯಾಗುತ್ತಿತ್ತು. ಆದರೆ, ಮುಖ್ಯಮಂತ್ರಿಯವರು ಗುತ್ತಿಗೆದಾರರ ಸಂಘದೊಂದಿಗೆ ಅಧಿಕೃತವಾಗಿ ಸಭೆ ನಡೆಸಲಿಲ್ಲ. ಹಲವು ಬಾರಿ ಸಭೆ ನಿಗದಿಯಾದರೂ ನಡೆಯಲಿಲ್ಲ. ಬಿಲ್ ಬಾಕಿ ಅಷ್ಟೇ ಅಲ್ಲ, ನಮ್ಮ ಹಲವು ಸಮಸ್ಯೆಗಳನ್ನು ಅವರಲ್ಲಿ ಹೇಳಿಕೊಳ್ಳ ಬೇಕಿತ್ತು. ಅದಕ್ಕೂ ಅವರು ಅವಕಾಶ ಕೊಡಲಿಲ್ಲ’ ಎಂದು ದೂರಿದರು.

‘ಲೋಕೋಪಯೋಗಿ ಇಲಾಖೆ ಮತ್ತು ಜಿಬಿಎ (ಹಿಂದಿನ ಬಿಬಿಎಂಪಿ) ಹೊರತುಪಡಿಸಿದರೆ ಉಳಿದ ಯಾವ ಇಲಾಖೆಯಲ್ಲೂ ಬಿಲ್ ಪಾವತಿಯಲ್ಲಿ ಜ್ಯೇಷ್ಠತೆ ಪಾಲಿಸುತ್ತಿಲ್ಲ. ವ್ಯಾಟ್ ವ್ಯತ್ಯಾಸ ಮೊತ್ತವನ್ನು ಸರ್ಕಾರವೇ ಭರಿಸಲು ತೀರ್ಮಾನವಾಗಿದ್ದರೂ ಅದರ ಆದೇಶವಾಗಿಲ್ಲ. ಹೀಗೆ ಹಲವು ಸಮಸ್ಯೆಗಳಿದ್ದರೂ ಅದನ್ನು ಆಲಿಸುವ ಸೌಜನ್ಯವೂ ಮುಖ್ಯಮಂತ್ರಿ ಹಾಗೂ ಸಚಿವರಿಗಿಲ್ಲ’ ಎಂದು ದೂರಿದರು.

ಗುತ್ತಿಗೆದಾರರ ಬೇಡಿಕೆಗಳೇನು?

- ಬಾಕಿ ಮೊತ್ತವನ್ನು ಸಂಪೂರ್ಣವಾಗಿ ಕೂಡಲೇ ಬಿಡುಗಡೆ ಮಾಡಬೇಕು
- ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಅನುವಾಗುವಂತೆ ‘ಸಿಂಗಲ್ ಕಾಮಗಾರಿ’ ಟೆಂಡರ್ ಕರೆಯಬೇಕು
- ನಗರಾಭಿವೃದ್ಧಿ ಇಲಾಖೆಯ 10 ನಗರ ಪಾಲಿಕೆಗಳಲ್ಲಿ ದೊಡ್ಡಮೊತ್ತದ ಪ್ಯಾಕೇಜ್ ಟೆಂಡರ್ ಕೈಬಿಡಬೇಕು
- ಜಲಜೀವನ್ ಮಿಷನ್‌ನಡಿಯ ಕಾಮಗಾರಿಗಳನ್ನು ಕೆಆರ್‌ಐಡಿಎಲ್/ ನಿರ್ಮಿತಿ ಕೇಂದ್ರಕ್ಕೆ ಮಾತ್ರ ನೀಡಬಾರದು
- ಗುತ್ತಿಗೆದಾರರ ಸಂಕಷ್ಟಗಳನ್ನು ಆಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತ ಸಭೆ ಕರೆಯಬೇಕು



ಸಿ.ಎಂ, ಸಚಿವರ ನಿರ್ಲಕ್ಷ್ಯದಿಂದ ಮುಷ್ಕರದ ಹಾದಿ ಹಿಡಿದಿದ್ದೇವೆ. ಸರ್ಕಾರ ಇದಕ್ಕೂ ಸ್ಪಂದಿಸದಿದ್ದರೆ ಮುಂದೆ ತೀವ್ರ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ

ಆರ್. ಮಂಜುನಾಥ್, ಅಧ್ಯಕ್ಷ
ರಾಜ್ಯ ಗುತ್ತಿಗೆದಾರರ ಸಂಘ

ಸಾಂಸ್ಕೃತಿಕ ಮುನ್ನೋಟ

ಏಕತಂ ಹೋಳಿ ಮ್ಯೂಸಿಕ್ ಫೆಸ್ಟ್

ಬೆಂಗಳೂರು: ಏಕತಂ ವತಯಿಂದ ಮಾ. 6ರಿಂದ 8ರವರೆಗೆ ಪ್ರತಿದಿನ ಸಂಜೆ 5ಕ್ಕೆ ಬೆಂಗಳೂರು ಗಾಯನ ಸಮಾಜದಲ್ಲಿ ‘ಏಕತಂ ಹೋಳಿ ಮ್ಯೂಸಿಕ್ ಫೆಸ್ಟ್’ ಹಮ್ಮಿಕೊಳ್ಳಲಾಗಿದೆ.

ಮಾ. 6ರಂದು ಸಂಜೆ 5ಕ್ಕೆ ಗಾಯಕರಾದ ಕೀರ್ತನ್ ಹೊಳ್ಳ ಮತ್ತು ಶ್ರೀಹರಿ ಕುಲಕರ್ಣಿ ಅವರ ಸಂಗೀತ ಕಛೇರಿ ನಡೆಯಲಿದ್ದು, ತೇಜಸ್ ಕಟೋಟಿ (ಹಾರ್ಮೋನಿಯಂ), ಸಾಗರ್ ಭಾರತ್‌ರಾಜ್ (ತಬಲಾ) ಸಾಥ್ ನೀಡಲಿದ್ದಾರೆ. ಸಂಜೆ 7ಕ್ಕೆ ಎನ್ ರಾಜಮ್, ಸಂಗೀತಾ ಶಂಕರ್ ಮತ್ತು ರಾಗಿಣಿ ಶಂಕರ ಅವರು ವಿಶೇಷ ವಾದ್ಯಗಳನ್ನು ನುಡಿಸಲಿದ್ದಾರೆ.

ಮಾ. 7ರಂದು ಸಂಜೆ 5ಕ್ಕೆ ಗಾಯಕ ಅಣ್ಣವರಪು ರಾಮಸ್ವಾಮಿ ಅವರಿಗೆ ಮೈಸೂರು ವಾಸುದೇವಾಚಾರ್ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪಂಡಿತ್ ಪರಮೇಶ್ವರ ಹೆಗಡೆ ಅವರಿಗೆ ಗಂಗೂಬಾಯಿ ಹಾನಗಲ್ ಪ್ರಶಸ್ತಿ ನೀಡಲಾಗುತ್ತದೆ. ಸಂಜೆ 7ಕ್ಕೆ ನಾಗರಾಜ ರಾವ್ ಹವಾಲ್ದಾರ್ ಅವರಿಂದ ವಾದ್ಯಸಂಗೀತ ಇರಲಿದೆ.

ಮಾ. 8ರಂದು ಗಾಯಕರಾದ ಸಂಜನಾ ಮೀನಾಕ್ಷಿ, ವಿಶ್ರುತಿ ಗಿರೀಶ್ ಅವರ ಸಂಗೀತ ಕಛೇರಿ ನಡೆಯಲಿದ್ದು, ವೈಭವ್ ರಮಣಿ (ಪೀಟಿಲು), ಕೌಶಿಕ್ ಶ್ರೀಧರ್ (ಮೃದಂಗ), ಸುಮುಖ್ (ಖಂಜೀರಾ) ಸಾಥ್ ನೀಡಲಿದ್ದಾರೆ. ಸಂಜೆ 7ಕ್ಕೆ ಗಾಯಕರಾದ ರಂಜನಿ ಮತ್ತು ಗಾಯತ್ರಿ ಅವರು ಕರ್ನಾಟಕ ಸಂಗೀತ ಕಛೇರಿ ನಡೆಸಿಕೊಡಲಿದ್ದು, ದೆಹಲಿ ಸಾಯಿರಾಂ (ಮೃದಂಗ), ಅನಿರುದ್ಧ ಆತ್ರೇಯ (ಖಂಜೀರ) ಸಾಥ್ ನೀಡಲಿದ್ದಾರೆ. ಈ ಸಂಗೀತ ಕಛೇರಿಗೆ ಉಚಿತ ಪ್ರವೇಶ.



ಕೀರ್ತನ್ ಹೊಳ್ಳ

‘ಬಭ್ರುವಾಹನ ಕಾಳಗ’ ಯಕ್ಷಗಾನ ಪ್ರದರ್ಶನ

ಬೆಂಗಳೂರು: ಯಕ್ಷಕಲಾ ಅಕಾಡೆಮಿಯಿಂದ ಇದೇ 6ರಂದು ಸಂಜೆ 6ಕ್ಕೆ ಜೆ.ಸಿ. ರಸ್ತೆಯಲ್ಲಿ ಇರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ಕೆ. ಕೃಷ್ಣಮೂರ್ತಿ ತುಂಗ ನಿರ್ದೇಶನದ ‘ಬಭ್ರುವಾಹನ ಕಾಳಗ’ ಯಕ್ಷಗಾನ ಪ್ರದರ್ಶನ ನಡೆಯಲಿದೆ.

ಹಿಮ್ಮೇಳದಲ್ಲಿ ಭಾಗವತರಾಗಿ ಚಿತ್ಕಲಾ ಕೆ. ತುಂಗ, ಸಂಪತ್ ಆಚಾರ್ಯ (ಮದ್ದಳೆ), ಮನೋಜ್ ಆಚಾರ್ಯ (ಚೆಂಡೆ), ಮುಮ್ಮೇಳದಲ್ಲಿ ರವಿ ಮಡೋಡಿ, ಶಶಿರಾಜ್ ಸೋಮಯಾಜಿ, ಗುರುರಾಜ ಭಟ್, ಅರ್ಚನಾ ಅಡಿಗ, ರಾಘವೇಂದ್ರ ಐತಾಳ, ಅಭಿನವ ತುಂಗ, ಮನೋಜ್ ಭಟ್, ಕೃಷ್ಣಶಾಸ್ತ್ರಿ, ಸದಾಶಿವ ಕೆ., ಆದಿತ್ಯ ಹೊಳ್ಳ, ಚೇತನಾ ಹೆಗಡೆ, ವೈಷ್ಣವಿ ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ಶುಭಾ ಧನಂಜಯ್, ಆರ್. ಚಂದ್ರಶೇಖರ್, ಎಚ್. ಮಂಜುನಾಥ್ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿಧಿ ಶ್ರೀರಾಮ–ಜಾಬಾಲಿ ಸಂವಾದ

ಬೆಂಗಳೂರು: ಸಪ್ತಕ ಬೆಂಗಳೂರು ವತಿಯಿಂದ ಮಾ. 7ರಂದು ಬೆಳಿಗ್ಗೆ 10ಕ್ಕೆ ಬನಶಂಕರಿ ಎರಡನೇ ಹಂತದಲ್ಲಿ ಇರುವ ಸುಚಿತ್ರಾ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿಯಲ್ಲಿ ‘ಶ್ರೀರಾಮ–ಜಾಬಾಲಿ ಸಂವಾದ’ ತಾಳಮದ್ದಳೆ ನಡೆಯಲಿದೆ.

ಹಿಮ್ಮೇಳದಲ್ಲಿ ಭಾಗವತರಾಗಿ ಪ್ರಸನ್ನ ಕುಮಾರ್ ಹೆಗಡೆ, ಗುರುಮೂರ್ತಿ ವೈದ್ಯ (ಮದ್ದಳೆ) ಸಾಥ್ ನೀಡಲಿದ್ದು, ಮುಮ್ಮೇಳದಲ್ಲಿ ಶ್ರೀರಾಮನಾಗಿ ನಾರಾಯಣ ಯಾಜಿ ಸಾಲೆಬೈಲು, ಜಾಬಾಲಿಯಾಗಿ ಕೆ.ಈ. ರಾಧಾಕೃಷ್ಣ ಹಾಗೂ ವಸಿಷ್ಠನಾಗಿ ರವಿ ಮಡೋಡಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಗೀತ ಕಛೇರಿ 8ಕ್ಕೆ



ತೇಜಸ್ವಿನಿ ವೆರ್ಣೆಕರ್

ಬೆಂಗಳೂರು: ಸಪ್ತಕ ಬೆಂಗಳೂರು ವತಿಯಿಂದ ಮಾ. 8ರಂದು ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿ ಇರುವ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ. ಗಾಯಕಿ ತೇಜಸ್ವಿ ವೆರ್ಣೆಕರ್ ಅವರು ಸಂಗೀತ ಕಛೇರಿ ನಡೆಸಿಕೊಡಲಿದ್ದು, ವಿಜೇತಾ ಹೆಗಡೆ (ತಬಲಾ), ಶ್ರೀರಕ್ಷಾ ಶಾನಭೋಗ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ. ಇದರ ಜೊತೆಗೆ ಸಹನಾ ಬ್ಯಾನರ್ಜಿ ಸಿತಾರ್ ವಾದನ ನಡೆಸಿ ಕೊಡಲಿದ್ದು, ರೂಪಕ ಕಲ್ಲೂರಕರ್ ತಬಲಾ ಸಾಥ್ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ಮಾಗಧವಧೆ’, ‘ಭಸ್ಮಾಸುರ ಮೋಹಿನಿ’ ಯಕ್ಷಗಾನ

ಬೆಂಗಳೂರು: ಯಕ್ಷಗಾನ ತಪಸ್ಸಂಘದಿಂದ ಮಾ. 8ರಂದು ಮಧ್ಯಾಹ್ನ 3ರಿಂದ ರಾತ್ರಿ 9 ಗಂಟೆಯವರೆಗೆ ಜಯನಗರದ ಎಂಟನೇ ಬ್ಲಾಕ್‌ನಲ್ಲಿರುವ ಜಯರಾಮ ಸೇವಾ ಮಂಡಳಿಯಲ್ಲಿ ‘ಮಾಗಧವಧೆ’ ಹಾಗೂ ‘ಭಸ್ಮಾಸುರ ಮೋಹಿನಿ (ಉತ್ತರಾರ್ಧ)’ ಪೌರಾಣಿಕ ಯಕ್ಷಗಾನ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ರಂಗ ಸಂತಸ ಮಾ. 10ರಿಂದ

ಬೆಂಗಳೂರು: ಅಂತರಂಗ ತಂಡದಿಂದ ಮಾ. 10ರಿಂದ 12ರವರೆಗೆ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿ ಇರುವ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣದಲ್ಲಿ ‘ರಂಗ ಸಂತಸ’ ನಾಟಕೋತ್ಸವ ನಡೆಯಲಿದೆ.

ಮಾ. 10ರಂದು ಸಂಜೆ 6.30ಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಉದ್ಘಾಟನೆ ಮಾಡಲಿದ್ದು, ಗುರುರಾಜ್ ಪಿ.ವಿ. ಅವರಿಗೆ ‘ಮೇಕಪ್ ನಾಣಿ’ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ‘ತಾರ’ ನಾಟಕವೂ ಪ್ರದರ್ಶನಗೊಳ್ಳಲಿದೆ. ಮಾ. 11ರಂದು ಸಂಜೆ 6.30ಕ್ಕೆ ‘ಜತೆಗಿರುವನು ಚಂದಿರ’ ನಾಟಕ ಹಾಗೂ ಮಾ. 12ರಂದು ‘ವರ್ಣ ಪಲ್ಲಟ’ ನಾಟಕ ಪ್ರದರ್ಶನವಾಗಲಿದೆ. ಈ ನಾಟಕೋತ್ಸವಕ್ಕೆ ಉಚಿತ ಪ್ರವೇಶ ಇದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

‘ಡಿಕೆಶಿ ಹೇಳಿರುವುದು ಸರಿ’

ಬೆಂಗಳೂರು: ‘ಕೆಪಿಸಿಸಿಗೆ ಹೊಸ ನಾಯಕತ್ವ ಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿರುವುದು ಸರಿಯಾಗಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಮಯ ಬಂದಾಗ ಇಂತಹ ಬದಲಾವಣೆಗಳು ಆಗುತ್ತವೆ. ಶಿವಕುಮಾರ್ ಹೇಳಿರುವುದರಲ್ಲಿ ಏನೂ ತಪ್ಪಿಲ್ಲ. ಹೊಸ ನಾಯಕತ್ವವನ್ನು ಬೆಳೆಸಬೇಕಿದೆ’ ಎಂದರು.

ಶಿವಕುಮಾರ್ ಅವರು ಔತಣಕೂಟ ಆಯೋಜಿಸಿರುವ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಶಿವಕುಮಾರ್ ಸುದೀರ್ಘವಾಗಿ ಪಕ್ಷ ನಡೆಸಿದ್ದಾರೆ. ಎಲ್ಲರ ಸಹಕಾರದಿಂದ ನಡೆಸಲು ಸಾಧ್ಯವಾಯಿತು ಎಂದು ಊಟಕ್ಕೆ ಆಹ್ವಾನಿಸಿದ್ದಾರೆ. ನನ್ನ ದೃಷ್ಟಿಯಲ್ಲಿ ಅದೇನೂ ತಪ್ಪಲ್ಲ’ ಎಂದರು.

ಶಾಸಕರು ವಿದೇಶ ಪ್ರವಾಸಕ್ಕೆ ಹೋಗಿ ಬಂದ ವಿಚಾರ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಏಕೆ ಹೋಗಿದ್ದರು? ಯಾವ ಅಧ್ಯಯನಕ್ಕೆ ಹೋಗಿದ್ದರೆಂದು ವಿದೇಶಕ್ಕೆ ಹೋಗಿ ಬಂದ ಶಾಸಕರನ್ನೇ ಕೇಳಿ’ ಎಂದರು.

ಉಬರ್ ಪರವಾನಗಿ ನವೀಕರಣ

ಬೆಂಗಳೂರು: ಉಬರ್ ಅಗ್ರಿಗೇಟರ್ ಕಂಪನಿಯ ಸಾರಿಗೆ ಪರವಾನಗಿಯನ್ನು 2026ರ ಡಿಸೆಂಬರ್ 30ರವರೆಗೆ ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ (ಕೆಎಸ್‌ಟಿಎ) ನವೀಕರಿಸಿದೆ. ಪರವಾನಗಿಯು ತ್ರಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳಿಗೆ ಮಾತ್ರ ಅನ್ವಯವಾಗಲಿದೆ.

ಸಾರಿಗೆ ನಿಯಮಗಳು–2016ರ ಅಡಿಯಲ್ಲಿ 2021ರ ಡಿ.31ರಿಂದ ಅನ್ವಯವಾಗುವಂತೆ ಐದು ವರ್ಷಗಳ ಅವಧಿಗೆ ಪರವಾನಗಿ ನವೀಕರಣಗೊಂಡಿದೆ ಎಂದು ಉಬರ್ ವಕ್ತಾರರು ತಿಳಿಸಿದ್ದಾರೆ.

‘ಈ ಪರವಾನಗಿಯು ರಾಜ್ಯದಾದ್ಯಂತ ಸೇವೆ ಸಲ್ಲಿಸುವ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಸುರಕ್ಷಿತ, ವಿಶ್ವಾಸಾರ್ಹ ಮತ್ತು ತಂತ್ರಜ್ಞಾನ ಆಧಾರಿತ ಚಲನಶೀಲ ಪರಿಸರಸ್ನೇಹಿ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರದೊಂದಿಗೆ ಕೆಲಸ ಮಾಡುವತ್ತ ಗಮನಹರಿಸಿದ್ದೇವೆ’ ಎಂದು ಹೇಳಿದ್ದಾರೆ.

ನಾಲ್ಕು ವರ್ಷಗಳಿಂದ ಇರಲಿಲ್ಲ ಪರವಾನಗಿ: ಓಲಾದ ಪರವಾನಗಿ 2021ರ ಜೂನ್ ಹಾಗೂ ಉಬರ್‌ನ ಪರವಾನಗಿ 2021ರ ಡಿಸೆಂಬರ್‌ಗೆ ಮುಕ್ತಾಯಗೊಂಡಿತ್ತು.

ಮೋದಿ ಕಾರ್ಯಕ್ರಮಕ್ಕೆ ₹33 ಕೋಟಿ

2023ರ ಚುನಾವಣೆಗೆ ಮೊದಲು ನಡೆದ ಒಂದು ದಿನದ ಕಾರ್ಯಕ್ರಮ

• ಚಿರಂಜೀವಿ ಕುಲಕರ್ಣಿ

ಮುಖ್ಯಾಂಶಗಳು
- ಜನರನ್ನು ಕರೆ ತರಲು ₹6.5 ಕೋಟಿ ಖರ್ಚು
- ಬೆಳಗಾವಿ ಕಾರ್ಯಕ್ರಮಕ್ಕೆ ₹14.35 ಕೋಟಿ ವೆಚ್ಚ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಗೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರ ಒಂದು ದಿನದ ಎರಡು ಕಾರ್ಯಕ್ರಮಕ್ಕೆ ಅಂದಿನ ಬಿಜೆಪಿ ಸರ್ಕಾರ ₹33 ಕೋಟಿ ಖರ್ಚು ಮಾಡಿತ್ತು. ಈ ಕಾರ್ಯಕ್ರಮಕ್ಕೆ ಜನರನ್ನು ಕರೆತರಲೆಂದೇ ₹6.5 ಕೋಟಿ ಖರ್ಚು ಮಾಡಲಾಗಿದೆ.

‘ಲಂಚಮುಕ್ತ ಕರ್ನಾಟಕ’ ಸಂಘಟನೆಯ ಮಂಜುನಾಥ ಹಿರೇಚೌಟಿ ಅವರು ಮಾಹಿತಿ ಹಕ್ಕು ಅಡಿ ಪಡೆದ ದಾಖಲೆಗಳಲ್ಲಿ ಈ ಮಾಹಿತಿ ಇದೆ. 2023ರ ಫೆಬ್ರುವರಿ 27ರಂದು ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆ ಕಾರ್ಯಕ್ರಮ ನೆರವೇರಿತ್ತು. ಇದಕ್ಕೆ ₹18.81 ಕೋಟಿ ಖರ್ಚು ಮಾಡಲಾಗಿತ್ತು.

ಈ ಕಾರ್ಯಕ್ರಮಕ್ಕೆ ಜನರನ್ನು ಕರೆ ತರಲು 1,800 ಬಸ್‌ಗಳನ್ನು ಬಳಸಿಕೊಳ್ಳಲಾಗಿತ್ತು. ಇದಕ್ಕಾಗಿ ₹4.11 ಕೋಟಿ ವೆಚ್ಚ ಮಾಡಲಾಗಿತ್ತು. ಪ್ರಧಾನಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಯವರ ಭಾಷಣದ ವೇದಿಕೆಗೆ ಮಳೆ ನಿರೋಧಕ ಜರ್ಮನ್ ಮಾದರಿಯ ಪೆಂಡಾಲ್ ಹಾಕಲು, ಗ್ರೀನ್ ರೂಂ, ಸ್ಟಾಲ್‌ಗಳು ಮತ್ತು ಹೂವಿನ ಅಲಂಕಾರಕ್ಕಾಗಿ ₹1.8 ಕೋಟಿ ವೆಚ್ಚ ಮಾಡಲಾಗಿತ್ತು. ಇವೆಲ್ಲದಕ್ಕೂ ವೆಚ್ಚ ಮಾಡಲು, ಲೋಕೋಪಯೋಗಿ ಇಲಾಖೆ ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4(ಜಿ) ಅಡಿ ವಿನಾಯ್ತಿ ಪಡೆದಿತ್ತು.

ಈ ಕಾರ್ಯಕ್ರಮದ ಬಳಿಕ ಬೆಳಗಾವಿಯಲ್ಲಿ ನಡೆದ ಮತ್ತೊಂದು ಕಾರ್ಯಕ್ರಮಕ್ಕೆ ₹14.35 ಕೋಟಿ ವೆಚ್ಚ ಮಾಡಲಾಗಿತ್ತು. ಕಾರ್ಯಕ್ರಮಕ್ಕೆ ಜನರನ್ನು ಕರೆದುಕೊಂಡು ಬರಲೆಂದೇ ₹2.5 ಕೋಟಿ ವೆಚ್ಚ ಮಾಡಲಾಗಿತ್ತು. ಮಂಜುನಾಥ ಅವರು ಈ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆಯಲು 2023ರ ಮಾರ್ಚ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. 2026ರ ಜನವರಿಯಲ್ಲಿ ಮಾಹಿತಿ ದೊರೆತಿದೆ.

‘ಹಣ ಬಳಕೆಯಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವದ ಕೊರತೆ ಕಂಡುಬಂದಿದೆ. ಸಾರ್ವಜನಿಕರ ಹಣವು ಪ್ರಚಾರಕ್ಕಾಗಿ ಇರುವ ಸಂಪನ್ಮೂಲವಲ್ಲ. ಚುನಾವಣೆ ಸಂದರ್ಭದಲ್ಲಿ ಅಭಿವೃದ್ಧಿ ಯೋಜನೆಗಳ ಪ್ರಚಾರಕ್ಕೆ ರಾಜಕೀಯ ವೇದಿಕೆಯನ್ನು ಬಳಸಿಕೊಳ್ಳಬಾರದು’ ಎಂದು ಮಂಜುನಾಥ್ ಹೇಳಿದ್ದಾರೆ.

ಈ ಕುರಿತು ಅಂದಿನ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರನ್ನು ಪ್ರಶ್ನಿಸಿದಾಗ, ‘ವೆಚ್ಚದ ನಿರ್ದಿಷ್ಟ ಮಾಹಿತಿ ನೆನಪಿನಲ್ಲಿಲ್ಲ. ಈ ಬಗ್ಗೆ ಮಾಹಿತಿ ಪಡೆದು ಪ್ರತಿಕ್ರಿಯಿಸುತ್ತೇನೆ’ ಎಂದು ಹೇಳಿದರು.

ವೆಚ್ಚದ ಮಿತಿ ಹೇರಿಕೆ ಕಷ್ಟದ ಕೆಲಸ: ಸತೀಶ ಜಾರಕಿಹೊಳಿ

‘ಇಂತಹ ವೆಚ್ಚಗಳ ಮೇಲೆ ಮಿತಿ ವಿಧಿಸುವ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು. ಆದರೆ, ಅದು ಅಷ್ಟು ಸುಲಭದ ಕೆಲಸವಲ್ಲ. ನಾನು ಸಚಿವನಾದ ಬಳಿಕ ಕೆಟಿಪಿಪಿ ಕಾಯ್ದೆಯಡಿ ವಿನಾಯಿತಿ ಪಡೆಯುವುದಕ್ಕೆ ತಡೆ ಹಾಕಿದ್ದೇನೆ. ಆದರೆ ಪ್ರಧಾನಿಯವರ ಕಾರ್ಯಕ್ರಮಗಳಿಗೆ ವೆಚ್ಚದ ಮಿತಿ ಹೇರುವುದು ಕಷ್ಟದ ಕೆಲಸ. ಈ ಕುರಿತಂತೆ ಕಡತಗಳನ್ನು ಪರಿಶೀಲಿಸಿ, ತೀರ್ಮಾನ ತೆಗೆದುಕೊಳ್ಳುತ್ತೇನೆ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಪ್ರತಿಕ್ರಿಯಿಸಿದರು.

ಚಿಟಿಕೆ ಸುದ್ದಿ

ಸಿಇಟಿ ಶುಲ್ಕ ಪಾವತಿ: 7ಕ್ಕೆ ಕೊನೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಹಾಗೂ ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಮಾರ್ಚ್ 7ರವರೆಗೆ ಅವಕಾಶ ನೀಡಲಾಗಿದೆ.

3.47 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು 3.36 ಲಕ್ಷ ಅಭ್ಯರ್ಥಿಗಳು ನಿಗದಿತ ಶುಲ್ಕ ಪಾವತಿಸಿದ್ದಾರೆ. ಇನ್ನೂ 9 ಸಾವಿರ ಮಂದಿ ಶುಲ್ಕ ಪಾವತಿಸಬೇಕಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಮಾಹಿತಿ ನೀಡಿದ್ದಾರೆ.

ನೇಮಕಾತಿ: ಅಂಕಪಟ್ಟಿ ಪ್ರಕಟ

ಕಲ್ಯಾಣ ಕರ್ನಾಟಕ ವೃಂದದ ವಿವಿಧ ಹುದ್ದೆಗಳಿಗೆ ಫೆ.21 ಮತ್ತು 22ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆದಿದ್ದು, ಅವುಗಳ ಅಂತಿಮ ಕೀ ಉತ್ತರ ಹಾಗೂ ಅಭ್ಯರ್ಥಿಗಳು ಗಳಿಸಿದ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಂಕ ಪಟ್ಟಿಗೆ ಆಕ್ಷೇಪಣೆಗಳಿದ್ದರೆ ಮಾ. 6 ರಂದು ಬೆಳಿಗ್ಗೆ 11ರ ಒಳಗೆ ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಕಾಣೆಯಾಗಿದ್ದ ಸ್ವಾಮೀಜಿ ಪತ್ತೆ



ಕಾರದ ಮಠದ ವೀರಬಸವ ಸ್ವಾಮೀಜಿ

ತುಮಕೂರು: ತಾಲ್ಲೂಕಿನ ಬೆಳ್ಳಾವಿ ಕಾರದೇಶ್ವರ ಮಠದಿಂದ ಬುಧವಾರ ಬೆಳಗಿನ ಜಾವ 5 ರಿಂದ ನಾಪತ್ತೆ ಆಗಿದ್ದ ವೀರಬಸವ ಸ್ವಾಮೀಜಿ ಮಧ್ಯಾಹ್ನದ ವೇಳೆಗೆ ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಕಾಣಿಸಿಕೊಂಡರು.

ಕಾರನ್ನು ಮಠದಲ್ಲಿಯೇ ಬಿಟ್ಟು ಸ್ವಾಮೀಜಿ ಮಠ ತೊರೆದಿದ್ದರು. ಇದು ಗೊಂದಲಕ್ಕೆ ಕಾರಣವಾಗಿತ್ತು. ಮಧ್ಯಾಹ್ನದ ವೇಳೆಗೆ ಸಿದ್ಧಗಂಗಾ ಮಠದಲ್ಲಿ ಸ್ವಾಮೀಜಿ ಕಾಣಿಸಿಕೊಂಡ ಬಳಿಕ ಆತಂಕ ದೂರವಾಯಿತು.

ಬೆಳಗಿನ ಜಾವ ಮಠದಿಂದ ಸುಮಾರು 15 ಕಿ.ಮೀ ನಡೆದುಕೊಂಡೇ ಸಿದ್ಧಗಂಗಾ ಮಠಕ್ಕೆ ಬಂದಿದ್ದಾರೆ. ಮಠದ ಬಳಿಯ ಫ್ಲೆಕ್ಸ್ ವಿಚಾರಕ್ಕೆ ನಡೆದ ಗಲಾಟೆಯಿಂದ ನೊಂದು ಮಠ ತೊರೆದಿದ್ದರು ಎನ್ನಲಾಗಿದೆ.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸ್ವಾಮೀಜಿ, ‘ಸಿದ್ಧಲಿಂಗ ಸ್ವಾಮೀಜಿ ಮಠಕ್ಕೆ ಆಹ್ವಾನಿಸುತ್ತಲೇ ಇದ್ದರು. ಈಗ ಬಂದಿದ್ದೇನೆ. ಸಿದ್ಧಲಿಂಗ ಸ್ವಾಮೀಜಿ ಹೇಳುವವರೆಗೂ ಇಲ್ಲಿಯೇ ಇರುತ್ತೇನೆ’ ಎಂದರು.

ಜೀತದಿಂದ ರಕ್ಷಣೆ

ಸಕಲೇಶಪುರ (ಹಾಸನ): ತಾಲ್ಲೂಕಿನ ಜಾನೇಕೆರೆಯಲ್ಲಿ ಜೀತಕ್ಕೆ ತಳ್ಳಲ್ಪಟ್ಟಿದ್ದ ಹಾಸನ ತಾಲ್ಲೂಕಿನ 13 ವರ್ಷದ ಬಾಲಕನನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಹಾಗೂ ಮೈಸೂರಿನ ಒಡನಾಡಿ ಸಂಸ್ಥೆಯವರು ಬುಧವಾರ ಪತ್ತೆ ಹಚ್ಚಿ ರಕ್ಷಿಸಿದ್ದಾರೆ.

ಆರೋಪಿ, ಶ್ರೀರಾಮ ಸೇನೆ ರಾಜ್ಯ ಘಟಕದ ಸಹ ಕಾರ್ಯದರ್ಶಿ ಹೇಮಂತ್‌ಕುಮಾರ್ ಜಾನೇಕೆರೆ ಎಂಬಾತನ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಾಲಕನಿಗೆ ತಂದೆ ಇಲ್ಲ. ತಾಯಿಗೆ ಅನಾರೋಗ್ಯ. ಶಿಕ್ಷಣ ಕೊಡಿಸುವುದಾಗಿ ಬಾಲಕನಿಗೆ ಭರವಸೆ ನೀಡಿ ಜೀತಕ್ಕೆ ಇರಿಸಿಕೊಂಡಿದ್ದ. ಬಾಲಕನನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ’ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ದಿಲೀಪ್ ತಿಳಿಸಿದರು.

‘ಬಾಲಕನನ್ನು ಕೊಟ್ಟಿಗೆಗಿಂತ ಕಡೆಯಾದ ಜಾಗದಲ್ಲಿರಿಸಿದ್ದು, ದಿನವಿಡೀ ದುಡಿಸಲಾಗುತ್ತಿದೆ ಎಂದು ಸ್ಥಳೀಯರೊಬ್ಬರು ಕರೆ ಮಾಡಿ ತಿಳಿಸಿದ್ದರು’ ಎಂದು ‘ಒಡನಾಡಿ’ ಸಂಸ್ಥೆಯ ಸ್ಟ್ಯಾನ್ಲಿ ಹೇಳಿದರು.

ನಿಧನ ವಾರ್ತೆ

ಜೆರ್‍ರಿ ಫೈಸ್



ಜೆರ್‍ರಿ ಫೈಸ್

ಹುಣಸೂರು (ಮೈಸೂರು ಜಿಲ್ಲೆ): ಆದಿವಾಸಿ ಸಮುದಾಯದ ಅಭಿವೃದ್ಧಿಗೆ 1980ರಲ್ಲಿ ‘ಡೀಡ್’ ಎಂಬ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆ ಪ್ರಾರಂಭಿಸಿದ್ದ ಜೆರ್‍ರಿ ಫೈಸ್ (87) ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.

ಅಮೆರಿಕದಲ್ಲಿರುವ ಪುತ್ರಿ ಬರಬೇಕಿದ್ದು, ಮಾರ್ಚ್ 7ರಂದು ಅಂತ್ಯಕ್ರಿಯೆ ನಡೆಯಲಿದೆ.

ಪಾರ್ಥಿವ ಶರೀರವನ್ನು ಮೈಸೂರಿನ ಸೇಂಟ್ ಜೋಸೆಫ್ ಆಸ್ಪತ್ರೆಯಲ್ಲಿರಿಸಲಾಗಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

‘ಡೀಡ್’ ಸಂಸ್ಥೆಯಲ್ಲಿ ಜೆರ್‍ರಿ ಅವರು ಆದಿವಾಸಿಗಳ ಆರೋಗ್ಯ, ಶಿಕ್ಷಣ, ವಸತಿ ಮತ್ತು ಅರಣ್ಯ ಹಕ್ಕುಗಳಿಗಾಗಿ ಶ್ರಮಿಸಿದ್ದರು. ರಾಜ್ಯದ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಮೊದಲ ಅಧ್ಯಕ್ಷರಾಗಿದ್ದರು.

ಬಾಬಾಬುಡನ್‌ಗಿರಿ: ಭಕ್ತಿಯ ಉರುಸ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಉರುಸ್ ಮೆರವಣಿಗೆ ಬುಧವಾರ ಭಕ್ತಿ-ಭಾವದಿಂದ ನಡೆಯಿತು.

ಒಳಗೆ ಪೂಜೆ ಮಾಡಲು ಅವಕಾಶ ನೀಡದ ಕಾರಣ ಗೇಟಿನ ಬಳಿಯೇ ಶಾಖಾದ್ರಿ ಮತ್ತು ಇತರರು ಪ್ರತಿಭಟನಾತ್ಮಕ ಪ್ರಾರ್ಥನೆ ಸಲ್ಲಿಸಿದರು.

ಗಂಧವನ್ನು ಅತ್ತಿಗುಂಡಿಯಿಂದ ಮೆರವಣಿಗೆಯಲ್ಲಿ ಬಾಬಾಬುಡನ್‌ಗಿರಿಗೆ ಸಂಜೆ ತರಲಾಯಿತು. ಮೆರವಣಿಗೆಯುದ್ದಕ್ಕೂ ಭಕ್ತರು ಗೀತೆಗಳನ್ನು ಹಾಡಿದರು. ವಿವಿಧೆಡೆಯಿಂದ ಬಂದಿದ್ದ ಭಕ್ತರು, ಫಕೀರರು ಪಾಲ್ಗೊಂಡಿದ್ದರು. ಗಂಧವು ದರ್ಗಾದ ಗೇಟಿನ ಮುಂಭಾಗಕ್ಕೆ ತಲುಪುತ್ತಿದ್ದಂತೆ ಭಕ್ತರು ನಾಣ್ಯಗಳನ್ನು ಚಿಮ್ಮಿ ಹರಕೆ ಸಲ್ಲಿಸಿದರು. ಪ್ರವೇಶದ್ವಾರದ ಗೇಟಿನ ಬಳಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ಭದ್ರತೆ ಒದಗಿಸಲಾಗಿತ್ತು.

ಎಲ್ಲ ಭಕ್ತರಿಗೆ ದರ್ಗಾ ದರ್ಶನಕ್ಕೆ ಅವಕಾಶ ನೀಡಲಾಯಿತು. ದರ್ಗಾದಲ್ಲಿ ಪೂಜೆ ಸಲ್ಲಿಸಲು ಜಿಲ್ಲಾಡಳಿತ ಅವಕಾಶ ನೀಡಲಿಲ್ಲ. ಶಾ ಖಾದ್ರಿ ಸೇರಿ ಹಲವರು ಗೇಟಿನ ಮುಂದೆಯೇ ಪ್ರಾರ್ಥನೆ ಸಲ್ಲಿಸಿದರು.

‘ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಜಿಲ್ಲಾಡಳಿತ ಪಾಲನೆ ಮಾಡುತ್ತಿಲ್ಲ. ಇದನ್ನು ಖಂಡಿಸಿ ಗೇಟಿನ ಎದುರೇ ಪ್ರಾರ್ಥನೆ ಸಲ್ಲಿಸಿ ವಾಪಸ್ ಬಂದಿದ್ದೇವೆ’ ಎಂದು ಸೈಯದ್ ಗೌಸ್ ಮೊಹಿಯುದ್ದೀನ್ ಶಾ ಖಾದ್ರಿ ತಿಳಿಸಿದರು.

ಇಂದು ಪ್ರತಿಭಟನೆ: ‘ಬಾಬಾಬುಡನ್‌ಗಿರಿ ವಿಷಯದಲ್ಲಿ ಜಾತ್ಯತೀತ ತತ್ವಕ್ಕೆ ಕಾಂಗ್ರೆಸ್ ಸರ್ಕಾರ ದ್ರೋಹ ಬಗೆಯುತ್ತಿದೆ. ಇದನ್ನು ಖಂಡಿಸಿ ಚಿಕ್ಕಮಗಳೂರಿನಲ್ಲಿ ಗುರುವಾರ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ’ ಎಂದು ಎದ್ದೇಳು ಕರ್ನಾಟಕ ಸಂಘಟನೆಯ ಕೆ.ಎಲ್. ಅಶೋಕ್ ತಿಳಿಸಿದ್ದಾರೆ.



ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಬುಧವಾರ ಉರುಸ್ ಮೆರವಣಿಗೆ ನಡೆಯಿತು

ಮಟ್ಕಾ: ಪಿಎಸ್‌ಐ ಅಮಾನತು

ಹಾವೇರಿ: ತಾಲ್ಲೂಕಿನ ಗುತ್ತಲದಲ್ಲಿ ನಡೆಯುತ್ತಿದ್ದ ಮಟ್ಕಾ ದಂಧೆ ಕುರಿತು ಶಾಸಕ ರುದ್ರಪ್ಪ ಲಮಾಣಿ ಅವರು ನೀಡಿದ ಮಾಹಿತಿ ಆಧಾರದಲ್ಲಿ, ಗುತ್ತಲ ಠಾಣೆಯ ಪಿಎಸ್‌ಐ ಬಸನಗೌಡ ಬಿರಾದಾರ ಅವರನ್ನು ಅಮಾನತು ಮಾಡಲಾಗಿದೆ.

ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ಮಾರ್ಚ್ 2ರಂದು ಶಾಸಕ ರುದ್ರಪ್ಪ ಗುತ್ತಲಕ್ಕೆ ಹೋಗಿದ್ದರು. ಅವರಿಗೆ ಮುತ್ತಿಗೆ ಹಾಕಿದ್ದ ಸ್ಥಳೀಯ ಮಹಿಳೆಯರು, ಕೊಠಡಿಯೊಂದರಲ್ಲಿ ನಡೆಯುತ್ತಿದ್ದ ಮಟ್ಕಾ ಬಗ್ಗೆ ಮಾಹಿತಿ ನೀಡಿದ್ದರು.

ಮಟ್ಕಾ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ದಾವಣಗೆರೆ ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಅವರು, ಪಿಎಸ್‌ಐ ಬಸನಗೌಡ ಬಿರಾದಾರ ಅವರನ್ನು ಕೆಲಸದಿಂದ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಇಲಾಖೆ ವಿಚಾರಣೆಗೆ ನಿರ್ದೇಶನ ನೀಡಿದ್ದಾರೆ.

ಕೊಠಡಿಯಲ್ಲಿ ಮಟ್ಕಾ ನಡೆಯುತ್ತಿದ್ದ ಬಗ್ಗೆ ಮಾಹಿತಿ ಇದ್ದರೂ ಪಿಎಸ್‌ಐ ಬಸನಗೌಡ ಬಿರಾದಾರ ಯಾವುದೇ ಕ್ರಮ ಕೈಗೊಂಡಿರಲಿಲ್ಲ ಎಂದು ಶಾಸಕ ಲಮಾಣಿ ಅವರು ತಿಳಿಸಿದ್ದರು.



ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ಬುಧವಾರ ನಿರ್ಮಲಾನಂದನಾಥ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ ಹಾಗೂ ವಿವಿಧ ಮಠಾಧೀಶರು ‘ಅವಭೃತ ಸ್ನಾನ’ ಮಾಡಿದರು

ಆದಿಚುಂಚನಗಿರಿ ಜಾತ್ರೆ ಸಂಪನ್ನ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ಫೆ.24ರಿಂದ ನಡೆದಿದ್ದ ಜಾತ್ರಾ ಮಹೋತ್ಸವ, ಕ್ಷೇತ್ರದ ಸಂಪ್ರದಾಯದಂತೆ ಅವಭೃತ ಸ್ನಾನ (ಯಜ್ಞ, ಯಾಗದ ನಂತರದ ಪರಿಶುದ್ಧತೆಗಾಗಿ ಮಾಡುವ ಸ್ನಾನ) ದೊಂದಿಗೆ ಬುಧವಾರ ಸಂಪನ್ನಗೊಂಡಿತು.

ನಿರ್ಮಲಾನಂದನಾಥ ಸ್ವಾಮೀಜಿ ಬುಧವಾರ ಶ್ರೀಕ್ಷೇತ್ರದ ದೇವಾಲಯಗಳಲ್ಲಿ ಹೋಮ, ಪೂಜೆ, ಧರ್ಮ ಧ್ವಜಾರೋಹಣ ಹಾಗೂ ಮಹಾಭಿಷೇಕ ನೆರವೇರಿಸಿದರು.

ಬಿಂದು ಸರೋವರದಲ್ಲಿ ಅವಭೃತ ಸ್ನಾನ ಹಾಗೂ ಮಹಾಭಿಷೇಕದ ಬಳಿಕ ಜಾತ್ರಾ ಮಹೋತ್ಸವಕ್ಕೆ ವಿಧ್ಯುಕ್ತ ತೆರೆ ಬಿದ್ದಿತು. ಭಕ್ತರೂ ಪಾಲ್ಗೊಂಡು ಭಕ್ತಿ ಸಮರ್ಪಿಸಿದರು.

ಅನ್ನದಾಸೋಹ ನಡೆಸಿದ ಭಕ್ತರು, ಪೊಲೀಸ್ ಭದ್ರತೆ ಕಲ್ಪಿಸಿದ್ದ ಬೆಳ್ಳೂರು ಠಾಣೆಯ ಎಸ್‌ಐ ರವಿಕುಮಾರ್ ಮತ್ತು ಸಿಬ್ಬಂದಿಯನ್ನು ಶ್ರೀಗಳು ಆಶೀರ್ವದಿಸಿದರು.

ದಂಪತಿ ಸೇರಿ ನಾಲ್ವರಿಂದ ದೀಕ್ಷೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಂಪತಿ ಸೇರಿ ಜೈನ ಸಮುದಾಯದ ನಾಲ್ವರು ಬುಧವಾರ, ಆಚಾರ್ಯ ಅಭಯ್ ಶೇಖರ್ ಸುರೀಶ್ವರ ಮಹಾರಾಜ್ ಅವರ ಮಾರ್ಗದರ್ಶನದಲ್ಲಿ ದೀಕ್ಷೆ ಸ್ವೀಕರಿಸಿ ಸನ್ಯಾಸ ಜೀವನ ಆರಂಭಿಸಿದರು.

ಇಲ್ಲಿನ ಲಲಿತ್ ಗಾರ್ಮೆಂಟ್ಸ್ ಮಾಲೀಕರಲ್ಲಿ ಒಬ್ಬರಾದ ಭರತ್ ಜೈನ್ (52), ಆರತಿ (50) ದಂಪತಿ, ಎಂ.ಬಿ.ಎ ಪದವೀಧರೆ ಕ್ರುನಾಲಿ ಜೈನ್ (30) ಹಾಗೂ ಬಿ.ಕಾಂ ಪದವೀಧರೆ ದೀಕ್ಷಿತಾ (25) ದೀಕ್ಷೆ ಸ್ವೀಕರಿಸಿದವರು.

ಭರತ್ ಜೈನ್ ಹಾಗೂ ಆರತಿ ದಂಪತಿಯ ಇಬ್ಬರು ಪುತ್ರರು ಮೂರು ವರ್ಷಗಳ ಹಿಂದೆ ಸನ್ಯಾಸ ದೀಕ್ಷೆ ಸ್ವೀಕರಿಸಿದ್ದರು. ಪುತ್ರರ ಮಾರ್ಗವನ್ನು ದಂಪತಿ ಅನುಸರಿಸಿದರು.

ನಗರದಲ್ಲಿ ನಡೆದ ಸನ್ಯಾಸ ದೀಕ್ಷೆ ವಿಧಿವಿಧಾನದ ವೇಳೆ ನಾಲ್ವರು ತೀರ್ಥಂಕರರ ಪೂಜೆ ನೆರವೇರಿಸಿದರು. ತೀರ್ಥಂಕರರ ಮೂರ್ತಿಗಳ ಮೇಲೆ ಅಕ್ಷತೆ ಹಾಕಿ ಪೂರ್ವಾಶ್ರಮದ ಜೀವನಕ್ಕೆ ವಿದಾಯ ಹೇಳಿದರು.

ಅಭಯ್ ಶೇಖರ್ ಸುರೀಶ್ವರ ಮಹಾರಾಜ್ ಅವರು ನಾಲ್ವರಿಗೂ ಪವಿತ್ರ ‘ರಜೋಹರನ್’ ನೀಡಿದರು. ‘ರಜೋಹರನ್’ ಕೈಗೆ ಬರುತ್ತಿದ್ದಂತೆ ಉಲ್ಲಾಸಭರಿತರಾಗಿ ತೀರ್ಥಂಕರರ ಪ್ರತಿಮೆಯ ಮುಂದೆ ಕುಣಿದಾಡಿದರು.

ದೀಕ್ಷೆಯ ಬಳಿಕ ಭರತ್ ಜೈನ್ ಅವರು ಭವೋದ್ವೇಗ್ ಶೇಖರ್ ವಿಜಯ್ ಮಹಾರಾಜ್, ಆರತಿ ಅವರು ಅರಹಂಧ್ಯಾನ್ ಪ್ರಭಾ, ಕ್ರುನಾಲಿ ಅವರು ಕ್ಷಾಮಾನಂದಿ ವರ್ಧನ ಹಾಗೂ ದೀಕ್ಷಿತಾ ಅವರು ದಯ ಸಿಂಧು ಪ್ರಭಾ ಎಂಬುದಾಗಿ ನಾಮಕರಣಗೊಂಡರು.

‘ಚೌಕಿಪೇಟೆಯಲ್ಲಿ ಇರುವ ಸುಪಾರ್ಶ್ವನಾಥ ಜೈನ ದೇವಸ್ಥಾನದಲ್ಲಿ ಧ್ಯಾನಕ್ಕೆ ಕುಳಿತ ಅವರು ಗುರುವಾರ ನಗರಕ್ಕೆ ವಿದಾಯ ಹೇಳಲಿದ್ದಾರೆ. ನಗರದಿಂದ ಈವರೆಗೂ 68 ಅನುಯಾಯಿಗಳು ಜೈನ ಸನ್ಯಾಸ ದೀಕ್ಷೆ ಸ್ವೀಕರಿಸಿದ್ದಾರೆ’ ಎಂದು ಜೈನ ಸಮುದಾಯದ ಮುಖಂಡ ಗೌತಮ್ ಜೈನ್ ತಿಳಿಸಿದರು.



ಜೈನ ಸಮುದಾಯದ ಆರತಿ, ದೀಕ್ಷಿತಾ, ಕ್ರುನಾಲಿ ಅವರು ದೀಕ್ಷೆ ಸ್ವೀಕಾರ ನಂತರ ಸನ್ಯಾಸಿ ಜೀವನಕ್ಕೆ ಪದಾರ್ಪಣೆ ಮಾಡಿದರು ಪ್ರಜಾವಾಣಿ ಚಿತ್ರ

ನೇಮಕಾತಿ: ಒಳ ಮೀಸಲಾತಿ ಪರಿಗಣಿಸಿ

ಪ್ರಜಾವಾಣಿ ವಾರ್ತೆ

> ದಪ್ಪ ಚರ್ಮದ ಸರ್ಕಾರಕ್ಕೆ ಯುವಕರು ಪ್ರತಿಭಟನೆ ನಡೆಸಿ ಬಾರುಕೋಲಿನಿಂದ ಹೊಡೆದ ಮೇಲೆ ಐವತ್ತು ಸಾವಿರ ಹುದ್ದೆ ಭರ್ತಿಗೆ ಸರ್ಕಾರ ಮುಂದಾಗಿದೆ
> **ಬಿ.ಶ್ರೀರಾಮುಲು,** ಮಾಜಿ ಸಚಿವ

ಬೆಂಗಳೂರು: ‘ಒಳಮೀಸಲಾತಿಯನ್ನು ಪರಿಗಣಿಸಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲ್ಲವಾದರೆ ಪಕ್ಷದ ವತಿಯಿಂದ ಹೋರಾಟ ಅನಿವಾರ್ಯ ಆಗುತ್ತದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಮೀಸಲಾತಿ ಪ್ರಮಾಣವನ್ನು ಸರ್ಕಾರ ಶೇ 50ರಿಂದ ಶೇ 56ಕ್ಕೆ ಏರಿಸಿದೆ. ಈಗ 50 ಸಾವಿರ ಹುದ್ದೆ ತುಂಬುತ್ತೀರೋ ಇಲ್ಲ 1 ಲಕ್ಷ ಹುದ್ದೆ ಭರ್ತಿ ಮಾಡುತ್ತೀರೋ ಎಂಬುದು ನಿಮಗೆ ಬಿಟ್ಟಿದ್ದು. ಎಲ್ಲ ಖಾಲಿ ಹುದ್ದೆಗಳನ್ನೂ ಮಾಡಿ ಎನ್ನುವ ಆಗ್ರಹ ನಮ್ಮದು’ ಎಂದು ಹೇಳಿದರು.

‘ಪ್ರಕರಣ ನ್ಯಾಯಾಲಯದಲ್ಲಿದೆ ಎಂಬ ಕುಂಟು ನೆಪ ಹೇಳದೇ ಯಾವುದೇ ಸಮುದಾಯಕ್ಕೂ ಅನ್ಯಾಯ ಆಗದಂತೆ ಉದ್ಯೋಗ ನೀಡಬೇಕು. ಮುಖ್ಯಮಂತ್ರಿಯವರು ಒಂದು ಕಡೆ ತೊಟ್ಟಿಲು ತೂಗಿ ಮತ್ತೊಂದು ಕಡೆ ಮಗುವನ್ನು ಚಿವುಟುವ ಕೆಲಸ ಮಾಡುತ್ತಿದ್ದಾರೆ. ಇದು ಅಕ್ಷಮ್ಯ ಅಪರಾಧ. ಹಳೆಯ ಮೀಸಲಾತಿ ಪ್ರಮಾಣದಲ್ಲಿ ನೇಮಕಾತಿ ಮಾಡಲು ಮುಂದಾಗಿರುವ ಸರ್ಕಾರ ರಾಜ್ಯದಲ್ಲಿ ಬೆಂಕಿ ಹಚ್ಚಲು ಹೊರಟಂತಿದೆ’ ಎಂದು ವಿಜಯೇಂದ್ರ ಟೀಕಿಸಿದರು.

‘ನೀವು ಎಷ್ಟು ದಿನ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿರುತ್ತೀರಿ ಎಂಬುದು ನಮಗೆ ಗೊತ್ತಿಲ್ಲ. ಆದರೆ, ಅಹಿಂದ ಸಮುದಾಯದ ಹೆಸರು ಹೇಳಿ ಅಧಿಕಾರ ಹಿಡಿದ ನೀವು ಆ ಸಮುದಾಯದ ತಾಳ್ಮೆ ಪರೀಕ್ಷೆ ಮಾಡಬೇಡಿ. ಶೋಷಿತ–ಪೀಡಿತ ಸಮುದಾಯಗಳನ್ನು ಕೆಣಕಬೇಡಿ. ಒಳಮೀಸಲಾತಿ ಜಾರಿ ಮಾಡದೇ ಖಾಲಿ ಹುದ್ದೆ ಭರ್ತಿ ಮಾಡುವ ಕೆಲಸ ಮಾಡಿದರೆ, ರಾಜ್ಯದಲ್ಲಿ ಮುಂದೆ ಆಗುವ ಘಟನೆಗಳಿಗೆ ನೀವೇ ಹೊಣೆಯಾಗಬೇಕಾಗುತ್ತದೆ’ ಎಂದೂ ಎಚ್ಚರಿಸಿದರು.

‘ಇದೇ 6ರಿಂದ ಬಜೆಟ್ ಅಧಿವೇಶನ ಆರಂಭ ಆಗುತ್ತಿದೆ. ಸರಣಿ ಪ್ರತಿಭಟನೆಗಳು ಬೆಂಗಳೂರಿನಲ್ಲಿ ಆರಂಭ ಆಗಲಿವೆ. ನುಡಿದಂತೆ ನಡೆದ ಸರ್ಕಾರ ಎಂದು ಹೇಳಿಕೊಳ್ಳುವ ನೀವು ಯಾವುದೇ ಭರವಸೆ ಈಡೇರಿಸಿಲ್ಲ. ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಅತಿಥಿ ಉಪನ್ಯಾಸಕರೂ ಹೋರಾಟ ಮಾಡುವ ಸಂದರ್ಭ ಸೃಷ್ಟಿಯಾಗಿದೆ’ ಎಂದು ಹೇಳಿದರು.

ಸಾರಿಗೆ ಸಂಸ್ಥೆಗಳ ನೌಕರರು, ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ವೈದ್ಯರು ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿಗೆ ಬಂದು ತಲುಪಿದ್ದಾರೆ. 108 ಆಂಬುಲೆನ್ಸ್ ಕೆಟ್ಟು ನಿಂತಿದ್ದು, ನೌಕರರಿಗೆ ಸಂಬಳ ಕೊಟ್ಟಿಲ್ಲ. ಅಲ್ಲದೆ, ಗುತ್ತಿಗೆದಾರರ ಬಿಲ್ ಬಾಕಿ ಸುಮಾರು ₹45 ಸಾವಿರ ಕೋಟಿಗೆ ತಲುಪಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ, ವಿಧಾನಪರಿಷತ್ ಸದಸ್ಯೆ ಹೇಮಲತಾ ನಾಯಕ್ ಇದ್ದರು.

ವಿದ್ಯುತ್ ದರ ಹೆಚ್ಚಳ ಕೈಬಿಡಿ: ಜೋಶಿ

ಹುಬ್ಬಳ್ಳಿ: ‘ಕೈಗಾರಿಕೆ ಮತ್ತು ವಾಣಿಜ್ಯ ಬಳಕೆಯ ವಿದ್ಯುತ್ ದರ ಹೆಚ್ಚಳದ ನಿರ್ಧಾರವನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.

‘ರಾಜ್ಯ ಸರ್ಕಾರ ಈಗ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ದರ ಹೆಚ್ಚಿಸಲು ತೀರ್ಮಾನಿಸಿದ್ದು, ಇದು ದುರಾಡಳಿತದ ಪರಮಾವಧಿ’ ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಫೋನ್ ಪೇ ಮೂಲಕ ಲಂಚ: ಬಂಧನ



ವಿಜಯ ಕುಮಾರ

ಹಾವೇರಿ: ಪಡಿತರ ಚೀಟಿ ಮಾಡಿಸಿಕೊಟ್ಟಿದ್ದಕ್ಕೆ ₹ 5 ಸಾವಿರ ಲಂಚ ಪಡೆದ ಆರೋಪದ ಮೇಲೆ ಆಹಾರ ನಿರೀಕ್ಷಕ (ಪ್ರಭಾರ) ವಿಜಯಕುಮಾರ ಗುಡಗೇರಿ ಎಂಬುವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

‘ವಿಜಯಕುಮಾರ ಅವರು ಹಿರೇಲಿಂಗದಹಳ್ಳಿಯ ಬೀರಪ್ಪ ಕಾಶಂಬಿ ಅವರಿಗೆ ಪಡಿತರ ಚೀಟಿ ಮಾಡಿಕೊಟ್ಟಿದ್ದರು. ಅದಕ್ಕಾಗಿ ಫೋನ್ ಪೇ ಮೂಲಕ ಲಂಚ ಪಡೆದಿದ್ದರು. ಈ ಕುರಿತ ದೂರು ಆಧರಿಸಿ ಆರೋಪಿ ವಿಜಯಕುಮಾರ ಅವರನ್ನು ಬಂಧಿಸಲಾಗಿದೆ’ ಎಂದು ಡಿವೈಎಸ್ಪಿ ಮಧುಸೂದನ್ ತಿಳಿಸಿದ್ದಾರೆ.

ಒಳ ಮೀಸಲು ಜಟಾಪಟಿ: ಇಂದು ನಿರ್ಣಯ

ಒಂದನೇ ಪುಟದಿಂದ...

ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಮಾಜಿ ಸಚಿವ ಎಚ್. ಆಂಜನೇಯ ನೇತೃತ್ವದಲ್ಲಿ ಎಡಗೈ ಸಮುದಾಯದ ನಾಯಕರು ಖರ್ಗೆಯವರನ್ನು ಭೇಟಿ ಮಾಡಿ, ನೇರ ನೇಮಕಾತಿಯಲ್ಲಿ ಒಳ ಮೀಸಲಾತಿ ಅನುಷ್ಠಾನ ಮಾಡುವ ಕುರಿತು ಚರ್ಚೆ ನಡೆಸಿದರು. ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಶಾಸಕ ಶ್ರೀನಿವಾಸ್ ಜೊತೆಗಿದ್ದರು.

ಖರ್ಗೆ ಭೇಟಿ ಬಳಿಕ ಮಾತನಾಡಿದ ಮುನಿಯಪ್ಪ, ‘ಎಲ್ಲರೂ ಒಟ್ಟಾಗಿ, ಸಮಸ್ಯೆ ಬಗೆಹರಿಸಿಕೊಳ್ಳಿ. ಯಾವುದೇ ಸಮಸ್ಯೆ ಆಗುವುದು ಬೇಡವೆಂದು ಖರ್ಗೆಯವರು ಸಲಹೆ ನೀಡಿದ್ದಾರೆ. ಯಾರಿಗೂ ಅನ್ಯಾಯ ಆಗುವುದೂ ಬೇಡ ಅಂದಿದ್ದಾರೆ. ನಾನು ಕೂಡ ಮುಖ್ಯಮಂತ್ರಿಗೆ ಹೇಳುತ್ತೇನೆಂದು ಹೇಳಿದ್ದಾರೆ’ ಎಂದರು.

‘ಖರ್ಗೆಯವರ ಸಲಹೆಗೆ ನಾವು ಸಮ್ಮತಿ ನೀಡಿದ್ದೇವೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಯಾವುದೇ ಜಾತಿಗೂ ಅನ್ಯಾಯ ಆಗಬಾರದು. ಇದು ನಮ್ಮ ನಿಲುವು. ಸಮಸ್ಯೆ ಬಗೆಹರಿಸಿಕೊಳ್ಳಲು ನಾವು ಸಿದ್ಧರಿದ್ದೇವೆ. ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಒಳ ಮೀಸಲಾತಿ ವಿಚಾರದ ಕುರಿತು ಚರ್ಚಿಸಿ, ಹಂಚಿಕೊಳ್ಳುತ್ತೇವೆ’ ಎಂದರು.

ಆರ್.ಬಿ. ತಿಮ್ಮಾಪುರ ಮಾತನಾಡಿ, ‘ನಾಯಕರಿಗೆ ವಿಷಯ ತಿಳಿಸುವುದು ನಮ್ಮ ಕರ್ತವ್ಯ. ಎಲ್ಲ ವಿಷಯವನ್ನು ಮುಖ್ಯಮಂತ್ರಿ ಜೊತೆ ಮಾತನಾಡುತ್ತೇನೆಂದು ಖರ್ಗೆ ಹೇಳಿದ್ದಾರೆ’ ಎಂದರು.

ಅದಕ್ಕೂ ಮೊದಲು ಸಚಿವರಾದ ಎಚ್.ಸಿ. ಮಹದೇವಪ್ಪ ಮತ್ತು ಜಿ. ಪರಮೇಶ್ವರ ಅವರು ಖರ್ಗೆಯವರನ್ನು ಭೇಟಿ ಮಾಡಿ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಈ ಬೆಳವಣಿಗೆಯ ನಂತರ, ಸದಾಶಿವನಗರದಲ್ಲಿರುವ ಪರಮೇಶ್ವರ ಅವರ ನಿವಾಸಕ್ಕೆ ಎಡಗೈ ಸಮುದಾಯದ ನಾಯಕರು ಭೇಟಿ ನೀಡಿ ಚರ್ಚೆ ನಡೆಸಿದರು.

ಸುದ್ದಿ 2 ನಿಮಿಷ

‘ಮೈಸೂರು ಸಿಲ್ಕ್ಸ್ ಭೂಮಿ ಮೇಲೆ ‘ಕೈ’ ಭೂಗಳ್ಳರ ಕಣ್ಣು’

ಬೆಂಗಳೂರು: ‘ಮೈಸೂರು ಸಿಲ್ಕ್ಸ್‌ಗೆ ಸೇರಿದ ಭೂಮಿಯ ಮೇಲೆ ಕಾಂಗ್ರೆಸ್ ಭೂಗಳ್ಳರ ವಕ್ರ ದೃಷ್ಟಿ ಬಿದ್ದಿದೆ. ಕ್ರೀಡಾಂಗಣ ನಿರ್ಮಿಸುವ ಹೆಸರಿನಲ್ಲಿ ಭೂಮಿಯನ್ನು ಕಿತ್ತುಕೊಳ್ಳಲು ಸರ್ಕಾರ ಮುಂದಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

‘ಎಕ್ಸ್’ ನಲ್ಲಿ ಈ ವಿಷಯ ಪೋಸ್ಟ್ ಮಾಡಿರುವ ಅವರು, ‘ಟಿ. ನರಸೀಪುರದ ಕೆಎಸ್‌ಐಸಿ ಘಟಕದ ಮುಂದಿನ ಅಭಿವೃದ್ಧಿಗೆ, ಮಾಲಿನ್ಯ ನಿಯಂತ್ರಣ ಘಟಕ ಸ್ಥಾಪನೆಗೆ ಮತ್ತು ಹೆಚ್ಚುವರಿ ಉತ್ಪಾದನೆಗೆ ಐದು ಎಕರೆ ಜಾಗ ಅತ್ಯಗತ್ಯ ಎಂದು ಸ್ವತಃ ವ್ಯವಸ್ಥಾಪಕ ನಿರ್ದೇಶಕರೇ ವರದಿ ನೀಡಿದ್ದಾರೆ. ಆದರೆ, ಸರ್ಕಾರ ಅದನ್ನು ಕಡೆಗಣಿಸಿದೆ’ ಎಂದು ದೂರಿದ್ದಾರೆ.

‘ಮೈಸೂರು ಮಹಾರಾಜರ ದೂರದೃಷ್ಟಿಯಿಂದ ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾದ ಮೈಸೂರು ಸಿಲ್ಕ್ಸ್ ಎಂಬ ನಾಡಿನ ಹೆಮ್ಮೆಯ ಬ್ರ್ಯಾಂಡ್ ಅನ್ನು ಉಳಿಸಿ, ಬೆಳೆಸುವ ಬದಲು, ಅದಕ್ಕೆ ಕೊಡಲಿ ಪೆಟ್ಟು ಕೊಡುತ್ತಿರುವುದು ನಾಡದ್ರೋಹಿ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿಯ ಪರಮಾವಧಿ’ ಎಂದಿದ್ದಾರೆ.



‘ಮೈಸೂರು ಸಿಲ್ಕ್ಸ್ ಉದ್ಯಮವನ್ನು ನಾಶ ಮಾಡಲು ಹೊರಟಿರುವ ನಿಮ್ಮ ಧೋರಣೆಯನ್ನು ಕನ್ನಡಿಗರು ಒಪ್ಪುವುದಿಲ್ಲ. ಕೂಡಲೇ ಆದೇಶ ಹಿಂದಕ್ಕೆ ಪಡೆದು ರೇಷ್ಮೆ ಘಟಕದ ಅಸ್ತಿತ್ವವನ್ನು ಉಳಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ್ದಾರೆ.

ಗಂಗಾ ಕಲ್ಯಾಣ ಯೋಜನೆ ಪೋರ್ಟಲ್‌ನಲ್ಲೇ ಮಾಹಿತಿ ಲಭ್ಯ

ಬೆಂಗಳೂರು: ಗಂಗಾ ಕಲ್ಯಾಣ ಯೋಜನೆಯಡಿ ರೈತರು ಸಲ್ಲಿಸಿರುವ ಅರ್ಜಿಯ ಸ್ಥಿತಿಗತಿ ಕುರಿತ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಟ್ರ್ಯಾಕ್ ಮಾಡಲು ಗಂಗಾ ಕಲ್ಯಾಣ ಪೋರ್ಟಲ್‌ನಲ್ಲಿಯೇ ಅವಕಾಶ ಕಲ್ಪಿಸಲಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

> ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಚಾರದಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಲು ಪೋರ್ಟಲ್‌ನಲ್ಲಿ ಹೊಸ ಆಯ್ಕೆ ಪರಿಚಯಿಸಲಾಗಿದೆ
> **ಎನ್.ಶಿವಶಂಕರ್**
> ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

ಪೋರ್ಟಲ್‌ನಲ್ಲಿ ಹೊಸ ಆಯ್ಕೆಯನ್ನು ಅನಾವರಣಗೊಳಿಸಿದ ಬಳಿಕ ಈ ಕುರಿತು ಮಾಹಿತಿ ಹಂಚಿಕೊಂಡಿರುವ ಸಚಿವರು, ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ, ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿ ನೀಡಲು ಈ ಆಯ್ಕೆಯನ್ನು ಪರಿಚಯಿಸಲಾಗಿದೆ ಎಂದಿದ್ದಾರೆ.

ಅರ್ಜಿದಾರರು ಕಚೇರಿಗಳಿಗೆ ಭೇಟಿ ನೀಡುವ ಅಗತ್ಯವಿಲ್ಲ. ಗಂಗಾ ಕಲ್ಯಾಣ ಯೋಜನೆಯಡಿ ಸಲ್ಲಿಸಿರುವ ಅರ್ಜಿಯ ಐಡಿ, ನೋಂದಾಯಿತ ಮೊಬೈಲ್ ಸಂಖ್ಯೆ ಅಥವಾ ಆಧಾರ್ ಸಂಖ್ಯೆ ಪೈಕಿ ಯಾವುದಾದರೂ ಒಂದನ್ನು ನಮೂದಿಸಿ ಮಾಹಿತಿ ಪಡೆಯಬಹುದಾಗಿದೆ.

ಗೃಹ ಇಲಾಖೆ: 8,176 ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೆ ಆರಂಭ

ಪ್ರಜಾವಾಣಿ ವಾರ್ತೆ

> ಗೃಹ ಇಲಾಖೆಯಲ್ಲಿ ಶೇ 15ರಷ್ಟು ಹುದ್ದೆಗಳು ಖಾಲಿಯಿವೆ. ಭರ್ತಿಗೆ ಅಧಿಸೂಚನೆ ಹೊರಡಿಸಲಾಗುವುದು. ಕೆಲವೇ ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.
> **ಎಂ.ಎ.ಸಲೀಂ**
> ರಾಜ್ಯ ಪೊಲೀಸ್ ಮಹಾನಿರ್ದೇಶಕ

ಬೆಂಗಳೂರು: ಖಾಲಿ ಇರುವ ಹುದ್ದೆಗಳ ಪೈಕಿ ಮೊದಲ ಹಂತದಲ್ಲಿ 8,176 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಗೃಹ ಇಲಾಖೆ ಆರಂಭಿಸಿದೆ.

ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ರಾಜ್ಯ ಸರ್ಕಾರವು ಅನುಮತಿ ನೀಡಿದೆ. ಈ ಬೆನ್ನಲ್ಲೇ ವಿವಿಧ ಘಟಕಗಳಿಗೆ ಹಂಚಿಕೆ ಆಗಿರುವ ಹುದ್ದೆಗಳ ಮಾಹಿತಿಯನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿ ನೇಮಕಾತಿ ವಿಭಾಗಕ್ಕೆ ರವಾನಿಸಿದೆ.

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಕೂಡಲೇ ಅಧಿಸೂಚನೆ ಪ್ರಕಟಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ನೇತೃತ್ವದಲ್ಲಿ ಫೆ.24ರಂದು ಧಾರವಾಡದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಬೃಹತ್ ಪ್ರತಿಭಟನೆ ನಡೆಸಿದ್ದರು. ಇದಾದ ಬಳಿಕ ಒಟ್ಟು 56 ಸಾವಿರಕ್ಕೂ ಅಧಿಕ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಮುಂದಾಗಿದೆ.

ಗೃಹ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನಗರ, ಜಿಲ್ಲಾ ಹಾಗೂ ಘಟಕಗಳಿಗೆ ಮರು ಹಂಚಿಕೆ ಮಾಡಿ, ತಮ್ಮ ಘಟಕಗಳಿಗೆ ಹಂಚಿಕೆ ಆಗಿರುವ ಹುದ್ದೆಗಳಿಗೆ ಸಂಬಂಧಿಸಿದ ವರ್ಗೀಕರಣದ ವಿವರವನ್ನು ಪೊಲೀಸ್ ನೇಮಕಾತಿ ವಿಭಾಗಕ್ಕೆ ಒದಗಿಸುವಂತೆ ಈ ಹಿಂದೆ ನಿರ್ದೇಶನ ನೀಡಲಾಗಿತ್ತು. ವಿವಿಧ ಘಟಕಗಳಿಗೆ ಚಾಲ್ತಿ ಮೀಸಲಾತಿ/ ರೋಸ್ಟರ್ ನಿಯಮಗಳ ಅನ್ವಯ ವರ್ಗೀಕರಣದ ವಿವರವನ್ನು ಪೊಲೀಸ್ ನೇಮಕಾತಿ ವಿಭಾಗಕ್ಕೆ ರವಾನೆ ಮಾಡಲಾಗಿದೆ.

ವಿವಿಧ ಹುದ್ದೆಗಳ ಮಾಹಿತಿ

ಹುದ್ದೆ	ಕಲ್ಯಾಣ ಕರ್ನಾಟಕ	ಕಲ್ಯಾಣ ಕರ್ನಾಟಕೇತರ	ಒಟ್ಟು
ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್ (ಡಿಎಸ್‌ಐ)	5	15	20
ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ (ಎಪಿಸಿ)	275	1,375	1,650
ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್ (ಸಿವಿಲ್)	610	3,500	4,110
ಸ್ಪೆಷಲ್ ರಿಸರ್ವ್ ಪೊಲೀಸ್ ಕಾನ್‌ಸ್ಟೆಬಲ್ (ಕೆಎಸ್‌ಆರ್‌ಪಿ)	532	1,500	2,032
ಪೊಲೀಸ್ ಕಾನ್‌ಸ್ಟೆಬಲ್ (ಕೆಎಸ್‌ಐಎಸ್‌ಎಫ್)	364	-	364

ಶೇ 24.91ರ ಮಿತಿಯಲ್ಲಿಯೇ ಹೊಣೆಗಾರಿಕೆ • ಆರ್‌ಬಿಐ ಪರಿಗಣನೆ ಸರಿ ಇಲ್ಲ

ಸಾಲ ಹೆಚ್ಚಾಗಿಲ್ಲ: ಆರ್ಥಿಕ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ವಾಸ್ತವಿಕ ಒಟ್ಟು ಸಾಲದ ಮೊತ್ತಕ್ಕಿಂತ ₹60,500 ಕೋಟಿಯಷ್ಟನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹೆಚ್ಚಾಗಿ ಲೆಕ್ಕಾಚಾರ ಮಾಡಿದೆ. ಆದರೆ ಈ ಮೊತ್ತವು ನಮ್ಮ ಹೊಣೆಗಾರಿಕೆಯ ವ್ಯಾಪ್ತಿಗೆ ಬರುವುದೇ ಇಲ್ಲ’ ಎಂದು ಆರ್ಥಿಕ ಇಲಾಖೆ ಪ್ರತಿಪಾದಿಸಿದೆ.

ಆರ್‌ಬಿಐನ ವರದಿಯಲ್ಲಿನ ದತ್ತಾಂಶಗಳನ್ನು ಆಧರಿಸಿ ಪ್ರಕಟಿಸಲಾಗಿದ್ದ ಸುದ್ದಿಯಲ್ಲಿ, ‘ಈ ಆರ್ಥಿಕ ವರ್ಷದ ಅಂತ್ಯದ ವೇಳೆಗೆ (ಮಾರ್ಚ್ ಅಂತ್ಯ) ರಾಜ್ಯದ ಒಟ್ಟು ಸಾಲದ ಮೊತ್ತ ₹8.14 ಲಕ್ಷ ಕೋಟಿಯಷ್ಟಾಗಲಿದೆ’ ಎಂದು ವಿವರಿಸಲಾಗಿತ್ತು. ಈ ಬಗ್ಗೆ ರಾಜ್ಯದ ಆರ್ಥಿಕ ಇಲಾಖೆಯು ಸ್ಪಷ್ಟನೆ ನೀಡಿದೆ.

2025–26ನೇ ಸಾಲಿನ ಬಜೆಟ್ ಅಂದಾಜಿನ ಪ್ರಕಾರ ಆರ್ಥಿಕ ವರ್ಷದ ಅಂತ್ಯದ ಹೊತ್ತಿಗೆ ರಾಜ್ಯದ ಒಟ್ಟು ಸಾಲ ₹7.64 ಲಕ್ಷ ಕೋಟಿಯಷ್ಟಾಗಲಿದೆ. ಇದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಎಸ್‌ಡಿಪಿ) ಶೇ 24.91ರಷ್ಟಾಗುತ್ತದೆ. ಆದರೆ ರಾಜ್ಯದ ಒಟ್ಟು ಸಾಲವನ್ನು ಲೆಕ್ಕ ಮಾಡುವಾಗ, ನಮ್ಮ ವ್ಯಾಪ್ತಿಗೆ ಬರದೇ ಇರುವ ಹೊಣೆಗಾರಿಕೆಗಳನ್ನೂ ಆರ್‌ಬಿಐ ಪರಿಗಣಿಸಿದೆ ಎಂದು ಇಲಾಖೆಯು ಹೇಳಿದೆ.

ಜಿಎಸ್‌ಟಿ ಪರಿಹಾರ ಸೆಸ್‌ಗಾಗಿ ಕೇಂದ್ರ ಸರ್ಕಾರದ ಭದ್ರತೆಯೊಂದಿಗೆ ಎತ್ತಲಾದ ₹20,412 ಕೋಟಿಯನ್ನು ಆರ್‌ಬಿಐ, ರಾಜ್ಯದ ಹೊಣೆಗಾರಿಕೆ ಎಂದು ಪರಿಗಣಿಸಿದೆ. ವಾಸ್ತವದಲ್ಲಿ ಕೇಂದ್ರ ಸರ್ಕಾರವೇ ಈ ಸಾಲವನ್ನು ತೀರಿಸುತ್ತದೆ. ಹೀಗಾಗಿ ಇದನ್ನು ರಾಜ್ಯದ ಒಟ್ಟು ಸಾಲಕ್ಕೆ ಸೇರಿಸಬಾರದು ಎಂದು ವಿವರಿಸಿದೆ.

ರಾಜ್ಯವು ವಿವಿಧ ಮೂಲಗಳಿಂದ ಸಂಗ್ರಹಿಸುವ ಸೆಸ್ ಮತ್ತು ಲೆವಿಗಳನ್ನು ಸಾರ್ವಜನಿಕ ಖಾತೆಯಲ್ಲಿ ಜಮಾ ಮಾಡಲಾಗುತ್ತದೆ ಮತ್ತು ವಿವಿಧ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಬಳಸುತ್ತದೆ. ಸಾರ್ವಜನಿಕ ಖಾತೆಯಲ್ಲಿ ಇಂತಹ ₹23,810 ಕೋಟಿ ಇದೆ. ಆರ್‌ಬಿಐ ಇದನ್ನೂ ರಾಜ್ಯದ ಹೊಣೆಗಾರಿಕೆ ಎಂದು ಪರಿಗಣಿಸಿದೆ ಎಂದಿದೆ.

ರಿಸರ್ವ್ ಬ್ಯಾಂಕ್‌ನ ಶಿಫಾರಸಿನಂತೆ ‘ಕನ್ಸಾಲಿಡೇಟೆಡ್ ಸಿಂಕಿಂಗ್ ಫಂಡ್’ ಮತ್ತು ‘ಗ್ಯಾರಂಟಿ ರಿಡಂಪ್ಷನ್ ಫಂಡ್’ನಲ್ಲಿ ರಾಜ್ಯ ಸರ್ಕಾರವು ₹16,300 ಕೋಟಿ ಹೂಡಿಕೆ ಮಾಡಿದೆ. ಇದನ್ನೂ ರಾಜ್ಯದ ಹೊಣೆಗಾರಿಕೆ ಎಂದು ಆರ್‌ಬಿಐ ಪರಿಗಣಿಸಿದೆ. ಈ ಮೂರೂ ಮೊತ್ತಗಳು ಸೇರಿ ರಾಜ್ಯದ ಒಟ್ಟು ಸಾಲದ ಮೊತ್ತದಲ್ಲಿ ₹60,500 ಕೋಟಿಯಷ್ಟು ಹೆಚ್ಚಳವಾದಂತಾಗಿದೆ. ಆದರೆ ಅದು ರಾಜ್ಯದ ಸಾಲವಲ್ಲ ಎಂದು ಇಲಾಖೆಯು ವಿವರಿಸಿದೆ.

ಬಜೆಟ್ ಅಂದಾಜಿನಂತೆ ರಾಜ್ಯದ ಸಾಲವು ₹7.64 ಲಕ್ಷ ಕೋಟಿಯಷ್ಟೇ ಇರಲಿದ್ದು, ಸಾಲದ ಪ್ರಮಾಣವು ಜಿಎಸ್‌ಡಿಪಿಯ ಶೇ 25ರಷ್ಟನ್ನು ಮೀರಬಾರದು ಎಂಬ ಆರ್ಥಿಕ ಶಿಸ್ತಿನ ಮಿತಿಯಲ್ಲಿಯೇ ಇದೆ ಎಂದು ಪ್ರತಿಪಾದಿಸಿದೆ.


ನದಿಗೆ ಬಿದ್ದು ಇಬ್ಬರು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಸಾಣಾಪುರ ಗ್ರಾಮದ ಬಳಿಯ ಜಲಪಾತದಲ್ಲಿ ಬುಧವಾರ ನದಿಗೆ ಇಳಿದಿದ್ದ ಇಬ್ಬರು ಯುವಕರು ಕಾಲುಜಾರಿ ಬಿದ್ದು ಮೃತಪಟ್ಟಿದ್ದಾರೆ.

ಗಂಗಾವತಿ ಗಾಂಧಿನಗರದ 18ನೇ ವಾರ್ಡ್‌ನ ಸುರೇಶ್ (21), ಅಭಿಷೇಕ (18) ಮೃತರು. ಹೋಳಿ ಹಬ್ಬದ ಪ್ರಯುಕ್ತ ಯುವಕರು ಫಾಲ್ಸ್‌ಗೆ ತೆರಳಿದ್ದ ವೇಳೆ ಈ ಅವಘಡ ಸಂಭವಿಸಿದೆ.

‘ಗೃಹಲಕ್ಷ್ಮಿ: ₹79 ಕೋಟಿ ಹಿಂಪಡೆಯಿರಿ’



ಎಚ್‌. ಎಂ. ರೇವಣ್ಣ

ದಾವಣಗೆರೆ: ‘ಗೃಹಲಕ್ಷ್ಮಿ’ ಯೋಜನೆಯಡಿ ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಆಗಿರುವ ₹79.75 ಕೋಟಿ ಹಿಂಪಡೆಯಬೇಕು. ಮರಣ ಪ್ರಮಾಣಪತ್ರ ಪರಿಶೀಲಿಸಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್‌.ಎಂ. ರೇವಣ್ಣ ಸೂಚಿಸಿದರು.

ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಬುಧವಾರ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದರು.

‘ಗ್ಯಾರಂಟಿ ಯೋಜನೆ ಜಾರಿ ಬಳಿಕ 1,44,056 ಫಲಾನುಭವಿಗಳು ಮೃತಪಟ್ಟಿದ್ದಾರೆ. ಇವರಲ್ಲಿ 68,776 ಮಂದಿಯ ಖಾತೆಗೆ ಹಣ ಜಮೆ ಆಗಿದೆ’ ಎಂದು ತಿಳಿಸಿದರು.

‘ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೂ ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಜಿಎಸ್‌ಟಿ ಪಾವತಿಸುವ ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ಜಮೆ ಆಗಿರಲಿಲ್ಲ. ಈ ಸಮಸ್ಯೆ ಸರಿಪಡಿಸಲಾಗಿದೆ’ ಎಂದರು.

ಲಾರಿಗೆ ಕಾರು ಡಿಕ್ಕಿ: ಬೆಂಗಳೂರಿನ ಐದು ಮಂದಿ ಸಾವು

ಪಲಮನೇರು (ಆಂಧ್ರಪ್ರದೇಶ): ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಬೆಂಗಳೂರಿನ ಒಂದೇ ಕುಟುಂಬದ ಐವರು ಸ್ಥಳದಲ್ಲೇ ಸಾವಿಗೀಡಾದ ಘಟನೆ ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಪಲಮನೇರು ಸಮೀಪದ ಹೆದ್ದಾರಿಯಲ್ಲಿ ಬುಧವಾರ ಬೆಳಿಗ್ಗೆ ನಡೆದಿದೆ. ಮೃತರಲ್ಲಿ ಮೂವರು ಮಹಿಳೆಯರೂ ಇದ್ದಾರೆ. ಕುಟುಂಬದ ಸದಸ್ಯರು ಬೆಂಗಳೂರಿನಿಂದ ತಿರುಪತಿಗೆ ತೆರಳುತ್ತಿದ್ದರು ಎನ್ನಲಾಗಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಸಮಾನತೆ, ಬಂಧುತ್ವ ಹಾಗೂ ಸ್ವಾತಂತ್ರ್ಯಗಳ ಅನುಸಾರ ನಡೆಯಲು ಕಲಿಸಬಲ್ಲ ಧರ್ಮ ನಮಗೆ ಬೇಕಾಗಿದೆ.

–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

ಯುದ್ಧ ಕಾಲದಲ್ಲಿ ಭಾರತದ ಮೌನ ಸೈದ್ಧಾಂತಿಕ ನಿಲುವಿನಲ್ಲಿ ಪಲ್ಲಟ

ಅಮೆರಿಕ ಮತ್ತು ಇಸ್ರೇಲ್ ಫೆ. 28ರಂದು ಇರಾನ್ ಮೇಲೆ ಒಟ್ಟಿಗೆ ಮುಗಿಬೀಳುವ ಮೂಲಕ ಪಶ್ಚಿಮ ಏಷ್ಯಾದ ಮಧ್ಯ ಭಾಗದಲ್ಲಿ ಅಕ್ರಮ ಯುದ್ಧ ಹೇರಿಕೆಯಾಗಿದ್ದು, ಆ ವಿದ್ಯಮಾನದ ಬಗ್ಗೆ ಭಾರತ ಸಹಜವಾಗಿಯೇ ತೀವ್ರ ಕಳವಳ ವ್ಯಕ್ತಪಡಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ, ಯಾವುದೇ ಸೈನಿಕ ಕಾರ್ಯಾಚರಣೆಯಿಂದ ಉಂಟಾಗುವ ಉದ್ವಿಗ್ನತೆಯ ಪರಿಸ್ಥಿತಿಯಲ್ಲಿ ಬಳಸಬಹುದಾದ ಸಂಯಮ, ಸಂವಾದ, ನಾಗರಿಕರ ಸುರಕ್ಷತೆ, ಭೌಗೋಳಿಕ ಅಖಂಡತೆ ಹಾಗೂ ಪ್ರಭುತ್ವದಂತಹ ಆಯ್ದ ರಾಜತಾಂತ್ರಿಕ ಪದಪುಂಜಗಳನ್ನು ಎಚ್ಚರಿಕೆಯಿಂದ ವಿನ್ಯಾಸಗೊಳಿಸಲಾಗಿದೆ. ಈ ಹೇಳಿಕೆಯಲ್ಲಿ ಇಸ್ರೇಲ್ ಅಥವಾ ಅಮೆರಿಕದ ಹೆಸರುಗಳನ್ನು ಉಲ್ಲೇಖಿಸಿಲ್ಲ. ಯುದ್ಧಕ್ಕೆ ಸಂಬಂಧಿಸಿದ ತನ್ನ ಮೊದಲ ಅಧಿಕೃತ ಹೇಳಿಕೆಯಲ್ಲಿ ಭಾರತವೇ ಪ್ರಸ್ತಾಪಿಸಿರುವ 'ಪ್ರಭುತ್ವ' ತತ್ತ್ವದ ಮೇಲೆ ನೇರ ದಾಳಿ ನಡೆಸಿರುವವರ ಹೆಸರುಗಳನ್ನು ಉಲ್ಲೇಖಿಸದೆ ಇರುವುದು ಗಮನಾರ್ಹ. ಬಹು ಸಂಕೀರ್ಣವಾದ ಭೌಗೋಳಿಕ ರಾಜಕಾರಣದ ಭೂಮಿಕೆಯಲ್ಲಿ ಮೌನವೂ ಒಂದು ತಂತ್ರವಾಗಿರಬಹುದು. ಅದು ತಾತ್ತ್ವಿಕ ಸ್ವಾಯತ್ತತೆಯ ಸಂಕೇತವೂ ಆಗಿರಬಹುದು. ಆದರೆ, ಭಾರತದ ಪ್ರತಿಕ್ರಿಯೆಯು ಉದ್ದೇಶಪೂರ್ವಕವಾಗಿ ಅಂತರವನ್ನು ಕಾಪಾಡಿಕೊಳ್ಳುವ ನಡೆಯಾಗಿದೆ ಹಾಗೂ ಈ ನಡೆ, ಇಸ್ರೇಲ್‌ನೊಂದಿಗಿನ ಸಂಬಂಧ ಬಲಗೊಳ್ಳುತ್ತಿರುವುದನ್ನು ಸೂಚಿಸುವಂತಿದೆ. ಇರಾನ್‌ನ ಪ್ರತಿದಾಳಿಗಳ ನಂತರವೂ ಗಲ್ಫ್ ದೇಶಗಳೊಂದಿಗಿನ ಭಾರತದ ಸಂಪರ್ಕವು ವ್ಯಾವಹಾರಿಕ ಉದ್ದೇಶದಿಂದ ದಿಕ್ಕು ತಪ್ಪಿರುವ ರಾಜತಾಂತ್ರಿಕ ನೀತಿಯನ್ನು ಸಂಕೇತಿಸುವಂತಿದೆ.



ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಸಾರಿರುವ ಅಕ್ರಮ ಯುದ್ಧದ ಬಗೆಗಿನ ಭಾರತದ ಮೌನ, ದೇಶದ ದೀರ್ಘಕಾಲಿಕ ಸೈದ್ಧಾಂತಿಕ ನಿಲುವಿನಲ್ಲಿ ಆಗಿರುವ ಮಹತ್ವದ ಬದಲಾವಣೆಯ ದ್ಯೋತಕ.

ಸೌದಿ ಅರೇಬಿಯಾ, ಬಹರೇನ್, ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ), ಹಾಗೂ ಜೋರ್ಡಾನ್ ನಾಯಕರೊಂದಿಗೆ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ದಾಳಿಯನ್ನು ಖಂಡಿಸಿದ್ದಾರೆ; ಶಾಂತಿ ಪ್ರಯತ್ನಗಳಿಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸುವುದರ ಜೊತೆಗೆ, ಭಾರತೀಯ ವಲಸಿಗರ ಬಗೆಗಿನ ಕಾಳಜಿಗಾಗಿ ಆ ದೇಶಗಳಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ. ಆದರೆ, ಭಾರತದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಇರಾನ್‌ನ ಪರಮೋಚ್ಚ ನಾಯಕ ಅಯಾತೊಲ್ಲಾ ಖಮೇನಿ ಅವರ ಹತ್ಯೆಯ ಬಗ್ಗೆ ಈವರೆಗೆ ಯಾವ ಪ್ರತಿಕ್ರಿಯೆಯನ್ನೂ ಅವರು ವ್ಯಕ್ತಪಡಿಸಿಲ್ಲ. ಇತ್ತೀಚಿನ ದಿನಗಳಲ್ಲಿ ಇಸ್ರೇಲ್ ಜೊತೆಗಿನ ಭಾರತದ 'ವ್ಯಾವಹಾರಿಕ ರಾಜಕೀಯ' ಸಂಬಂಧ ಗಾಢವಾಗುತ್ತಿದೆ. ಎರಡೂ ದೇಶಗಳು, ಅಮೆರಿಕ ಮತ್ತು ಯುಎಇಗಳನ್ನು ಒಳಗೊಂಡಂತೆ ರಚನೆಯಾಗಿರುವ 'ಐ2ಯು2' ಜಿಯೊಎಕನಾಮಿಕ್ ಒಕ್ಕೂಟದ ಭಾಗವಾಗಿವೆ. ಯುದ್ಧದ ಕುರಿತಾದ ಭಾರತದ ಮೃದು ನಿಲುವನ್ನು ಅಮೆರಿಕದೊಂದಿಗೆ ಮೈತ್ರಿ ಹೊಂದಿರುವ ದೇಶಗಳ ಸಂಭ್ರಮಾಚರಣೆಯ ಅನುಮೋದನೆ ಹಾಗೂ ರಷ್ಯಾ–ಚೀನಾದಂತಹ ಪ್ರಮುಖ ದೇಶಗಳ ಖಂಡನೆಯ ನಡುವೆ ನೋಡಬೇಕಾಗಿದೆ. ಇಂಧನ ಮತ್ತು ಸಂಪರ್ಕ ಸಾಧ್ಯತೆಗಳ ಹಿತಾಸಕ್ತಿಗೆ ನಿರ್ಣಾಯಕವಾದ ಪ್ರದೇಶದಲ್ಲಿ ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳಿಗೆ ಕಹಿಯೆನ್ನಿಸದಂತೆ ನಡೆದುಕೊಳ್ಳುವ ನಾಜೂಕು ಪ್ರಯತ್ನಗಳು ರಾಜತಾಂತ್ರಿಕ ಕಾರ್ಯತಂತ್ರದ ಪರೀಕ್ಷೆಯಲ್ಲಿ ಯಶಸ್ವಿಯಾಗಬಹುದು. ಆದರೆ, ಈ ಲಾಭಗಳು ದೇಶದ ಚಾರಿತ್ರಿಕ ಹಾಗೂ ಸೈದ್ಧಾಂತಿಕ ನಿಲುವುಗಳನ್ನು ಅತಿಕ್ರಮಿಸಲು ಬಿಡಬಹುದೇ ಹಾಗೂ ಇಸ್ರೇಲ್‌ನೊಂದಿಗಿನ ಸಂಬಂಧವನ್ನು ಷರತ್ತುರಹಿತ ಸ್ಥಿತಿಗೆ ದೂಡಬಹುದೆ?

ಭಾರತದ ಸದ್ಯದ ರಾಜತಾಂತ್ರಿಕ ನಿಲುವನ್ನು ಅರ್ಥ ಮಾಡಿಕೊಳ್ಳಲು ಅಗತ್ಯವಾದ ಸುಳಿವುಗಳು ಪ್ರಧಾನಿ ನರೇಂದ್ರ ಮೋದಿಯವರ ಇತ್ತೀಚಿನ ಟೆಲ್ ಅವಿವ್ ಭೇಟಿಯಲ್ಲಿ ಇರುವಂತಿವೆ. ಅಂತರರಾಷ್ಟ್ರೀಯ ನ್ಯಾಯಾಲಯವು ಅಪರಾಧಿ ಎಂದು ಘೋಷಿಸಿರುವ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಗೆ ಮೋದಿ ಅವರ ಉಪಸ್ಥಿತಿಯಿಂದ ಲಾಭಗಳಿದ್ದವು. ಇಸ್ರೇಲ್‌ನ ಸಂಸತ್‌ನಲ್ಲಿ ಮಾಡಿದ ಭಾಷಣದಲ್ಲಿ, 2023ರ ಅಕ್ಟೋಬರ್ 7ರಂದು ಹಮಾಸ್ ನಡೆಸಿದ ಭಯೋತ್ಪಾದಕ ದಾಳಿಯಲ್ಲಿ ಜೀವ ಕಳೆದುಕೊಂಡವರ ಬಗ್ಗೆ ಇಸ್ರೇಲ್ ಜೊತೆ ನೋವು ಹಂಚಿಕೊಂಡಿರುವುದಾಗಿ ಮೋದಿ ಹೇಳಿದ್ದರು. ಆದರೆ, ಗಾಜಾದ ಮೇಲೆ ಇಸ್ರೇಲ್ ನಡೆಸಿದ ದಾಳಿಗಳಲ್ಲಿ ಸಾವಿಗೀಡಾದ 72 ಸಾವಿರಕ್ಕೂ ಹೆಚ್ಚಿನ ಜನರನ್ನು ಅವರು ನೆನಪಿಸಿಕೊಳ್ಳಲಿಲ್ಲ. ಈ ಆಯ್ದ ಉಲ್ಲೇಖ ಹಾಗೂ ಉದ್ದೇಶಿತ ಮೌನವು, ಇರಾನ್ ವಿರುದ್ಧ ಏಕಪಕ್ಷೀಯ ಯುದ್ಧಕ್ಕೆ ಸಿದ್ಧವಾಗುತ್ತಿದ್ದ ಆ ಕ್ಷಣದಲ್ಲಿ ಮತ್ತು ನಂತರವೂ ಇಸ್ರೇಲ್‌ಗೆ ಭಾರತ ಘೋಷಿಸಿದ ದೃಢ ಬೆಂಬಲವನ್ನು ಸೂಚಿಸುವಂತಿದೆ.

ಸಾಲದ ಶೂಲ



ಕರ್ನಾಟಕದ ತೆರಿಗೆಯಲ್ಲಿ ದೊಡ್ಡ ಪಾಲು ಹಿಂದಿ ರಾಜ್ಯಗಳ ಅಭಿವೃದ್ಧಿಗೆ ಬಳಕೆಯಾಗುತ್ತಿದೆ. ಇದರಿಂದ ಕರ್ನಾಟಕ ತನ್ನ ಅಭಿವೃದ್ಧಿಗೆ ಮತ್ತೆ ಮತ್ತೆ ಸಾಲ ಮಾಡಬೇಕಾಗಿದೆ.

ಅರುಣ್ ಜಾವಗಲ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ



'ನಾನೊಬ್ಬ ಸ್ಟ್ರೀಟ್ ಫೈಟರ್' ಎಂದು ರಾಜ್ಯದ ಉಪಮುಖ್ಯಮಂತ್ರಿಗಳು ತಮ್ಮನ್ನು ತಾವೇ ಬಣ್ಣಿಸಿಕೊಂಡಿದ್ದಾರೆ. ಸುಮಾರು 40 ವರ್ಷಗಳ ದೀರ್ಘ ರಾಜಕೀಯ ಅನುಭವದ ನಂತರವೂ, ನಾಲ್ಕೈದು ಸಲ ಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ಮೇಲೂ 'ಸ್ಟ್ರೀಟ್ ಫೈಟರ್' ಆಗಿಯೇ ಉಳಿಯುವುದು ಆರೋಗ್ಯಕರ ಬೆಳವಣಿಗೆಯ ಲಕ್ಷಣವಲ್ಲ.

ಎಸ್. ಸುರೇಶ್ ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಸೋಮವಾರ, 5-3-2001

• ಕಾಂಗ್ರೆಸ್‌ನ ಹನ್ನೊಂದು ಮುಖಂಡರು ತೃಣಮೂಲಕ್ಕೆ

ಕೋಲ್ಕತ್ತ, ಮಾರ್ಚ್ 4 (ಪಿಟಿಐ)– ಕಾಂಗ್ರೆಸ್‌ನ ಎಂಟು ಮಂದಿ ಶಾಸಕರೂ ಸೇರಿದಂತೆ ಹನ್ನೊಂದು ಮಂದಿ ಮುಖಂಡರು ತೃಣಮೂಲ ಕಾಂಗ್ರೆಸ್ ಸೇರುವುದರೊಂದಿಗೆ ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತೀವ್ರ ಹಿನ್ನಡೆ ಉಂಟಾಗಿದೆ.

ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಭಾಗವಹಿಸಿದ್ದ ಕಾಂಗ್ರೆಸ್ ಏಕತಾ ಸಮಾವೇಶದಲ್ಲಿ ಈ ಶಾಸಕರು ತೃಣಮೂಲ ಸೇರುವ ತಮ್ಮ ನಿರ್ಧಾರ ಪ್ರಕಟಿಸಿದರು.

'ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯು ಸಿಪಿಎಂ ನೇತೃತ್ವದ ಎಡರಂಗ ವಿರುದ್ಧದ ನನ್ನ ಅಂತಿಮ ಹೋರಾಟ' ಎಂದು ಮಮತಾ ಬ್ಯಾನರ್ಜಿ ಘೋಷಿಸಿದರು.

• ಗಡಿ ವಿವಾದ: ಸೌಹಾರ್ದ ಒಪ್ಪಂದಕ್ಕೆ, ಹೊಸ ಚರ್ಚೆಗೆ ದೇಶ್‌ಮುಖ್ ಕರೆ

ಬೆಂಗಳೂರು, ಮಾರ್ಚ್ 4– ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಿನ ಗಡಿ ವಿವಾದವನ್ನು ಬಗೆಹರಿಸಲು ಎರಡೂ ರಾಜ್ಯಗಳ ನಡುವೆ ಹೊಸದಾಗಿ ಮಾತುಕತೆಯು ನಡೆಯಬೇಕು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ ರಾವ್ ದೇಶ್‌ಮುಖ್ ಅವರು ಹೇಳಿದ್ದಾರೆ.

ನಮಗೆ ಅನ್ಯೋನ್ಯವಾದ ಪರಿಹಾರ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ಮಾತುಕತೆ ನಡೆಸುವುದು ಅಗತ್ಯವಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಮಹಾಜನ್ ವರದಿಯೇ ಅಂತಿಮ ಎಂಬುದು ಕರ್ನಾಟಕದ ವಾದ. ಆದರೆ ನಾವು ಯಾವುದೇ ವರದಿಯ ಮೇಲೆ ನಿಂತಿಲ್ಲ ಎಂದರು.

75 ವರ್ಷಗಳ ಹಿಂದೆ

ಸೋಮವಾರ, 5-3-1951

• ದೆಹಲಿಯಲ್ಲಿದ್ದ ಜೆಕ್ ರಾಯಭಾರಿ ಕ್ರ್ಯಾಟೋಚ್ ಕಣ್ಮರೆ

ನವದೆಹಲಿ, ಮಾ. 4– ದೆಹಲಿಯಲ್ಲಿ ಜೆಕೋಸ್ಲೋವೇಕಿಯಾದ ರಾಯಭಾರಿಯಾಗಿದ್ದ ಡಾ. ಬಿ.ಜಿ. ಕ್ರ್ಯಾಟೋಚ್ ವಿಲ್‌ರವರು ಕಳೆದ ಗುರುವಾರ ಬೆಳಗ್ಗೆ ತಮ್ಮ ಕಚೇರಿ ವರ್ಗದವರಿಗೆ ಕೂಡ ತಿಳಿಸದೆ ಕಣ್ಮರೆಯಾಗಿದ್ದಾರೆ. ಅಲ್ಲಿಂದೀಚೆಗೆ ಅವರ ಚಲನವಲನಗಳ ಬಗ್ಗೆ ಏನೂ ಗೊತ್ತಾಗಿಲ್ಲ. ಜೆಕ್ ರಾಯಭಾರಿಯು ಜೊತೆಯಲ್ಲಿ ತಮ್ಮ ಸಂಸಾರವನ್ನೂ ಕರೆದೊಯ್ದಿದ್ದಾರೆ.

ಡಾ. ಕ್ರ್ಯಾಟೋಚ್ ವಿಲ್‌ರವರನ್ನು ಇತ್ತೀಚೆಗೆ ಪ್ರೇಗಿಗೆ ಬರಬೇಕೆಂದು ಕರೆಕಳುಹಿಸಲಾಗಿತ್ತೆಂದೂ ಇದಾದ ನಂತರ ಅವರು ಗುರುವಾರ ಬೆಳಗ್ಗೆ ದೆಹಲಿಯ ತಮ್ಮ ರಾಯಭಾರ ಕಚೇರಿಯನ್ನು ಬಿಟ್ಟು ಹೋಗಿದ್ದಾರೆಂದು ದೆಹಲಿಯ ಜೆಕ್ ರಾಯಭಾರ ಕಚೇರಿ ವಕ್ತಾರರೊಬ್ಬರು ತಿಳಿಸಿದರು.

ಸ್ತ್ರೀವಾದ: ಪುರುಷರಿಗೂ ಸಂಗಾತಿ!



ವಿಶ್ಲೇಷಣೆ

ಸಬಿತಾ ಬನ್ನಾಡಿ

> ಹಿಂಸೆ, ಸ್ವಾರ್ಥ ಮತ್ತು ಕಿತ್ತು ತಿನ್ನುವ ಯುದ್ಧದಂಥ ಶಾಪಗಳಿಂದ ಮನುಕುಲವನ್ನು ಪಾರು ಮಾಡುವ ಅಮೃತಶಕ್ತಿ 'ಸ್ತ್ರೀವಾದ'ಕ್ಕಿದೆ. ಸ್ತ್ರೀವಾದದ ಅಗತ್ಯ ಇರುವುದು ಹೆಣ್ಣಿಗಲ್ಲ; ಗಂಡಿಗೆ, ಸಮಾಜಕ್ಕೆ! ಮೌಢ್ಯಗಳಿಂದ ಪಾರಾಗಿ ಮಾನವೀಯ ಬದುಕು ಕಟ್ಟಿಕೊಳ್ಳಲು ಹಂಬಲಿಸುವವರಿಗೆ ಸ್ತ್ರೀವಾದವೇ ದಿಕ್ಕು–ದೆಸೆ.

ಹೆಣ್ಣು ಮತ್ತು ಗಂಡನ್ನು ಒಡೆದು ನೋಡುವುದನ್ನು ಸ್ತ್ರೀವಾದ ಅಲ್ಲಗಳೆಯುತ್ತದೆ. ಇಬ್ಬರೂ ಒಗ್ಗೂಡಿ ಹಿಂಸೆಯಿಲ್ಲದೆ, ಸಹ್ಯವಾಗಿ ಬದುಕುವುದು ಹೇಗೆ ಎಂಬ ದಾರಿಯನ್ನು ನಿಜವಾದ ಸ್ತ್ರೀವಾದ ಅನ್ವೇಷಿಸುತ್ತದೆ ಮತ್ತು ದಾರಿಗಳನ್ನು ತೋರಿಸುತ್ತಲೇ ಇದೆ. ಇಲ್ಲಿ 'ನಿಜವಾದ ಸ್ತ್ರೀವಾದ' ಎಂಬ ಪದ ಬಳಸಿರುವುದರಿಂದ, ಹಾಗೆಂದರೇನು ಎಂಬ ಪ್ರಶ್ನೆ ಬೆನ್ನ ಹಿಂದೆಯೇ ಬಂದು ಬಿಡುತ್ತದೆ. ಸ್ತ್ರೀವಾದದ ಬಗ್ಗೆ ಅಧ್ಯಯನ ಮಾಡದೆ, ಅರಿಯದೆ ಅದನ್ನು ಬೇಕಾಬಿಟ್ಟಿಯಾಗಿ ಬಳಸುವುದು ಫ್ಯಾಷನ್ ರೀತಿ ಆಗಿರುವುದು, ಎಷ್ಟೋ ಸಲ ತಪ್ಪಾಗಿ ಅನ್ವಯಿಸುವುದರಿಂದಾಗಿ ಹೀಗೆ ಹೇಳಬೇಕಾಗಿದೆ.

ಸ್ತ್ರೀವಾದವು ಮಹಿಳೆಯರಿಗೆ ಹೇಗೆ ಸಂಗಾತಿಯೋ, ಪುರುಷರಿಗೂ ಹಾಗೆಯೇ ಸಂಗಾತಿಯಾಗಿದೆ. ಹೊಸ ತಲೆಮಾರಿನ ಹುಡುಗರಿಗೆ ಇದು ಸಮಸ್ಯೆಯಲ್ಲ. ಆದರೆ, ಅನೇಕರು ಅನುಮಾನದಿಂದ ಅಥವಾ ಭಯದಿಂದ ನೋಡುವುದರಿಂದಾಗಿ ಸ್ತ್ರೀವಾದವಿನ್ನೂ ಹಲವರ ಜೊತೆಗೆ ಮಾತಾಡಿಲ್ಲ. ಮಾತಾಡಿದರೆ ಸಾಕೆ? ಕೇಳಿಸಿಕೊಳ್ಳುವ ಕಿವಿ ಬೇಕಲ್ಲವೆ?

ಇಂದು ವಿಶ್ವದಾದ್ಯಂತ ಇರುವ ಮೂರ್ಖಾತಿಮೂರ್ಖ ನಾಯಕರನ್ನು ನೋಡಿದಾಗ, ಅಜ್ಞಾನದ ಧೈರ್ಯವೇ ಇವರನ್ನು ಹೀಗೆ ಲಜ್ಜೆಗೆಟ್ಟವರನ್ನಾಗಿ ಮಾಡಿರುವುದು ಕಂಡಾಗ ದುಃಖವಾಗುತ್ತದೆ. ಚಿಕ್ಕ ಮಕ್ಕಳಂತೆ (ಮಕ್ಕಳೂ ಹಾಗೆಲ್ಲ ಆಡುವುದಿಲ್ಲ) ಕಂಡಿದ್ದೆಲ್ಲಾ ತನಗೇ ಬೇಕು ಎಂದು ಪುಂಡುಗುಂಪು ಕಟ್ಟಿಕೊಂಡು ದೇಶ ದೇಶಗಳ ಸಂಪನ್ಮೂಲ, ಒಡೆತನ, ಯಜಮಾನಿಕೆಯೆಡೆಗೆ ಮುನ್ನುಗ್ಗುತ್ತಿರುವ ಈ ಅತೃಪ್ತ ಆತ್ಮಗಳನ್ನು ನೋಡಿದಾಗ ಗಾಬರಿಯಾಗುತ್ತದೆ. ಹೌದು, ಪುರುಷಪ್ರಧಾನ ಚಿಂತನೆಯ ಮೂಲ ಬೇರೇ ಅತೃಪ್ತಿ; ಅದರ ಮೂಲ ಹಿಂಸೆ. ಹೀಗಿರುವಾಗ ಸ್ತ್ರೀವಾದಿ ಪರಿಕಲ್ಪನೆಯ ನಾಯಕತ್ವವನ್ನು ಮುನ್ನೆಲೆಗೆ ತರಲು ಇದು ಸಕಾಲವಾಗಿದೆ. ಹೆಂಗಸರು ನಾಯಕತ್ವ ವಹಿಸಿದ್ದರೂ ಅವರು ಸ್ತ್ರೀವಾದಿ ಆಡಳಿತವನ್ನು ಪ್ರಜ್ಞಾಪೂರ್ವಕವಾಗಿ ಮಾಡಿಲ್ಲ. ಅವರು ಇದುವರೆಗೂ ಪುರುಷನು ಹಾಕಿಕೊಟ್ಟ ಮಾದರಿಯಲ್ಲೇ ಹೆಜ್ಜೆ ಹಾಕಿದ್ದಾರೆ. ಯುದ್ಧ, ಸಂಘರ್ಷ, ನಾಯಕತ್ವದ ಹಪಹಪಿಗೆ ವಿರುದ್ಧವಾಗಿ ಸ್ತ್ರೀವಾದವು ಸಾಮೂಹಿಕ ನಾಯಕತ್ವ ಮತ್ತು ಜವಾಬ್ದಾರಿಗಳ ನಿರ್ವಹಣೆಯನ್ನು ಮುನ್ನೆಲೆಗೆ ತರುತ್ತದೆ.

ಇದುವರೆಗಿನ ವಿಫಲ ಮಾದರಿಯ ಪ್ರತೀಕವಾಗಿ ಎಪ್‌ಸ್ಟೈನ್ ಪ್ರಕರಣವನ್ನು ನೋಡಬಹುದು. ಅಲ್ಲಿ ಜಗತ್ತಿನ ಅನೇಕ ಘಟಾನುಘಟಿಗಳು ಎಳೆಯ ಬಾಲಕಿಯರು, ಶಿಶುಗಳ ಮೇಲೆ ಅತ್ಯಾಚಾರ, ಅಸಹಜ ಲೈಂಗಿಕ ಹಿಂಸೆ, ಕೊಲೆಗಳ ಭಾಗಿಗಳಾಗಿದ್ದರು. ಇವೆಲ್ಲವೂ ಎಷ್ಟು ಕ್ರೂರವೂ, ವಿಕೃತವೂ, ಭಯಾನಕವೂ ಆಗಿದೆಯೆಂದರೆ, ಅದರ ವಿವರಗಳಿಂದ ಜಗತ್ತು ನಿದ್ದೆ ಕಳೆದುಕೊಂಡು ಮದ್ದು ಹುಡುಕಬೇಕಾಗಿತ್ತು. ಆದರೀಗ ಯುದ್ಧಗಳ ಮೇಳಗಳನ್ನು ಆಯೋಜಿಸಿ ಗಮನವನ್ನು ಅತ್ತ ಸೆಳೆಯಲಾಗುತ್ತಿದೆ. ಬಡತನ, ಮಹತ್ವಾಕಾಂಕ್ಷೆ, ಮೋಜಿನ ಜೀವನದ ಅಪೇಕ್ಷೆ ಇತ್ಯಾದಿಗಳಿಗೆ ಆ ಹೆಣ್ಣುಮಕ್ಕಳು ಸಿಲುಕಿಕೊಂಡರು ಎಂದೇ ಬಿಂಬಿಸಲಾಗುತ್ತದೆ. ಇಲ್ಲವೇ ಶೋಕಿಸಲಾಗುತ್ತದೆ. ಅವರೆಲ್ಲಾ ಮನುಷ್ಯರಲ್ಲ, ರಾಕ್ಷಸರು ಎಂದು ಜರಿದು ಮರೆತುಬಿಡಲಾಗುತ್ತದೆ. ಆದರೆ, ಅಲ್ಲಿ ಬಲಿಯಾದ ಬಾಲಕಿಯರ ಅನುಭವವು ಬರೀ ಅವರ ವೈಯಕ್ತಿಕ ಸಂಗತಿಯಲ್ಲ. ಅದು ಈ ಸಾಮಾಜಿಕ ರಚನೆಯ ಭಾಗವಾಗಿಯೇ ಸಂಭವಿಸಿರುವುದು. ಇದಕ್ಕೆ ನಾವೆಲ್ಲರೂ ಹೊಣೆಗಾರರು ಎಂದು ಸ್ತ್ರೀವಾದ ಹೇಳುತ್ತದೆ. ಅಂದರೆ, ಹೆಣ್ಣನ್ನು ಅಧೀನ ನೆಲೆಯಲ್ಲೇ ಇರಿಸುವ ಗಂಡುಪಕ್ಷಪಾತಿ ಚಿಂತನೆಯು ಅವಳ ದೇಹ, ಮನಸ್ಸು, ಬುದ್ಧಿಗಳ ಮೇಲೆ ತನ್ನ ಯಜಮಾನಿಕೆಯನ್ನು ಪ್ರಶ್ನಾತೀತಗೊಳಿಸಿರುತ್ತದೆ. ಅದನ್ನೇ ಎಲ್ಲರೂ ಒಪ್ಪಿಕೊಳ್ಳುವಂತೆ ಸಾಮಾಜಿಕ ರಚನೆಯಲ್ಲಿರುವ ಎಲ್ಲ ಸಂಸ್ಥೆಗಳ ಮೂಲಕ ಸ್ಥಾಪಿಸಿರುತ್ತದೆ. ಅದು ಶಿಕ್ಷಣ, ಕಲೆ, ಕುಟುಂಬ, ಸರ್ಕಾರ ಯಾವುದೂ ಆಗಿರಬಹುದು. ಬಲಿಪಶುಗಳೆಡೆಗೆ ಅಯ್ಯೋ ಎಂದು ತೋರಿಸುವ ಕರುಣೆಯೂ ಮೇಲ್ನೋಟದ ನಾಟಕವೇ ಆಗಿದ್ದು ಮೂಲ ಬದಲಾವಣೆಗಳ ಕಡೆಗೆ ಗಮನವನ್ನೇ ಕೊಡುವುದಿಲ್ಲ.

ಎಪ್‌ಸ್ಟೈನ್‌ಗೆ ಬಾಲಕಿಯರನ್ನು ಹಾಗೆಲ್ಲಾ ಬಳಸಿಕೊಳ್ಳಲು ಧೈರ್ಯ ಎಲ್ಲಿಂದ ಬಂದಿತು? ಅಲ್ಲಿಗೆ ಹೋದ ಬಲಿಷ್ಠ ರಾಜಕಾರಣಿಗಳು, ಬಂಡವಾಳಿಗರು, ಸೆಲೆಬ್ರಿಟಿಗಳು, ಬೇರೆ ಬೇರೆ ಕ್ಷೇತ್ರದ ಖ್ಯಾತನಾಮರಿಗೆಲ್ಲ ಇದು ಪ್ರಶ್ನಾರ್ಹ ಸಂಗತಿಯೇ ಆಗದಿರುವುದು ಯಾಕೆ? ಇಲ್ಲಿ ಎರಡು ಸಂಗತಿಗಳು ಸ್ಪಷ್ಟ. ಒಂದು, ಹೆಣ್ಣುಮಕ್ಕಳು ಸುರಕ್ಷಿತವಲ್ಲದ ಸ್ಥಳದಲ್ಲಿ ತಾವು ದಮನಕ್ಕೆ ಒಳಗಾಗುವುದು ನಿರೀಕ್ಷಿತ ಮತ್ತು ತಾವಲ್ಲಿ ಹೋಗಿದ್ದು ತಮ್ಮದೇ ತಪ್ಪು ಎಂದು ತಪ್ಪನ್ನು ತಮ್ಮ ಮೇಲೇ ಹಾಕಿಕೊಳ್ಳುವುದು. ಎರಡನೆಯದು, ತಮಗಿರುವ ಸ್ಥಾನ, ಅಪರಿಮಿತ ಸಂಪತ್ತು, ಹೆಂಗಸರನ್ನು ಆಟಿಕೆಗಳಂತೆ, ಸಾಕುಪ್ರಾಣಿಗಳಂತೆ ಬಳಸಿಕೊಳ್ಳಲು ತಮಗೆ ಸಿಕ್ಕಿರುವ ಅಧಿಕಾರ ಎಂದು ಅಪರಾಧಿಗಳು ಅಬಾಧಿತವಾಗಿರುವುದು. ಹೀಗೆ ಭಾವಿಸಿಕೊಂಡಿರುವುದರಿಂದಲೇ ಜಗತ್ತಿನ ಎಲ್ಲ ಹೆಂಗಸರು/ದಮನಿತರು ಒಂದಾಗಲು ಸಾಧ್ಯವಾಗಿಲ್ಲ. ಇವರು ಒಂದಾಗದೇ ಈ ದಬ್ಬಾಳಿಕೆಗಳನ್ನು ನಿಯಂತ್ರಿಸುವುದು ಸಾಧ್ಯವಿಲ್ಲ. ಹೀಗೆ ದುಷ್ಟರನ್ನು ರಕ್ಷಿಸುವ ಕವಚವಾಗಿ ಪುರುಷಪ್ರಧಾನತೆಯು ಕೆಲಸ ಮಾಡುವುದರಿಂದಲೇ, ಒಳ್ಳೆಯ ಪುರುಷರು ತಮ್ಮ ತಾಯಿ, ಅಕ್ಕ–ತಂಗಿ, ಹೆಂಡತಿ, ಮಗಳು ಮನೆಯಿಂದ ಹೊರಹೋಗಿ ಸುರಕ್ಷಿತವಾಗಿ ವಾಪಾಸಾಗುತ್ತಾರೋ ಇಲ್ಲವೋ ಎಂದು ತಳಮಳಿಸುವುದು ತಪ್ಪುವುದಿಲ್ಲ. ಹೆಣ್ಣಾದ ಕಾರಣಕ್ಕೆ ನಿಮಗೆ ನಮ್ಮ ಮೇಲೆ ಹಕ್ಕಿಲ್ಲ ಎಂಬ ಸ್ತ್ರೀವಾದದ ಮಾತನ್ನು ಸರಿಯಾಗಿ ಅನ್ವಯಿಸಿಕೊಂಡರೆ ಇಡೀ ಮನುಕುಲದ ಬಿಡುಗಡೆ ಸಾಧ್ಯವಿದೆ ಎಂಬುದು ನಿಸ್ಸಂಶಯ. ಇದಕ್ಕಾಗಿ ನಮ್ಮ ದಿನ ದಿನದ ಬದುಕಿನಲ್ಲೂ ಸ್ತ್ರೀವಾದಿ ಚಿಂತನೆಯನ್ನು ಅಳವಡಿಸಿಕೊಳ್ಳಬೇಕಿದೆ. ಸುಮ್ಮನೆ ವಾದ ವಿವಾದ, ಡಿಬೇಟ್‌ಗಳಲ್ಲಿ ಮುಳುಗಿ ಸುಖವಿಲ್ಲ.


ಪ್ರೇಮಿಯ ಜೊತೆಗೂಡಿ ಗಂಡನನ್ನು ಹತ್ಯೆ ಮಾಡಿದ್ದು, ಸುಳ್ಳು ವರದಕ್ಷಿಣೆ ಕೇಸ್, ಜೀವನಾಂಶಕ್ಕೆ ಪೀಡನೆ ಮೊದಲಾದ ಉದಾಹರಣೆಗಳಿಂದ ಸ್ತ್ರೀಯರನ್ನು ಹಂಗಿಸುವುದೂ, ಅದಕ್ಕೆ ಎದುರಾಗಿ ಹೆಂಡತಿಯ ಹತ್ಯೆ, ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಪ್ರಶ್ನಿಸುವುದೂ ನಡೆಯುತ್ತದೆ. ಇವೆಲ್ಲವೂ ಅಪರಾಧಗಳೇ. ಸೂಕ್ಷ್ಮವಾಗಿ ಗಮನಿಸಿದಾಗ ಇವುಗಳೆಲ್ಲವೂ ಈಗಾಗಲೇ ಮಾಡಿಟ್ಟಿರುವ ಸಾಮಾಜಿಕ ತಾರತಮ್ಯದ ತರಬೇತಿಯ ಫಲವೇ ಆಗಿವೆ. ಯಾವೆಲ್ಲಾ ಜೀವಹಿಂಸೆಗಳನ್ನು ಹೆಣ್ಣಿಗೆ ನೀಡಲಾಗಿತ್ತೋ ಅದನ್ನೇ ಹೆಣ್ಣು ಇನ್ನೊಬ್ಬ ಗಂಡು ಅಥವಾ ಹೆಣ್ಣಿನ ಸಹಾಯದಿಂದ ಮುಂದುವರಿಸುತ್ತಿದ್ದಾಳೆ. ಇದು ನಿರಪರಾಧಿಯಾದ ಗಂಡಿನ ಬದುಕನ್ನು ಬಲಿ ತೆಗೆದುಕೊಳ್ಳುತ್ತದೆ. ಹೆಣ್ಣು ದೇಹ ಹೊತ್ತಿದ್ದರೂ ಗಂಡು ದಾಟಿಸಿದ ಕ್ರೌರ್ಯದ ದಾರಿಯನ್ನು ಆಕೆಯೂ ಅನುಸರಣೆ ಮಾಡುತ್ತಿದ್ದಾಳೆ ಎಂದಾಗ, ಬಿಸಿಮುಟ್ಟಿಸಿಕೊಂಡು ಅಲವತ್ತುಕೊಂಡರೆ ಸಾಲದು. ತನಗೆ ಮಾತ್ರ ಹಾಗೆ ಮಾಡಲು ಅಧಿಕಾರವಿದೆ ಎಂಬ ಮೂಢತೆಯಿಂದಲೂ ಹೊರಬರಬೇಕಿದೆ. ಅದನ್ನೇ ಸ್ತ್ರೀವಾದ ಹೇಳುತ್ತದೆ.

ಚಿಂತಕಿ ನ್ಯಾನ್ಸಿ ಚೊಡರೊವ್ ಹೇಳುವ ಒಂದು ಮಾತನ್ನು ಗಮನಿಸಬೇಕಿದೆ. ಯುವಕರ ಹತ್ತಿರ ಒಳ್ಳೆಯ ಮಾನವನ ಲಕ್ಷಣವೇನು? ಎಂದು ಕೇಳಿದಾಗ– ಗೌರವ, ಕರ್ತವ್ಯ, ತೊಡಗಿಸಿಕೊಳ್ಳುವಿಕೆ, ತ್ಯಾಗ ಎಂದೆಲ್ಲ ಹೇಳುತ್ತಾರಂತೆ. ನಿಜವಾದ ಗಂಡಸಿನ ಲಕ್ಷಣವೇನು? ಎಂದು ಕೇಳಿದ ತಕ್ಷಣವೇ, ಬಲಿಷ್ಠ, ಕಠಿಣ, ದೌರ್ಬಲ್ಯವನ್ನು ಎಂದೂ ತೋರಿಸಿಕೊಳ್ಳದವ, ಹೇಗಾದರೂ ಗೆಲುವನ್ನು ಪಡೆದೇ ತೀರಬೇಕಾದವ, ಸಂಪತ್ತು ಗಳಿಸಬೇಕಾದವ, ಪೌರುಷ ತೋರಬೇಕಾದವ ಎನ್ನುತ್ತಾರಂತೆ. ಈ ಉತ್ತರಗಳು ಯುವಕರ ಮೇಲಿರುವ ಸಾಂಸ್ಕೃತಿಕ ಒತ್ತಡವನ್ನು ಹೇಳುತ್ತವೆ ಎಂದಾಕೆ ಹೇಳುತ್ತಾರೆ. ಈ ಕೃತಕ ನಿರ್ಮಿತ ಒತ್ತಡದಿಂದ ಪಾರಾಗಲು ಯುವಕರಿಗಿರುವ ಒಂದೇ ದಾರಿ ಸ್ತ್ರೀವಾದ.

ಈಚೆಗೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಪುಟ್ಟ ಹುಡುಗರ ಬಳಿ 'ಹುಡುಗನಾಗಿ ಅಳ್ತೀಯಲ್ಲ ಅಂತ ಯಾರಾದರೂ ಕೇಳಿದಾಗ ಬೇಜಾರಾಗುತ್ತಾ? ಇಲ್ವಾ?' ಎಂದು ಕೇಳಿದೆ. ತಕ್ಷಣವೇ ಆ ಮಕ್ಕಳು 'ಬೇಜಾರಾಗುತ್ತೆ' ಅಂದರು. ಹುಡುಗಿಯರನ್ನು, 'ಹುಡುಗಿಯಾಗಿ ಹಿಂಗ್ ಆಡ್ತೀಯಲ್ಲ ಅಂತ ಕೇಳಿದರೆ ಏನನ್ನಿಸುತ್ತೆ' ಅಂತ ಕೇಳಿದಾಗ, ತುಂಬಾ 'ಸಿಟ್ಟು ಬರುತ್ತೆ' ಅಂದರು. ಬಾಲ್ಯದಿಂದಲೇ ರೂಪಿಸುವ ಈ ಒತ್ತಡಗಳನ್ನು ನಿಲ್ಲಿಸಿ, ಅಳು ನಗು ಇಬ್ಬರಿಗೂ ಸಹಜ, ಇಬ್ಬರಿಗೂ ಇರುವ ಸವಾಲುಗಳನ್ನು ಹೇಗೆ ಎದುರಿಸಬೇಕು, ಹೇಗೆ ಇಬ್ಬರ ದೇಹಕ್ಕೂ ಸ್ವಾಯತ್ತತೆ ಇದ್ದು ಯಾರೂ ಆಕ್ರಮಣ ಮಾಡುವಂತಿಲ್ಲ ಎಂದು ಹೇಳಿಕೊಡಬೇಕಾಗಿದೆ.

ಬಾಲ್ಯದಿಂದಲೇ ಮಕ್ಕಳ ಕಾಳಜಿ ಮಾಡುವ ಕೆಲಸ ತಾಯಿಯದಷ್ಟೇ ಅಲ್ಲ, ತಂದೆಯದೂ ಹೌದು ಎಂಬುದನ್ನು ಕ್ರಿಯೆಯಲ್ಲೂ ಸಾಮಾನ್ಯೀಕರಿಸಬೇಕಾಗಿದೆ. ಮಾತೆತ್ತಿದರೆ 'ಈಗೆಲ್ಲ ಮೊದಲಿನಂತಿಲ್ಲ. ಎಲ್ಲ ಮನೆಯಲ್ಲೂ ಮಹಿಳೆಯರನ್ನು ಸಮಾನವಾಗಿ ನೋಡಲಾಗುತ್ತದೆ. ಕೆಲವೆಡೆ ಹೆಂಗಸರ ಯಜಮಾನಿಕೆಯೇ ನಡೆಯುವುದು' ಎಂದೆಲ್ಲ ಹೇಳಲಾಗುತ್ತದೆ. ಇದೇ ರೀತಿ ಮಾತನಾಡಿದ ಕೆಲವು ಕಾಲೇಜು ಹುಡುಗರಿಗೆ, 'ಹೌದೇ? ನಿಮ್ಮ ಮನೆಗಳಲ್ಲೂ ಹಾಗೇ ಇದೆಯೇ' ಎಂದು ಕೇಳಿದೆ. 'ಹೌದು' ಎಂದರು. 'ನಿಮ್ಮೆಲ್ಲರ ಮನೆಯಲ್ಲೂ ಅಮ್ಮ ಮನೆಯ ಹೊರಗೂ ದುಡಿಯುತ್ತಿರಬೇಕಲ್ಲ?' ಎಂದು ಕೇಳಿದೆ. 'ಹೌದು' ಅಂದರು. 'ಹಾಗಾದರೆ ಬೆಳಗ್ಗೆ ಮನೆಕೆಲಸ, ಅಡುಗೆಯನ್ನು ಯಾರು ಮಾಡುತ್ತಿದ್ದಾರೆ? ನೀವೆಲ್ಲಾ ಸೇರಿ ಮಾಡುತ್ತಿದ್ದೀರಾ?' ಎಂದು ಕೇಳಿದೆ. ಎಲ್ಲರೂ 'ಇಲ್ಲ, ಅಮ್ಮನೇ ಮಾಡುತ್ತಿದ್ದಾಳೆ' ಎಂದರು. 'ಹಾಗಾದರೆ ಸಮಾನತೆ ಬಂದಿದೆ ಎಂದು ನಿಮಗನ್ನಿಸುತ್ತಿದೆಯೇ?' ಎಂದಾಗ, 'ಇಲ್ಲ ಮೇಡಂ, ನಾವು ಇದನ್ನು ಗಮನಿಸಿಯೇ ಇರಲಿಲ್ಲ' ಎಂದರು. ನ್ಯಾನ್ಸಿ ಚೊಡರೊವ್ ಇದನ್ನೇ 'ದ ರಿಪ್ರೊಡಕ್ಷನ್ ಆಫ್ ಮದರಿಂಗ್' ಎನ್ನುತ್ತಾರೆ. ಇದು ಹೀಗೇ ದಾಟುತ್ತಲೇ ಇದೆ.

ಎಲ್ಲಿಯತನಕ ಪ್ರೀತಿಸುವುದು, ಕೊಡುವುದು, ಹಂಚಿಕೊಳ್ಳುವುದು, ಕಾಳಜಿವಹಿಸುವುದು ಎಂಬ ಸ್ತ್ರೀವಾದಿ ಚಿಂತನೆಗಳು ಇಡೀ ಮನುಕುಲದ ಚಿಂತನೆಗಳಾಗುವುದಿಲ್ಲವೋ ಅಲ್ಲಿಯ ತನಕ ಇದುವರೆಗೂ ಮುನ್ನೆಲೆಗೆ ತರಲಾದ ಪಿತೃಪ್ರಧಾನ ಮೌಲ್ಯಗಳಾದ ದ್ವೇಷದ, ವಿನಾಶದ, ವಿಭಜನೆಯ, ಆಕ್ರಮಣದ ಜೀವನವಿಧಾನಗಳಿಂದ ಮನುಷ್ಯರನ್ನು ಉಳಿಸಲು ಸಾಧ್ಯವಿಲ್ಲ.



ವಾಚಕರ ವಾಣಿ

ವಿಶ್ವಾಸ ಉಳಿಸಿಕೊಳ್ಳುವುದೇ ವಿಶ್ವಸಂಸ್ಥೆ?

ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ಕಬಂಧಬಾಹುಗಳು ಚಾಚಿಕೊಂಡಿವೆ. ಆ ದೇಶಗಳ ಮೂಲಸೌಕರ್ಯದ ವ್ಯವಸ್ಥೆ, ಜನವಸತಿ ಪ್ರದೇಶ, ತೈಲ ಮತ್ತು ಅನಿಲ ಸಂಸ್ಕರಣೆ ಘಟಕ, ವಿಮಾನ ನಿಲ್ದಾಣ, ಶಾಲೆ, ಹಡಗು, ರೈಲು ನಿಲ್ದಾಣಗಳ ಮೇಲೆ ಬಾಂಬ್ ದಾಳಿ ನಡೆಯುತ್ತಿದೆ. ನೂರಾರು ಜನರು ಅಸುನೀಗಿದ್ದಾರೆ. ಅಮೆರಿಕ ಮತ್ತು ಇಸ್ರೇಲ್‌ನ ರಕ್ತಪಿಪಾಸುತನವೇ ಈ ಯುದ್ಧಕ್ಕೆ ಕಾರಣ. ಯುದ್ಧವು ಜಗತ್ತಿನ ಅರ್ಥ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದೆ. ಕಚ್ಚಾತೈಲ ದುಬಾರಿ ಆಗಲಿದೆ. ಈ ಯುದ್ಧ ನೋಡಿದಾಗ ವಿಶ್ವಸಂಸ್ಥೆ ಅಸ್ತಿತ್ವದಲ್ಲಿ ಇದೆಯೇ ಎಂಬ ಅನುಮಾನ ಯಾರನ್ನಾದರೂ ಕಾಡದಿರದು. ಯುದ್ಧದಂಥ ಭೀಕರ ಸಮಸ್ಯೆಯಿಂದಾಗಿ ಇಡೀ ಮನುಕುಲವೇ ಸಂಕಷ್ಟಕ್ಕೆ ಸಿಲುಕಿರುವಾಗ ವಿಶ್ವಸಂಸ್ಥೆಯ ಮೌನದ ಹಿಂದಿನ ಮರ್ಮವಾದರೂ ಏನು?

ಸುರೇಶ ಮಂಜರಗಿ, ಸಂಕೇಶ್ವರ

ಎಸ್ಸೆಸ್ಸೆಲ್ಸಿ ಪರೀಕ್ಷಾ ಒತ್ತಡದ ಆಗುಹೋಗು

ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಶತಾಯಗತಾಯ ಶೇ 100ರಷ್ಟು ಗುರಿ ಸಾಧಿಸಬೇಕೆಂದು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಇದಕ್ಕಾಗಿ ಹಲವು ಕಸರತ್ತು ನಡೆಸುತ್ತಿದೆ. ಆದರೆ, ಇಲಾಖೆಯ ನಡೆಯು ಪೋಷಕರು, ಶಿಕ್ಷಕರು ಮತ್ತು ಶಿಕ್ಷಣಾಧಿಕಾರಿಗಳ ಮೇಲೆ ಒತ್ತಡ ಹೆಚ್ಚಿಸಿದೆ. ಅಂತಿಮವಾಗಿ ಮಕ್ಕಳ ಮನಃಸ್ಥಿತಿಯ ಮೇಲೂ ಅಗಾಧ ಪರಿಣಾಮ ಬೀರುತ್ತದೆ. ಮಕ್ಕಳ ಅಂಕಗಳಿಕೆಗೆ ಹಾಗೂ ಶಾಲೆಯ ಫಲಿತಾಂಶ ಹೆಚ್ಚಳಕ್ಕೆ ಒತ್ತಡ ಹಾಕುವುದು ಸರ್ವಥಾ ಸರಿಯಲ್ಲ. ಶಿಕ್ಷಕರು ಒತ್ತಡರಹಿತವಾಗಿ ಬೋಧಿಸಲು ಹಾಗೂ ಮಕ್ಕಳು ಸುಲಲಿತವಾಗಿ ಕಲಿಯಲು ಸೂಕ್ತ ಮಾರ್ಗೋಪಾಯ ಕಂಡುಕೊಳ್ಳುವುದು ಇಲಾಖೆಯ ಹೊಣೆಯಾಗಿದೆ.

ಸಿದ್ದೇಶ ಅಶೋಕ ಚನ್ನಳ್ಳಿ, ಹಿರೇಕೆರೂರು

ಕಸಾಪ ಅಧ್ಯಕ್ಷ ಅವಧಿ 3 ವರ್ಷ ಸಾಕು

ಸಾಹಿತಿಗಳಲ್ಲದ, ಸಾಹಿತ್ಯ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡದಿರುವ ಆಸಕ್ತಿಯಷ್ಟೇ ಇರುವ ನಿವೃತ್ತ ಅಧಿಕಾರಿಗಳು ಕನ್ನಡ ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿ ಬರಲು ಪ್ರಾರಂಭಿಸಿದ ಮೇಲೆ ಪರಿಷತ್ತು ತನ್ನ ಗತವೈಭವವನ್ನು ಕಳೆದುಕೊಳ್ಳುತ್ತಾ ಬಂದಿದೆ. ಅಧ್ಯಕ್ಷರಾಗಿ ಗೆದ್ದು ಬಂದವರು, ಅಧ್ಯಕ್ಷ ಸ್ಥಾನವನ್ನು ಐದು ವರ್ಷಗಳವರೆಗೆ ರಾಜಕೀಯ ನೆಲೆಯನ್ನಾಗಿ ಪರಿವರ್ತನೆ ಮಾಡಿಕೊಂಡಿದ್ದಾರೆ. ಸಾಂಸ್ಕೃತಿಕ ಸಂಘಟನೆಗಳಿಗೆ ಅಧ್ಯಕ್ಷರ ಅಧಿಕಾರಾವಧಿ ಮೂರು ವರ್ಷ ಸಾಕು. ಇತ್ತೀಚೆಗೆ ಕಸಾಪದಲ್ಲಿ ಸಾಧನೆಗಿಂತ ಅಬ್ಬರವೇ ಜೋರಾಗಿದೆ. ಮನಸೋಇಚ್ಛೆ ಬೈಲಾ ಬದಲಿಸಿಕೊಳ್ಳಲಾಗಿದೆ. ಆ ವಿವಾದಾತ್ಮಕ ಬೈಲಾವನ್ನು ಹಿಂತೆಗೆದುಕೊಂಡು, ಈ ಹಿಂದೆ ಇದ್ದ ಹಳೆಯ ಬೈಲಾವನ್ನೇ ಉಳಿಸಿಕೊಂಡು, ಮೂರು ವರ್ಷದ ಅವಧಿಗಾಗಿ ಪರಿಷತ್ತಿಗೆ ಚುನಾವಣೆ ನಡೆಯಲು ಅನುಕೂಲವಾಗುವಂತೆ ಸರ್ಕಾರ ಕ್ರಮ ತೆಗೆದುಕೊಳ್ಳುವುದು ಸೂಕ್ತ.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಜಲಪಾತ್ರೆ ಬರಿದು; ಜಲಕ್ಷಾಮದ ದಿಗಿಲು

ರಾಜ್ಯದಲ್ಲಿ ಬೇಸಿಗೆಯ ಬಿಸಿ ಏರುತ್ತಿದ್ದು ಕುಡಿಯುವ ನೀರಿನ ಕೊರತೆ ತಲೆದೋರುತ್ತಿದೆ. ಈ ಜಲದಾಹ ತೀರಿಸಲು ಹೆಚ್ಚು ಹೆಚ್ಚು ಕೊಳವೆಬಾವಿ ಕೊರೆಸುವ ಸರ್ಕಾರದ ತೀರ್ಮಾನ ಇನ್ನಷ್ಟು ಆತಂಕ ಸೃಷ್ಟಿಸಿದೆ (ಪ್ರ.ವಾ., ಮಾ. 3). ನೀರು ಬೇಕು ಅನ್ನಿಸಿದಾಗ ಕೊಳವೆಬಾವಿ ಕೊರೆಯುವುದು ಗಡ್ಡಕ್ಕೆ ಬೆಂಕಿ ಹತ್ತಿದಾಗ ಬಾವಿ ತೋಡಿದಂತಲ್ಲವೆ? ವಾತಾವರಣ ವೈಪರೀತ್ಯದ ಈ ದಿನಗಳಲ್ಲಿ ತೀವ್ರ ಮಳೆಯೂ, ಜಲಕ್ಷಾಮವೂ ನಿರೀಕ್ಷಿತವೇ.

ಜಲಕ್ಷಾಮದ ನಿರೀಕ್ಷೆಯಲ್ಲಿ ಮಳೆನೀರಿನ ಸಂಗ್ರಹ, ಬಾವಿಗಳ ಜಲಮರುಪೂರಣಕ್ಕೆ ಹೆಚ್ಚು ಗಮನಹರಿಸಿ ಕೆಲಸ ಮಾಡಬೇಕಿತ್ತು. ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಜಗತ್ತನ್ನು ನೋಡುವ ಅಧಿಕಾರಿಗಳಿಗೆ ಜಲಮರುಪೂರಣ ದಂತಹ ವಿಚಾರಗಳು ಹೊಳೆಯುವುದಿಲ್ಲ. ಭೂಮಿಯೊಳಗಿನ ಜಲಪಾತ್ರೆ ಖಾಲಿ ಆಗಿದೆ. ಖಾಲಿ ಆದುದನ್ನು ನಾವು ತುಂಬಿಲ್ಲ. ಈಗ ಜಲಕ್ಷಾಮ ಉಂಟಾದಾಗ ಮತ್ತೆ ಕೊಳವೆಬಾವಿ ಕೊರೆಯುವ ವಿಚಾರ ಮಾಡುವ ಅಧಿಕಾರಿಗಳಿಗೆ ಏನನ್ನೋಣ?

ಶಾರದಾ ಗೋಪಾಲ, ಧಾರವಾಡ

ಜಾತ್ರೆ, ಉತ್ಸವಕ್ಕೂ ರಾಜಕೀಯ ನಂಟು!

ಇತ್ತೀಚೆಗೆ ಜಾತ್ರೆ ಮತ್ತು ಉತ್ಸವಗಳಲ್ಲಿ ರಾಜಕೀಯ ನುಸುಳುತ್ತಿದೆ. ಮತೀಯವಾದಿಗಳು ಪ್ರತಿ ವಿಷಯದಲ್ಲೂ ರಾಜಕೀಯ ಪಕ್ಷವನ್ನು ಮುನ್ನೆಲೆಗೆ ತರಲು ಪ್ರಯತ್ನಿಸುವುದು ಅವ್ಯಾಹತವಾಗಿದೆ. ಸ್ವಪ್ರತಿಷ್ಠೆಗಾಗಿ ಧಾರ್ಮಿಕ ಸ್ಥಳ, ಉತ್ಸವ, ಜಾತ್ರೆಗಳನ್ನು ಬಳಸಿಕೊಳ್ಳುವುದು ಸರಿಯಲ್ಲ. ಇದು ಸಂವಿಧಾನದ ಆಶಯಕ್ಕೆ ವಿರುದ್ಧವಾದುದು. ಜಾತ್ರೆ, ಉತ್ಸವವು ಒಬ್ಬ ವ್ಯಕ್ತಿ, ಪಕ್ಷ, ಸಮುದಾಯಕ್ಕೆ ಸೀಮಿತವಾಗಿಲ್ಲ. ಎಲ್ಲರನ್ನೂ ಒಳಗೊಳ್ಳುವುದೇ ಅವುಗಳ ಶಕ್ತಿ. ಇಂತಹವುಗಳು ರಾಜಕೀಯ ಕೆಸರೆರಚಾಟ, ಬಲ ಪ್ರದರ್ಶನಕ್ಕೆ ವೇದಿಕೆಯಾಗಬಾರದು. ಜನರ ಧಾರ್ಮಿಕ, ಆಧ್ಯಾತ್ಮಿಕ ಭಾವನೆಗಳಿಗೆ ಧಕ್ಕೆ ತರುವ ಹಕ್ಕು ಯಾರಿಗೂ ಇಲ್ಲ.

ಕಿರಣ್ ಹೂಗಾರ್ ಹೆಬ್ಬಳ್ಳಿ, ಧಾರವಾಡ

ಸೆಟ್‌ಬ್ಯಾಕ್: ದಂಡ ಕಟ್ಟಿದರೆ ಸಕ್ರಮವೆ?

ಕಟ್ಟಡಗಳ ಸೆಟ್‌ಬ್ಯಾಕ್ ಉಲ್ಲಂಘನೆ ವಿನಾಯಿತಿಯನ್ನು ಶೇ 5ರಿಂದ ಶೇ 15ಕ್ಕೆ ವಿಸ್ತರಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮುಂದಾಗಿದೆ (ಪ್ರ.ವಾ., ಮಾ. 4). ಈಗ ನಿರ್ಮಾಣ ಆಗುತ್ತಿರುವ ಮತ್ತು ಮುಂದಿನ ದಿನಗಳಲ್ಲಿ ನಿರ್ಮಾಣವಾಗುವ ಐದು ಸಾವಿರ ಚದರ ಅಡಿ ನಿವೇಶನದ ಕಟ್ಟಡಗಳಿಗೆ ಇದು ಅನ್ವಯವಾಗಲಿದೆ. ದಂಡ ಕಟ್ಟಿದರೆ ಸಕ್ರಮ ಆಗುವ ಹಾಗೆ ಮಾಡಿದರೆ ಪ್ರಯೋಜನವೇನು? ಹಣ ಇರುವವರು ಉಲ್ಲಂಘನೆ ಮಾಡಿಯೇ ತೀರುತ್ತಾರೆ. ಹಾಗಾದರೆ ನಿಯಮ ಇರುವುದು ಏತಕ್ಕೆ? ಈ ಉಲ್ಲಂಘನೆ ನಿಯಮವನ್ನು ಈಗಾಗಲೇ ನಿರ್ಮಾಣ ಆಗುತ್ತಿರುವ ಕಟ್ಟಡಗಳಿಗಷ್ಟೆ ಅನ್ವಯಿಸುವುದು ಸೂಕ್ತ. ಇಲ್ಲವಾದಲ್ಲಿ ನಿಯಮ ಎಂಬುದಕ್ಕೆ ಅರ್ಥವೇ ಇರದು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಚುರುಮುರಿ



ಫೋನ್ ಕದ್ದಾಲಿಕೆ ಪವರ್!

• ಗುರು ಪಿ.ಎಸ್.

'ಏನ್ ಸಾಹೇಬ್ರೆ... ಗೋವಾ ಟೂರ್ ಪ್ಲ್ಯಾನ್ ಮಾಡ್ತಿದೀರಿ. ಆದರೆ ನನ್ ಹತ್ರ ಆಫೀಸ್ ಮೀಟಿಂಗ್ ಅಂತ ಹೇಳಿದ್ರಿ' ಡಿಟೆಕ್ಟಿವ್ ಥರ ಕೇಳಿದಳು ಹೆಂಡತಿ.

'ನನ್ನ ಫ್ರೆಂಡ್ಸ್ ಜೊತೆ ಮಾತ್ರ ಡಿಸ್ಕಸ್ ಮಾಡಿದ್ದು ನಿನಗೆ ಹೇಗ್ ಗೊತ್ತಾಯ್ತಮ್ಮ, ನನ್ ಫೋನ್ ಕದ್ದಾಲಿಸ್ತಿದ್ದೀಯೋ ಹೇಗೆ?' ಅಚ್ಚರಿಯಿಂದ ಕೇಳಿದೆ.

'ಕದ್ದು ಕೇಳೋದೇ ಬೇಡ, ಅವರವರ ಮುಖಭಾವ ನೋಡಿ ಹೇಳ್ ಬಿಡ್ತೀನಿ, ಯಾರ ಮನಸಲ್ಲಿ ಏನಿದೆ ಅಂತ'.

'ಓಹ್, ಅಷ್ಟೊಂದ್ ಪವರ್ ಇದೆಯಾ ನಿನಗೆ? ಈಗ ನಮ್ಮ ಸಿಎಂ ಸಾಹೇಬ್ರು ಮೊದಲ ಬಾರಿ ಎಮ್ಮೆಲ್ಲೆ ಆದವರಿಗೆ ಮಂತ್ರಿ ಸ್ಥಾನ ಇಲ್ಲ ಅಂತ ಹೇಳಿದ್ರು, ಅವರ ಮನಸಲ್ಲಿ ಏನಿರಬಹುದು?'

'ಮುಂದೆ ಇದೇ ನಿಯಮ ಅಪ್ಲೈ ಮಾಡಿ, ಮೊದಲ ಬಾರಿ ಡಿಸಿಎಂ ಆದವರಿಗೆ ಸಿಎಂ ಆಗೋ ಅವಕಾಶ ಇಲ್ಲ ಅಂತಾನೂ ಹೇಳಬಹುದು' ಎಂದಳು.

'ಅದ್ ಸರಿ, ನಮ್ಮ ಮಲ್ಲೇಶ್ವರ ಕ್ಷೇತ್ರದ ಬಿಜೆಪಿ ಎಮ್ಮೆಲ್ಲೆ ಮನದಲ್ಲಿ ಈಗ ಏನಿರಬಹುದು?' ಎಂದೆ.

'ಸಿಂಪಲ್. ಸಿಎಂ ಹೇಳಿದ ರೂಲ್ಸೇ ನಮ್ಮ ಪಾರ್ಟಿಗೂ ಅನ್ವಯಿಸಬೇಕಿತ್ತು. ಮೊದಲ ಬಾರಿ ಎಮ್ಮೆಲ್ಲೆ ಆದವರಿಗೆ ರಾಜ್ಯ ಅಧ್ಯಕ್ಷ ಸ್ಥಾನ ಇಲ್ಲ ಅಂತ ಹೇಳಿದ್ರೆ ನಾನಾದರೂ ನಮ್ಮ ಪಕ್ಷದ ಸ್ಟೇಟ್ ಪ್ರೆಸಿಡೆಂಟ್ ಆಗಿರ್ತಿದ್ದೆ ಅಂತ ಯೋಚಿಸ್ತಿದ್ದಾರೆ' ಎಂದಳು ನಗುತ್ತಾ.

'ಸ್ಟೇಟ್ ಬೇಡ. ಇಂಟರ್ ನ್ಯಾಷನಲ್ ಲೆವೆಲ್‌ಗೆ ಹೋಗೋಣ. ಟ್ರಂಪ್ ಮನದಲ್ಲಿ ಈಗ ಏನಿರಬಹುದು?'

'ನಾನಿಷ್ಟೆಲ್ಲ ಮಾಡ್ತಿದ್ರು, ಸಾಕು ಸುಮ್ನಿರಯ್ಯ, ಜಗದ ಶಾಂತಿ ಹಾಳು ಮಾಡಬೇಡ, ನಿನಗೆ ನೊಬೆಲ್ ಪೀಸ್ ಪ್ರಶಸ್ತಿ ಕೊಡ್ತೀವಿ ಅಂತ ಈವರೆಗೂ ಯಾರೂ ಹೇಳ್ತಿಲ್ವಲ್ಲ ಅಂತ ಚಡಪಡಿಸ್ತಿರಬಹುದು'.

'ವಾವ್, ಏನಮ್ಮ ನಿನ್ನ ಶಕ್ತಿ... ಎಲ್ಲರ ಮನದಲ್ಲಿರೋದನ್ನ ಹಂಗಂಗೇ ಹೇಳ್ತೀಯ' ಎಂದು ಹೆಂಡತಿಯ ಬೆನ್ನು ತಟ್ಟುತ್ತಾ, ಗೋವಾ ಬದಲು ಥಾಯ್ಲೆಂಡ್ ಫ್ಲೈಟ್ ಏರಲು ಹೊರಟು ನಿಂತೆ!

ಸಂಗತ

ಕೆಪಿಎಸ್‌ಸಿ: ವಿವೇಕವೇ ವಿಶ್ವಾಸಾರ್ಹತೆ ಮೂಲ

ನೇಮಕಾತಿ ಬಗೆಗಿನ 'ಸಾರ್ವಜನಿಕ ಅಪನಂಬಿಕೆ' ಹೋಗಲಾಡಿಸುವ ಅವಕಾಶ ಈಗ ಕೆಪಿಎಸ್‌ಸಿ ಮುಂದಿದೆ. ಧೈರ್ಯಶಾಲಿ ನಡೆಯಿಂದ ಪಾರದರ್ಶಕತೆ ಸಾಧ್ಯ.


• ಜಿ.ಬಿ. ವಿನಯ್ ಕುಮಾರ್

ರಾಜ್ಯದ ಆಡಳಿತ ವ್ಯವಸ್ಥೆಗೆ ಭದ್ರನೆಲೆ ಒದಗಿಸುವ ಗೆಜೆಟೆಡ್ ಪ್ರೊಬೆಷನರ್ಸ್ ನೇಮಕಾತಿ ಪ್ರಕ್ರಿಯೆ ಬರೀ ಒಂದು ಪರೀಕ್ಷೆಯಲ್ಲ; ಅದು ಭವಿಷ್ಯದ ಆಡಳಿತದ ಗುಣಮಟ್ಟವನ್ನು ನಿರ್ಧರಿಸುವ ಮಹತ್ವದ ಹಂತ. ಈ ಹಿನ್ನೆಲೆಯಲ್ಲಿ 'ಕರ್ನಾಟಕ ಲೋಕ ಸೇವಾ ಆಯೋಗ' (ಕೆಪಿಎಸ್‌ಸಿ) ನಡೆಸಲಿರುವ ಸಂದರ್ಶನ ಪ್ರಕ್ರಿಯೆಯು ಸಂಪೂರ್ಣ ಪಾರದರ್ಶಕ, ನೈತಿಕತೆಯ ಹಾಗೂ ವೇಗದ ಮಾನದಂಡಗಳನ್ನು ಪೂರೈಸುವುದು ಅವಶ್ಯಕ. ಇತ್ತೀಚಿನ ವರ್ಷಗಳಲ್ಲಿ ವಿವಿಧ ಪರೀಕ್ಷೆಗಳ ಸುತ್ತಮುತ್ತ ಉಂಟಾದ ಗೊಂದಲಗಳು ಸಾರ್ವಜನಿಕ ನಂಬಿಕೆಗೆ ಧಕ್ಕೆ ತಂದಿವೆ. ಈ ಬಾರಿ ಯಾವುದೇ ಸಂಶಯಕ್ಕೂ ಅವಕಾಶ ನೀಡದಂತೆ ಸುಧಾರಣೆಗಳನ್ನು ಜಾರಿಗೊಳಿಸಬೇಕಾಗಿದೆ.

2024ರ ಆಗಸ್ಟ್‌ನಲ್ಲಿ ನಡೆದ ಪ್ರಿಲಿಮಿನರಿ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಲೋಪದೋಷ ಕಂಡುಬಂದ ಹಿನ್ನೆಲೆಯಲ್ಲಿ, ಡಿಸೆಂಬರ್‌ನಲ್ಲಿ ಮರುಪರೀಕ್ಷೆ ನಡೆಸಬೇಕಾಯಿತು. 2025ರ ಮೇ ತಿಂಗಳಲ್ಲಿ ಮುಖ್ಯ ಪರೀಕ್ಷೆ ನಡೆದಿದ್ದು, ಸುಮಾರು 6,000 ಅಭ್ಯರ್ಥಿಗಳು ಭಾಗವಹಿಸಿದ್ದರು. 2026ರ ಫೆಬ್ರುವರಿಯಲ್ಲಿ ಪ್ರಕಟವಾದ ಫಲಿತಾಂಶದ ಮೂಲಕ ಒಟ್ಟು 384 ಹುದ್ದೆಗಳಿಗೆ 1:3ರ ಅನುಪಾತದಲ್ಲಿ, ಸುಮಾರು 1,152 ಅಭ್ಯರ್ಥಿಗಳು ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಈ ಸಮಗ್ರ ಪ್ರಕ್ರಿಯೆ ಈಗ ಅಂತಿಮ ಹಾಗೂ ಅತ್ಯಂತ ಸಂವೇದನಾಶೀಲ ಹಂತ ತಲುಪಿದೆ.

ಹಿಂದೆ 50 ಅಂಕಗಳನ್ನು ಹೊಂದಿದ್ದ ಸಂದರ್ಶನದ ಅಂಕಗಳನ್ನು ಈಗ 25ಕ್ಕೆ ಇಳಿಸಿರುವುದು ಸ್ವಾಗತಾರ್ಹ. ಕನಿಷ್ಠ 10 ಮತ್ತು ಗರಿಷ್ಠ 20 ಅಂಕಗಳ ಮಿತಿ ನಿಗದಿ ಮಾಡಿ, ಆ ಚೌಕಟ್ಟನ್ನು ಮೀರಿ ಅಂಕ ನೀಡಿದಲ್ಲಿ ಕಾರಣ ದಾಖಲಿಸುವ ನಿಯಮ ರೂಪಿಸಿರುವುದು ಪಾರದರ್ಶಕತೆಯತ್ತ ಹೆಜ್ಜೆ ಎನ್ನಬಹುದು. ಆದರೆ, ಬರೀ ಅಂಕಗಳ ಮಿತಿ ಕಡಿತಗೊಳಿಸು ವುದರಿಂದ ವಿಶ್ವಾಸ ಸ್ಥಾಪನೆಯಾಗುವುದಿಲ್ಲ. ಪ್ರಕ್ರಿಯೆಯಲ್ಲಿನ ಮೇಲ್ನೋಟದ ಬದಲಾವಣೆಗಿಂತಲೂ ಅದರ ವಿಶ್ವಾಸಾರ್ಹತೆ ಮುಖ್ಯ.

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಅನುಸರಿಸುವ 'ರಹಸ್ಯ ಬೋರ್ಡ್' ವ್ಯವಸ್ಥೆ ಇಲ್ಲಿಯೂ ಜಾರಿಯಾಗಬೇಕಾಗಿದೆ. ಅಭ್ಯರ್ಥಿಗಳಿಗೆ ತಮ್ಮ ಸಂದರ್ಶನ ಯಾವ ಬೋರ್ಡ್ ಮುಂದೆ ನಡೆಯಲಿದೆ ಎಂಬ ಮಾಹಿತಿ ಮುಂಚಿತವಾಗಿ ತಿಳಿಯದಂತೆಯೂ, ಬೋರ್ಡ್ ಸದಸ್ಯರಿಗೂ ಅಭ್ಯರ್ಥಿಗಳ ವಿವರ ಪೂರ್ವಭಾವಿಯಾಗಿ ತಿಳಿಯದಂತೆಯೂ ವ್ಯವಸ್ಥೆ ಮಾಡುವುದು ಅಗತ್ಯ. ಏಕಕಾಲದಲ್ಲಿ ಏಳು ಅಥವಾ ಎಂಟು ಸ್ವತಂತ್ರ ಬೋರ್ಡ್‌ಗಳನ್ನು ರಚಿಸಿ, ಯಾದೃಚ್ಛಿಕ ಹಂಚಿಕೆ ಪದ್ಧತಿ ಜಾರಿಗೊಳಿಸಿದರೆ ಯಾವುದೇ ವ್ಯಕ್ತಿ ಅಥವಾ ಗುಂಪು ಒಂದು ನಿರ್ದಿಷ್ಟ ಬೋರ್ಡ್ ಅನ್ನು ಪ್ರಭಾವಿಸಲು ಸಾಧ್ಯವಾಗುವುದಿಲ್ಲ. ಈ ವ್ಯವಸ್ಥೆಯನ್ನು ಪರೀಕ್ಷಾ ನಿಯಂತ್ರಣಾಧಿಕಾರಿ ಅಥವಾ ಕಾರ್ಯದರ್ಶಿಗಳ ಮಟ್ಟದಲ್ಲಿ ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಸರ್ಕಾರವೂ ನಿಗಾವಹಿಸಬೇಕು.



ಸಂದರ್ಶನ ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣವು ಕಡ್ಡಾಯ ಆಗಬೇಕು. 1,152 ಅಭ್ಯರ್ಥಿಗಳಲ್ಲಿ ಪ್ರತಿಯೊಬ್ಬರ ಸಂದರ್ಶನವೂ ದಾಖಲಾಗಿ ಭವಿಷ್ಯದಲ್ಲಿ ನ್ಯಾಯಾಲಯ ಅಥವಾ ಮೇಲ್ದರ್ಜೆಯ ಪರಿಶೀಲನೆಗೆ ಸಾಕ್ಷ್ಯವಾಗಿ ಉಳಿಯಬೇಕು. ಇದೇ ವೇಳೆ ಸಂದರ್ಶನ ಮುಗಿದ ತಕ್ಷಣ ಬೋರ್ಡ್ ನೀಡಿದ ಅಂಕಗಳನ್ನು ಲಕೋಟೆಯಲ್ಲಿ ಸೀಲ್ ಮಾಡಿ ಕಳುಹಿಸುವ ಪದ್ಧತಿ ಜಾರಿಗೆ ತರಬೇಕು. ಮುಖ್ಯ ಪರೀಕ್ಷೆ ಹಾಗೂ ಸಂದರ್ಶನದ ಅಂಕಗಳ ಸಮಗ್ರ ಮೊತ್ತವೇ ಅಂತಿಮ ಫಲಿತಾಂಶವನ್ನು ನಿರ್ಧರಿಸಬೇಕು.

ಸಮಯಪಾಲನೆಯೂ ಅಷ್ಟೇ ಮುಖ್ಯ. ದಿನಕ್ಕೆ ಕನಿಷ್ಠ 50ರಿಂದ 100 ಅಭ್ಯರ್ಥಿಗಳ ಸಂದರ್ಶನ ನಡೆಸುವ ವ್ಯವಸ್ಥೆ ರೂಪಿಸಿದರೆ, 20ರಿಂದ 25 ದಿನಗಳಲ್ಲಿ ಸಂಪೂರ್ಣ ಪ್ರಕ್ರಿಯೆ ಮುಗಿಸಬಹುದು. ಒಂದು ತಿಂಗಳೊಳಗೆ ಎಲ್ಲ ಸಂದರ್ಶನಗಳನ್ನು ಪೂರ್ಣಗೊಳಿಸಿ ಏಪ್ರಿಲ್ 15ರೊಳಗೆ ಅಂತಿಮ ಫಲಿತಾಂಶ ಪ್ರಕಟಿಸುವುದು ಅಸಾಧ್ಯವಲ್ಲ. ಯುಪಿಎಸ್‌ಸಿ ಪ್ರಿಲಿಮ್ಸ್ ಪರೀಕ್ಷೆ ಮೇ ತಿಂಗಳಲ್ಲಿ ನಡೆಯುವ ಹಿನ್ನೆಲೆಯಲ್ಲಿ, ಅದಕ್ಕೂ ಮುನ್ನ ಕೆಪಿಎಸ್‌ಸಿ ಫಲಿತಾಂಶ ಪ್ರಕಟವಾಗುವುದು ಅನಿವಾರ್ಯ. ಆಯ್ಕೆಯಾಗದ ಅಭ್ಯರ್ಥಿಗಳಿಗೆ ಮುಂದಿನ ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸಲು ಸಮಯ ದೊರಕಬೇಕು; ವಿಳಂಬದಿಂದ ಸಾವಿರಾರು ಪ್ರತಿಭೆಗಳ ಭವಿಷ್ಯಕ್ಕೆ ಹಾನಿಯಾಗಬಾರದು.

ರಾಜಕೀಯ ಹಸ್ತಕ್ಷೇಪವು ಯಾವುದೇ ರೂಪದಲ್ಲೂ ಇರಬಾರದು. ಅಭ್ಯರ್ಥಿಗಳೂ ತಮ್ಮ ನೈತಿಕ ಜವಾಬ್ದಾರಿಯನ್ನು ಅರಿತು, ಪ್ರಭಾವ ಬಳಸಿ ಅಂಕ ಪಡೆಯಲು ಯತ್ನಿಸಬಾರದು.

ಸರ್ಕಾರವು ಕೆಪಿಎಸ್‌ಸಿ ಸದಸ್ಯರ ಚಲನವಲನಗಳ ಮೇಲೆ ಹೆಚ್ಚಿನ ನಿಗಾವಹಿಸಿ, ಮಧ್ಯವರ್ತಿಗಳು ಆಯೋಗದ ಸದಸ್ಯರು ಅಥವಾ ಅಧಿಕಾರಿಗಳ ಸಂಪರ್ಕಕ್ಕೆ ಸಂಪೂರ್ಣ ಪ್ರಕ್ರಿಯೆ ಮುಗಿಯುವವರೆಗೂ ಬಾರದಂತೆ ವಿಶೇಷ ವ್ಯವಸ್ಥೆ ರೂಪಿಸಬೇಕು. 2011ರ ಪರೀಕ್ಷೆಯಲ್ಲಿ ಉಂಟಾದ ಗೊಂದಲದಿಂದ ಫಲಿತಾಂಶ ರದ್ದಾಗಿ, ವರ್ಷಗಳ ವಿಳಂಬ ಉಂಟಾದ ಘಟನೆ ಮತ್ತೆ ಮರುಕಳಿಸದಂತೆ ನೋಡಿಕೊಳ್ಳುವುದು ಎಲ್ಲರ ಸಹಭಾಗಿತ್ವದ ಹೊಣೆ.

ಒಟ್ಟಿನಲ್ಲಿ, ಕೆಪಿಎಸ್‌ಸಿ ನಡೆಸುವ ಸಂದರ್ಶನ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕ, ನ್ಯಾಯಸಮ್ಮತ ಹಾಗೂ ಭ್ರಷ್ಟಾಚಾರರಹಿತ ಆಗಿರಬೇಕು. ಪ್ರತಿಯೊಂದು ಹುದ್ದೆಯೂ ಅರ್ಹತೆ ಮತ್ತು ಮೆರಿಟ್ ಆಧಾರದ ಮೇಲೆ ಮಾತ್ರ ಭರ್ತಿ ಆಗುವಂತೆ ಖಚಿತಪಡಿಸುವುದು ಆಡಳಿತದ ಗೌರವಕ್ಕೆ ಸಂಬಂಧಿಸಿರುವಂತೆಯೇ ಯುವಜನರ ಭವಿಷ್ಯದ ಪ್ರಶ್ನೆಯೂ ಆಗಿದೆ. 'ಯೋಗ್ಯರಿಗೆ ನ್ಯಾಯ, ಪಾರದರ್ಶಕತೆಗೆ ಆದ್ಯತೆ' ಎಂಬ ಧೋರಣೆ ಮಾತಿನಲ್ಲಿ ಮಾತ್ರವಲ್ಲ, ಕಾರ್ಯರೂಪದಲ್ಲೂ ಪ್ರತಿಫಲಿಸಬೇಕಾಗಿದೆ.

ಲೇಖಕ: ಸಂಸ್ಥಾಪಕರು ಮತ್ತು ನಿರ್ದೇಶಕರು, ಇನ್‌ಸೈಟ್ಸ್ ಐಎಎಸ್

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇಂದ್ರ ಸರ್ಕಾರದ ಅಬಕಾರಿ, ಜಿಎಸ್‌ಟಿ ದರ ಏರಿಕೆ ಗೊಂದಲ; ಮಾರುಕಟ್ಟೆ ಮೇಲೆ ನಕಾರಾತ್ಮಕ ಪರಿಣಾಮ

ತಂಬಾಕು ಬೆಳೆಗಾರರ ಬದುಕಿಗೆ ಬೆಂಕಿ

• ಆರ್. ಜಿತೇಂದ್ರ



ಹುಣಸೂರು ತಾಲ್ಲೂಕಿನ ಕಟ್ಟೆಮಳಲವಾಡಿಯಲ್ಲಿರುವ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಬುಧವಾರ ರೈತರೊಬ್ಬರು ತಂಬಾಕು ತಂದಿದ್ದರು ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ವಿಶ್ವ ದರ್ಜೆಯ ತಂಬಾಕು ಬೆಳೆದರೂ ಸಮರ್ಪಕ ಬೆಲೆ ಸಿಗುತ್ತಿಲ್ಲ. ಉತ್ತಮ ದರಕ್ಕೆ ಆಗ್ರಹಿಸಿ ಬೀದಿಗೆ ಇಳಿಯುವುದೂ ತಪ್ಪಿಲ್ಲ. ಈ ವರ್ಷವಂತೂ ಬೆಳೆದ ಉತ್ಪನ್ನವನ್ನು ಕಂಪನಿಗಳು ಖರೀದಿಸುವ ಖಾತ್ರಿಯೂ ಇಲ್ಲ.

ಇದು ರಾಜ್ಯದ ತಂಬಾಕು ಬೆಳೆಗಾರರ ಸದ್ಯದ ಪರಿಸ್ಥಿತಿ. ಈ ವರ್ಷ ಸಂಕ್ರಾಂತಿಯ ಬಳಿಕ ಏಕಾಏಕಿ ತಂಬಾಕು ವಹಿವಾಟು ಬಂದ್ ಆಗಿದ್ದರಿಂದ ಬೆಳೆಗಾರರ ಉಸಿರೇ ನಿಂತಿತ್ತು. ಹದಿನೈದು ದಿನ ಮಾರುಕಟ್ಟೆಗಳು ಬಾಗಿಲು ಮುಚ್ಚಿದ್ದವು. ಸದ್ಯ ಹರಾಜು ಶುರುವಾಗಿದ್ದರೂ ಹಿಂದಿನಷ್ಟು ದರ ಇಲ್ಲ. ಸರ್ಕಾರದ ನಿರ್ಧಾರಗಳು ಹಾಗೂ ಸದ್ಯದ ಜಾಗತಿಕ ತಲ್ಲಣಗಳು ಮಾರುಕಟ್ಟೆ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿವೆ. ಇನ್ನೂ 3.6 ಕೋಟಿ ಕೆ.ಜಿ.ಗಳಷ್ಟು ಉತ್ಪನ್ನ ಹರಾಜಾಗಬೇಕಿದೆ.

ತಂಬಾಕು ಬೆಳೆಯುವ ಪ್ರಮುಖ ರಾಜ್ಯಗಳ ಪೈಕಿ ಕರ್ನಾಟಕವೂ ಒಂದು. ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ ತಾಲ್ಲೂಕುಗಳು ಗುಣಮಟ್ಟದ ಹೊಗೆಸೊಪ್ಪು ಉತ್ಪಾದನೆಗೆ ಹೆಸರುವಾಸಿ. ಮೈಸೂರು–ಹಾಸನ ಜಿಲ್ಲೆಯಲ್ಲಿ ಹೆಚ್ಚು ಉತ್ಪಾದನೆಯಾಗುತ್ತಿದ್ದು, ಚಾಮರಾಜನಗರ, ಮಡಿಕೇರಿ, ಶಿವಮೊಗ್ಗ ಜಿಲ್ಲೆಗಳ ಅಲ್ಲಲ್ಲಿ ರೈತರು ಈ ಬೆಳೆ ಬೆಳೆಯುತ್ತಿದ್ದಾರೆ. ಕರ್ನಾಟಕದಲ್ಲಿ ವರ್ಜಿನಿಯಾ (ಎಫ್‌ಸಿವಿ) ಮಾದರಿಯ ತಂಬಾಕನ್ನು ಬೆಳೆಯಲಾಗುತ್ತಿದೆ.

ಬಿಕ್ಕಟ್ಟು ಶುರುವಾಗಿದ್ದು ಎಲ್ಲಿಂದ?: 'ಕೇಂದ್ರ ಸರ್ಕಾರ ತಂಬಾಕು ಉತ್ಪನ್ನಗಳ ಮೇಲೆ ಶೇ 18ರಷ್ಟು ಹೆಚ್ಚುವರಿ ಅಬಕಾರಿ ಸುಂಕ ಹೇರಲು ಹೊರಟದ್ದೇ ಸದ್ಯದ ಮಾರುಕಟ್ಟೆ ಗೊಂದಲಗಳಿಗೆ ಕಾರಣ' ಎನ್ನುತ್ತಾರೆ ಉದ್ದಿಮೆ ವಲಯದ ಪ್ರತಿನಿಧಿಗಳು.

ಕಳೆದ ವರ್ಷ ಡಿ. 31ರಂದು ಗೆಜೆಟ್ ಅಧಿಸೂಚನೆ ಹೊರಡಿಸಿದ್ದ ಕೇಂದ್ರವು 2026ರ ಫೆಬ್ರುವರಿ 1ರಿಂದ ಕಚ್ಚಾ ತಂಬಾಕಿನ ಮೇಲೆ ಶೇ 18ರಷ್ಟು ಸುಂಕ ವಿಧಿಸುವುದಾಗಿ ಪ್ರಕಟಿಸಿತ್ತು. ಇದು ವರ್ತಕ ಸಮುದಾಯವನ್ನು ಕೆರಳಿಸಿದ್ದು, ಜ.24ರಿಂದ ಫೆ. 5ರವರೆಗೆ ಹರಾಜು ಮಾರುಕಟ್ಟೆಗಳು ಸಂಪೂರ್ಣ ಬಂದ್ ಆಗಿದ್ದವು.

2025ರ ಅ.8ರಂದು ರಾಜ್ಯದ ತಂಬಾಕು ಮಾರುಕಟ್ಟೆಗಳು ಬಾಗಿಲು ತೆರೆದಿದ್ದು, 2026ರ ಜ. 10ರವರೆಗೆ ಒಟ್ಟು 3.88 ಕೋಟಿ ಕೆ.ಜಿ.ಯಷ್ಟು ತಂಬಾಕು ಹರಾಜಾಗಿತ್ತು. ರೈತರಿಗೆ ಪ್ರತಿ ಕೆ.ಜಿ.ಗೆ ಸರಾಸರಿ ₹289 ದರ ಸಿಕ್ಕಿತ್ತು. ತಂಬಾಕು ಕ್ಷೇತ್ರದ ದೈತ್ಯ ಕಂಪನಿ ಐಟಿಸಿ ಒಟ್ಟು ಉತ್ಪನ್ನದಲ್ಲಿ ಶೇ 49.92 ರಷ್ಟು ಖರೀದಿ ನಡೆಸಿತ್ತು. ಆದರೆ ಅಬಕಾರಿ ಸುಂಕದ ಕಾರಣಕ್ಕೆ ಐಟಿಸಿ ತನ್ನ ಖರೀದಿ ಪ್ರಮಾಣ ತಗ್ಗಿಸಿತು. ಫೆಬ್ರುವರಿಯಲ್ಲಿ ಹರಾಜಾದ ಒಟ್ಟು ಉತ್ಪನ್ನದಲ್ಲಿ ಈ ಕಂಪನಿಯು ಶೇ 26ರಷ್ಟು ಮಾತ್ರ ಖರೀದಿ ನಡೆಸಿತು. ಈ ಎಲ್ಲ ಗೊಂದಲಗಳಿಂದಾಗಿ ದರವು ಪ್ರತಿ ಕೆ.ಜಿ.ಗೆ ₹30ರಿಂದ ₹50ರವರೆಗೆ ಕುಸಿತ ಕಂಡಿತು.

> ಗುಣಮಟ್ಟ ಅಧರಿಸಿ ತಂಬಾಕನ್ನು ವಿಂಗಡಿಸಿದ ಬಳಿಕವೇ ಹರಾಜು ನಡೆಸಲಾಗುತ್ತದೆ. ರಾಜ್ಯದಲ್ಲಿ ಈ ವರ್ಷ ಉತ್ಪಾದನೆಯಾಗಿರುವ 8.79 ಕೋಟಿ ಕೆ.ಜಿ. ಉತ್ಪನ್ನದ ಪೈಕಿ ಶೇ 32 ರಷ್ಟು, ಅಂದರೆ 2.85 ಕೋಟಿ ಕೆ.ಜಿ.ಯಷ್ಟು ತಂಬಾಕು ಮೊದಲ ದರ್ಜೆಯದ್ದು. ಶೇ 45ರಷ್ಟು ತಂಬಾಕು (3.94 ಕೋಟಿ ಕೆ.ಜಿ) ದ್ವಿತೀಯ ದರ್ಜೆಯದ್ದು. ಉಳಿದ 1.99 ಕೋಟಿ ತಂಬಾಕು ಕಡಿಮೆ ದರ್ಜೆಯದ್ದು ಎಂದು ಅಂದಾಜಿಸಲಾಗಿದೆ.

ಫೆ. 1ರಂದು ಸರ್ಕಾರ ಶೇ 18ರಷ್ಟು ಹೆಚ್ಚುವರಿ ಸುಂಕದ ಆದೇಶವನ್ನು ಹಿಂಪಡೆದಿದ್ದರೂ ತಂಬಾಕು ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರವನ್ನು ಶೇ 28ರಿಂದ ಶೇ 40ಕ್ಕೆ ಏರಿಸಿದೆ. ಹೀಗಾಗಿ ಪ್ರಮುಖ ಕಂಪನಿಗಳು ಕಾದು ನೋಡುವ ತಂತ್ರ ಅನುಸರಿಸುತ್ತಿವೆ.

'ಜಿಎಸ್‌ಟಿ ಏರಿಸಿದ ಕಾರಣಕ್ಕೆ ಪ್ರತಿ ಸಿಗರೇಟಿನ ಬೆಲೆ ₹6–₹7 ರಷ್ಟು ಹೆಚ್ಚಿದೆ. ಹೀಗಾಗಿ ಬೇಡಿಕೆಯು ಶೇ 20ರಷ್ಟು ಕುಸಿದಿದೆ. ಸದ್ಯ ಸಿಗರೇಟ್ ಉತ್ಪಾದನೆ ಕಡಿಮೆ ಮಾಡಿದ್ದು, ತಂಬಾಕು ಖರೀದಿಯನ್ನೂ ಕಡಿಮೆ ಮಾಡಿದ್ದೇವೆ' ಎಂದು ಕಂಪನಿಯೊಂದರ ಅಧಿಕಾರಿ ಹೇಳುತ್ತಾರೆ.



66,987 ಹೆಕ್ಟೇರ್ ತಂಬಾಕು ನಾಟಿಯಾದ ಪ್ರದೇಶ

45,000 ನೋಂದಾಯಿತ ಬೆಳೆಗಾರರು

58,000 ಒಟ್ಟು ಬ್ಯಾರನ್‌ಗಳ ಸಂಖ್ಯೆ

10 ಕೋಟಿ ಕೆ.ಜಿ 2025–26ನೇ ಸಾಲಿನ ವಾರ್ಷಿಕ ಉತ್ಪಾದನೆ ಗುರಿ

8.79 ಕೋಟಿ ಕೆ.ಜಿ ಈ ವರ್ಷ ಉತ್ಪಾದನೆಯಾದ ತಂಬಾಕು



ಜಾಗತಿಕ ನಂಟು: ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ಉತ್ಪಾದನೆಯಾಗುವ ತಂಬಾಕಿನ ಪೈಕಿ ಶೇ 30ರಷ್ಟು ಉತ್ಪನ್ನ ಸ್ಥಳೀಯವಾಗಿ ಬಳಕೆಯಾದರೆ, ಶೇ 70ರಷ್ಟು ರಫ್ತಾಗುತ್ತಿದೆ.

'ಜಾಗತಿಕವಾಗಿ ಬ್ರೆಜಿಲ್, ಜಿಂಬಾಬ್ವೆ ತಂಬಾಕು ಹೆಚ್ಚು ಉತ್ಪಾದಿಸುತ್ತಿವೆ. ಈ ಎರಡೂ ದೇಶಗಳ ಮಾರುಕಟ್ಟೆ ಮುಕ್ತಾಯದ ಬಳಿಕ ಕರ್ನಾಟಕದಲ್ಲಿ ತಂಬಾಕು ಹರಾಜು ಆರಂಭವಾಗುತ್ತದೆ. ಹೀಗಾಗಿ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಕೊರತೆ ತುಂಬುತ್ತದೆ. ಇದೇ ಕಾರಣಕ್ಕೆ ರಾಜ್ಯದ ತಂಬಾಕಿಗೆ ಅನೇಕ ಬಾರಿ ಉತ್ತಮ ಬೆಲೆ ಸಿಕ್ಕಿದೆ. ಆದರೆ, ಈ ಬಾರಿ ಈ ದೇಶಗಳಲ್ಲಿ ಉತ್ಪಾದನೆ ಹೆಚ್ಚಿದ್ದು, ಕರ್ನಾಟಕದ ತಂಬಾಕಿನ ದರದ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಿದೆ' ಎನ್ನುತ್ತಾರೆ ತಂಬಾಕು ಮಂಡಳಿಯ ಕಾರ್ಯನಿರ್ವಾಹಕ ನಿರ್ದೇಶಕಿ ಬಿ.ವಿಶ್ವಶ್ರೀ.

'ವಿವಿಧ ದೇಶಗಳ ಯುದ್ಧದ ಕಾರಣಕ್ಕೆ ತಂಬಾಕಿನ ರಫ್ತು ಕೂಡ ಕಡಿಮೆಯಾಗುತ್ತಿದೆ. ಸದ್ಯ ಇಲ್ಲಿಂದ ಕಂಟೇನರ್‌ಗಳನ್ನು ಕಳುಹಿಸದಂತೆ ವಿದೇಶಗಳ ವರ್ತಕರು ಮನವಿ ಮಾಡುತ್ತಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಬೇಡಿಕೆ ಹಾಗೂ ದರ ಇನ್ನಷ್ಟು ಕುಸಿಯಬಹುದು' ಎಂಬುದು ಅಧಿಕಾರಿಗಳ ಆತಂಕ.

ತಾರತಮ್ಯ ಧೋರಣೆಯ ಆರೋಪ: 'ರಾಜ್ಯದಲ್ಲಿ ಈ ಸಾಲಿಗೆ 10 ಕೋಟಿ ಕೆ.ಜಿ.ಗಳಷ್ಟು ತಂಬಾಕು ಬೆಳೆಯುವ ಗುರಿ ನೀಡಿದ್ದರೂ 8.8 ಕೋಟಿ ಕೆ.ಜಿ.ಯಷ್ಟು ಮಾತ್ರ ಉತ್ಪಾದನೆ ಸಾಧ್ಯವಾಗಿದೆ. ಆದರೂ ಕಂಪನಿಗಳು ಉತ್ತಮ ಬೆಲೆಗೆ ಖರೀದಿಸಲು ಹಿಂದೇಟು ಹಾಕುತ್ತಿವೆ. ಆಂಧ್ರಪ್ರದೇಶದಲ್ಲಿ ವಾರ್ಷಿಕ 16 ಕೋಟಿ ಕೆ.ಜಿ.ಯಷ್ಟು ಉತ್ಪನ್ನ ಬೆಳೆಯುವ ಮಿತಿ ಇದ್ದರೂ 24 ಕೋಟಿ ಕೆ.ಜಿ.ಯಷ್ಟು ಉತ್ಪಾದನೆಯಾಗಿದೆ. ಇಲ್ಲಿ ಕಡಿಮೆ ಬೆಳೆದರೂ ಬೆಲೆಯಿಲ್ಲ. ಅಲ್ಲಿ ಗುರಿಗಿಂತ ಹೆಚ್ಚು ಉತ್ಪಾದನೆ ಮಾಡಿದರೂ ಉತ್ತಮ ಬೆಲೆ' ಎಂಬುದು ರೈತರ ಆರೋಪ.


ಸಾಗುವಳಿ ವೆಚ್ಚ ಹೆಚ್ಚಳ: ತಂಬಾಕು ಮಂಡಳಿಯು ನಡೆಸಿದ ಅಧ್ಯಯನದಂತೆ ಸದ್ಯ ಹೊಗೆಸೊಪ್ಪು ಬೆಳೆಯಲು ಪ್ರತಿ ಹೆಕ್ಟೇರ್‌ಗೆ ಅಂದಾಜು ಸರಾಸರಿ ₹2.79 ಲಕ್ಷ ವೆಚ್ಚವಾಗುತ್ತಿದ್ದು, 1,500 ಕೆ.ಜಿ.ಯಷ್ಟು ಇಳುವರಿ ಸಿಗುತ್ತಿದೆ. ಪ್ರತಿ ಕೆ.ಜಿ.ಗೆ ರೈತರಿಗೆ ಸರಾಸರಿ ₹280ರವರೆಗೆ ಬೆಲೆ ಸಿಗುತ್ತಿದೆ.

'ಸಾಗುವಳಿ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. 2022–23ರಲ್ಲಿ ಪ್ರತಿ ಕೆ.ಜಿ. ತಂಬಾಕು ಬೆಳೆಯಲು ₹139 ಖರ್ಚಾಗುತ್ತಿದ್ದರೆ, 2024–25ನೇ ಸಾಲಿನಲ್ಲಿ ಇದು ₹186ಕ್ಕೆ ಹೆಚ್ಚಿದೆ. 2022ರಲ್ಲಿ ರೈತರಿಗೆ ಹೆಕ್ಟೇರ್‌ಗೆ ₹1.34 ಲಕ್ಷ ನಿವ್ವಳ ಲಾಭ ಸಿಗುತ್ತಿದ್ದರೆ, ಪ್ರಸ್ತುತ ಅದು ₹1.06 ಲಕ್ಷಕ್ಕೆ ಇಳಿದಿದೆ. ವರ್ಷದಿಂದ ವರ್ಷಕ್ಕೆ ರೈತರ ಆದಾಯ ಮಾತ್ರ ಕುಸಿಯುತ್ತಲೇ ಇದೆ' ಎನ್ನುತ್ತವೆ ಮಂಡಳಿಯ ಅಂಕಿಅಂಶಗಳು.



ಮುಕ್ತ ಖರೀದಿಗೆ ತಂಬಾಕು ಲಭ್ಯ ಇದ್ದರೆ ರೈತರಿಗೆ ಸ್ಪರ್ಧಾತ್ಮಕ ದರ ಸಿಗಲಿದೆ ಎನ್ನುವುದು ಎಲ್ಲರ ಅಭಿಪ್ರಾಯ. ಬೆಳೆಗಾರರ ಸಮಸ್ಯೆಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ
ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
ಮೈಸೂರು–ಕೊಡಗು ಸಂಸದ

ರಾಜ್ಯದಲ್ಲಿ ತಂಬಾಕು ಉತ್ಪಾದನೆ
(ಕೋಟಿ ಕೆ.ಜಿ.ಗಳಲ್ಲಿ)
(ಆವರಣದಲ್ಲಿರುವುದು ಕೆ.ಜಿ.ಗೆ ಸರಾಸರಿ ದರ)



'ಏಕಸ್ವಾಮ್ಯ ತಪ್ಪಲಿ'

ರಾಜ್ಯದಲ್ಲಿ ಸದ್ಯ ಐಟಿಸಿ, ಜಿಪಿಐ, ಎಐಐ, ಪಿಎಸ್‌ಎಸ್‌ಎಚ್, ಪಿಟಿಪಿ, ಡೆಕ್ಕನ್ ಸೇರಿ 8 ಬೃಹತ್ ಕಂಪನಿಗಳು ಹಾಗೂ 51 ಸಣ್ಣ ಕಂಪನಿಗಳು ಆನ್‌ಲೈನ್ ಹರಾಜಿನ ಮೂಲಕ ತಂಬಾಕು ಖರೀದಿಸುತ್ತಿವೆ. ಇದರಲ್ಲಿ ಐಟಿಸಿ ಸಿಂಹಪಾಲು ಹೊಂದಿದ್ದು, ಒಟ್ಟು ಉತ್ಪನ್ನದ ಅರ್ಧದಷ್ಟನ್ನು ಇದೊಂದೇ ಖರೀದಿಸುತ್ತಿದೆ.

'ಬೃಹತ್ ಕಂಪನಿಗಳು ಖರೀದಿಯಲ್ಲಿ ಏಕಸ್ವಾಮ್ಯ ಸಾಧಿಸುತ್ತಿದ್ದು, ಬೆಲೆಯನ್ನು ನಿಯಂತ್ರಿಸುತ್ತಿವೆ. ಅವು ಏಕಾಏಕಿ ಹಿಂದೆ ಸರಿದ ಸಂದರ್ಭ ಬೆಲೆ ಕುಸಿದು ರೈತರಿಗೆ ನಷ್ಟವಾಗುತ್ತದೆ. ಹೀಗಾಗಿ ಏಕಸ್ವಾಮ್ಯ ತಪ್ಪಿಸಲು ವಿದೇಶಿ ಕಂಪನಿಗಳಿಗೂ ಹರಾಜಿನಲ್ಲಿ ಪಾಲ್ಗೊಳ್ಳಲು ಮಂಡಳಿಯು ಮುಕ್ತ ಅವಕಾಶ ನೀಡಬೇಕು' ಎಂದು ಒತ್ತಾಯಿಸುತ್ತಾರೆ ಪಿರಿಯಾಪಟ್ಟಣ ಶಾಸಕರೂ ಆದ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್.

'ತಂಬಾಕು ಮಂಡಳಿಯ ಅಂಕಿಸಂಖ್ಯೆಗೂ ವಾಸ್ತವ ವೆಚ್ಚಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಕಂಪನಿಯವರು ಕೊಡುವ ಬೀಜಗಳನ್ನು ಮಡಿ ಮಾಡಿ, ಬೆಳೆದ ಪೈರುಗಳನ್ನು ಹೊಲದಲ್ಲಿ ನಾಟಿ ಮಾಡುವುದರಿಂದ, ಹಣ್ಣಾದ ಎಲೆಗಳನ್ನು ಕೊಯ್ದು, ಬೇಯಿಸಿ, ಒಣಗಿಸಿ, ವಿಂಗಡಿಸಿ ಮಾರುಕಟ್ಟೆಗೆ ತಲುಪಿಸುವವರೆಗೆ ಕೆ.ಜಿ.ಗೆ ಕಡಿಮೆ ಎಂದರೂ ₹270–280 ಖರ್ಚಾಗುತ್ತಿದೆ' ಎನ್ನುತ್ತಾರೆ ರೈತ ಮುಖಂಡರು.

'ತಂಬಾಕಿಗೆ ಸ್ಪರ್ಧಾತ್ಮಕ ದರ ನೀಡಬೇಕು. ಬೆಳೆಗಾರರಿಗೆ ನಿಗದಿತ ಪರಿಹಾರ ಘೋಷಿಸಿದರೆ, ನಾವು ಬೇರೆ ಉತ್ಪನ್ನ ಬೆಳೆದುಕೊಳ್ಳುತ್ತೇವೆ' ಎಂಬುದು ರೈತರ ನಿರಾಸೆಯ ನುಡಿ.

ರಾಷ್ಟ್ರೀಯ

'ವಾಟ್ಸ್‌ಆ್ಯಪ್ ಚಾಟ್ ಪರಿಗಣಿಸಿ ವಿಚ್ಛೇದನ ಸಾಧ್ಯವಿಲ್ಲ'



ಮುಂಬೈ (ಪಿಟಿಐ): ವಾಟ್ಸ್‌ಆ್ಯಪ್ ಚಾಟ್‌ಗಳನ್ನೇ ಆಧಾರವಾಗಿಟ್ಟುಕೊಂಡು ಕ್ರೌರ್ಯ ಎಸಗಲಾಗಿದೆ ಎಂಬ ಆರೋಪಗಳು ಕೇಳಿಬಂದಾಗ, ತಮ್ಮ ಮೇಲಿನ ಆಪಾದನೆಗಳನ್ನು ನಿರಾಕರಿಸಲು ಪತಿ ಅಥವಾ ಪತ್ನಿಗೆ ಅವಕಾಶ ನೀಡಬೇಕು. ಕೇವಲ ಚಾಟ್‌ಗಳನ್ನೇ ಆಧಾರವಾಗಿಟ್ಟುಕೊಂಡು ವಿಚ್ಛೇದನಕ್ಕೆ ಅನುಮತಿ ನೀಡಲು ಸಾಧ್ಯ ಇಲ್ಲ ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

'ಪತ್ನಿ ನನ್ನ ಮೇಲೆ ಕ್ರೌರ್ಯ ಎಸಗುತ್ತಿರುವ ಕಾರಣ ಆಕೆಯಿಂದ ವಿಚ್ಛೇದನ ನೀಡಬೇಕು' ಎಂದು ಕೋರಿ ವ್ಯಕ್ತಿ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿ, ನಾಸಿಕ್ ಜಿಲ್ಲಾ ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಆದೇಶ ರದ್ದುಪಡಿಸಿದ ವೇಳೆ ಹೈಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಭಾರತಿ ಡಾಂಗ್ರೆ ಹಾಗೂ ಮಂಜೂಷಾ ದೇಶಪಾಂಡೆ ಅವರು ಇದ್ದ ಪೀಠವು ಕಳೆದ ವಾರ ಈ ಕುರಿತು ಆದೇಶ ಹೊರಡಿಸಿದೆ.

ಪ್ರಕರಣವೇನು?: 'ನಾಸಿಕ್‌ನಿಂದ ಪುಣೆಗೆ ಸ್ಥಳಾಂತರಗೊಂಡು ಪ್ರತ್ಯೇಕವಾಗಿ ವಾಸ ಮಾಡಬೇಕು ಎಂಬುದು ಪತ್ನಿಯ ಬೇಡಿಕೆಯಾಗಿತ್ತು. ನನ್ನ ತಾಯಿ ಹಾಗೂ ಸಹೋದರಿ ವಿರುದ್ಧ ಪತ್ನಿ ಅವಹೇಳನಕಾರಿಯಾಗಿ ಮಾತನಾಡಿದ್ದಾಳೆ' ಎಂದು ವ್ಯಕ್ತಿಯೊಬ್ಬರು ಆರೋಪಿಸಿದ್ದರು.

ಈ ಆರೋಪಗಳಿಗೆ ಪುರಾವೆಯಾಗಿ ಪತ್ನಿ ಜೊತೆಗೆ ವಾಟ್ಸ್‌ಆ್ಯಪ್ ಮೂಲಕ ನಡೆದಿದ್ದ ಚಾಟ್‌ಗಳನ್ನು ಕೌಟುಂಬಿಕ ನ್ಯಾಯಾಲಯಕ್ಕೆ ಸಲ್ಲಿಸಿದ್ದ ವ್ಯಕ್ತಿ, ಈ ಚಾಟ್‌ಗಳನ್ನೇ ಆಧಾರವಾಗಿ ಪರಿಗಣಿಸಿ ವಿಚ್ಛೇದನ ನೀಡುವಂತೆ ಕೋರಿದ್ದರು.

ವಾಟ್ಸ್ ಆ್ಯಪ್ ಚಾಟ್‌ಗಳನ್ನು ಪರಿಗಣಿಸಿದ್ದ ನಾಸಿಕ್ ಜಿಲ್ಲಾ ಕೌಟುಂಬಿಕ ನ್ಯಾಯಾಲಯವು, 'ಪತ್ನಿ ತನ್ನ ಪತಿ ಮೇಲೆ ಒತ್ತಡ ಹೇರುವ ತಂತ್ರಗಳನ್ನು ಬಳಸಿದ್ದು, ಭಾವನಾತ್ಮಕವಾಗಿ ಬ್ಲ್ಯಾಕ್‌ಮೇಲ್ ಮಾಡಿದ್ದಾರೆ' ಎಂದು ಅಭಿಪ್ರಾಯಪಟ್ಟಿತ್ತು.

'ವಾಟ್ಸ್‌ಆ್ಯಪ್ ಚಾಟ್‌ನಲ್ಲಿ ಆಕೆ ಅನುಚಿತ ಭಾಷೆ ಬಳಸಿದ್ದು, ಪತಿ ವಿರುದ್ಧ ಕ್ರೌರ್ಯ ಎಸಗಿದ್ದಾರೆ. ಹೀಗಾಗಿ, ವಿಚ್ಛೇದನ ಪಡೆಯುವುದಕ್ಕೆ ಪತಿ ಅರ್ಹರಾಗಿದ್ದಾರೆ' ಎಂದು ಕಳೆದ ವರ್ಷ ಮೇನಲ್ಲಿ ಕೌಟುಂಬಿಕ ನ್ಯಾಯಾಲಯ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಮಹಿಳೆ, 'ನನ್ನ ಮೇಲಿನ ಆರೋಪಗಳನ್ನು ತಳ್ಳಿಹಾಕುವುದಕ್ಕೆ ಅಥವಾ ನನ್ನ ವಾದವನ್ನು ಮಂಡಿಸುವುದಕ್ಕೆ ಕೌಟುಂಬಿಕ ನ್ಯಾಯಾಲಯ ಅವಕಾಶವನ್ನೇ ನೀಡದೇ ಏಕಪಕ್ಷೀಯವಾಗಿ ಆದೇಶಿಸಿದೆ' ಎಂದು ವಾದಿಸಿದ್ದರು.

ವಿಚಾರಣೆ ನಡೆಸಿದ ಪೀಠವು, 'ಪತಿ ಮಾಡಿದ್ದ ಆಪಾದನೆಗಳನ್ನು (ವಾಟ್ಸ್‌ಆ್ಯಪ್ ಚಾಟ್‌ಗಳು) ಸಾಕ್ಷ್ಯ ಸಮೇತ ನಿರಾಕರಿಸುವುದಕ್ಕೆ ಪತ್ನಿಗೆ ಕೌಟುಂಬಿಕ ನ್ಯಾಯಾಲಯ ಅವಕಾಶ ನೀಡಿಲ್ಲ' ಎಂದು ಹೇಳಿದೆ.

'ವಾಟ್ಸ್‌ಆ್ಯಪ್ ಚಾಟ್‌ಗಳ ಆಧಾರದಲ್ಲಿ ವಿಚ್ಛೇದನ ನೀಡಲು ಸಾಧ್ಯ ಇಲ್ಲ' ಎಂದು ಹೇಳಿರುವ ಪೀಠ, 'ತನ್ನ ವಾದ/ಸಾಕ್ಷ್ಯಗಳನ್ನು ಮಂಡಿಸಲು ಮಹಿಳೆಗೆ ಅವಕಾಶ ನೀಡಬೇಕು' ಎಂದು ಸೂಚಿಸಿ, ಪ್ರಕರಣವನ್ನು ಕೌಟುಂಬಿಕ ನ್ಯಾಯಾಲಯಕ್ಕೆ ಶಿಫಾರಸು ಮಾಡಿದೆ.

ಪ್ರಕರಣ ಕುರಿತು ಕೌಟುಂಬಿಕ ನ್ಯಾಯಾಲಯ ಹೊಸದಾಗಿ ವಿಚಾರಣೆ ಆರಂಭಿಸಿ, ತನ್ನ ನಿರ್ಧಾರ ಪ್ರಕಟಿಸಲಿದೆ. ಇದೇ ವೇಳೆ, ಮಧ್ಯಸ್ಥಿಕೆ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಲು ದಂಪತಿ ಪ್ರಯತ್ನಿಸಬೇಕು ಎಂದು ಪೀಠ ಸಲಹೆ ನೀಡಿದೆ.

ಮಲಯಾಳ ಏಕೈಕ ಅಧಿಕೃತ ಭಾಷೆ ಮಸೂದೆಗೆ ರಾಜ್ಯಪಾಲ ಅಂಕಿತ



ಆರ್ಲೇಕರ್

ತಿರುವನಂತಪುರ (ಪಿಟಿಐ): ಮಲಯಾಳಕ್ಕೆ ಕೇರಳದ ಏಕೈಕ ಅಧಿಕೃತ ಭಾಷೆ ಸ್ಥಾನಮಾನ ಕಲ್ಪಿಸುವ ಮಸೂದೆಗೆ ಅಲ್ಲಿನ ರಾಜ್ಯಪಾಲ ರಾಜೇಂದ್ರ ವಿ.ಆರ್ಲೇಕರ್ ಬುಧವಾರ ಅಂಕಿತ ಹಾಕಿದ್ದಾರೆ.

'ಮಲಯಾಳ ಭಾಷಾ ಮಸೂದೆ 2025'ಅನ್ನು ಕಳೆದ ವರ್ಷ ಅಕ್ಟೋಬರ್‌ನಲ್ಲಿ ವಿಧಾನಸಭೆ ಅಂಗೀಕರಿಸಿತ್ತು' ಎಂದು ಲೋಕಭವನ ಮೂಲಗಳು ಹೇಳಿವೆ.

ರಾಜ್ಯದ ಎಲ್ಲ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ, 10ನೇ ತರಗತಿವರೆಗೆ ಮಲಯಾಳವನ್ನು ಪ್ರಥಮ ಭಾಷೆಯಾಗಿ ಕಲಿಸುವುದು ಕಡ್ಡಾಯ ಎಂಬ ಅಂಶವನ್ನು ಈ ಮಸೂದೆ ಒಳಗೊಂಡಿದೆ.


ಈ ಮಸೂದೆಗೆ ಕರ್ನಾಟಕದಿಂದ ವಿರೋಧ ವ್ಯಕ್ತವಾಗಿತ್ತು. ಈ ಮಸೂದೆ ಕಾಯ್ದೆಯಾದ ಬಳಿಕ ಗಡಿಭಾಗದ ಭಾಷಾ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಕಡ್ಡಾಯವಾಗಿ ಮಲಯಾಳ ಕಲಿಯಬೇಕಾಗುತ್ತದೆ ಎಂದು ಕಳಕಳ ವ್ಯಕ್ತಪಡಿಸಿತ್ತು.

'ಕನ್ನಡ ಮತ್ತು ತಮಿಳು ಮಾತನಾಡುವವರ ಹಕ್ಕುಗಳನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ ಅವಕಾಶಗಳನ್ನು ಈ ಮಸೂದೆ ಒಳಗೊಂಡಿದೆ' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆಗ ಹೇಳಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**


❌ **ಸೈನಿಕನೊಬ್ಬ** ಯುದ್ಧಭೂಮಿಯಲ್ಲಿ, ಶಿಥಿಲ ಅವಶೇಷಗಳ ನಡುವೆ ಒಡೆದ ಮೊಬೈಲ್ ಅನ್ನು ತೋರಿಸುತ್ತಾ ಕಣ್ಣೀರು ಹಾಕುತ್ತಿರುವ ವಿಡಿಯೊ ಅನ್ನು @mohdsoyabex ಎಂಬವರು ಹಂಚಿಕೊಂಡಿದ್ದು, ಅದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಕಣ್ಣೀರು ಹಾಕುತ್ತಿರುವವನು ಅಮೆರಿಕದ ಸೈನಿಕನಾಗಿದ್ದು, ಇರಾನ್‌ನ ದಾಳಿಯನ್ನು ನೆನೆಸಿಕೊಂಡು ಅಳುತ್ತಿದ್ದಾನೆ; ಇಸ್ಲಾಮಾಬಾದ್‌ನಿಂದ ಬಾಗ್ದಾದ್‌ವರೆಗೆ ಅಮೆರಿಕದ ರಾಜತಾಂತ್ರಿಕ ಕಚೇರಿಗಳಿಗೆ ಬೆಂಕಿ ಹಚ್ಚಲಾಗಿದೆ. ಇರಾನ್ ತನ್ನ ದಾಳಿಯನ್ನು ಮುಂದುವರಿಸುತ್ತಿದೆ' ಎಂದು ವಿಡಿಯೊ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



✅ **ವಿಡಿಯೊದ** ಕೀಫ್ರೇಮ್ ಅನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಹಲವರು ಇದೇ ವಿಡಿಯೊ ಹಂಚಿಕೊಂಡಿರುವುದು ಕಂಡಿತು. ಇಂಥ ಘಟನೆ ನಡೆದಿರಬಹುದೇ ಎನ್ನುವ ಬಗ್ಗೆ ತಿಳಿಯಲು ನಿರ್ದಿಷ್ಟ ಪದದ ಮೂಲಕ ಹುಡುಕಾಟ ನಡೆಸಿದಾಗ, ವಿಡಿಯೊವನ್ನು ಸಮರ್ಥಿಸುವ ಯಾವುದೇ ವರದಿ ಲಭ್ಯವಾಗಲಿಲ್ಲ. ವಿಡಿಯೊ ಅನ್ನು ಸೂಕ್ಷ್ಮವಾಗಿ ನೋಡಿದಾಗ, ಅದರಲ್ಲಿ ಕೆಲವು ವ್ಯತ್ಯಾಸಗಳು ಇರುವುದು ಕಂಡಿತು. ಸೈನಿಕನ ಕಣ್ಣೀರು ಅಸಹಜವಾಗಿದ್ದರೆ, ಆತನ ಹಿಂದೆ ಇರುವವರ ಮುಖಗಳು ವಿರೂಪಗೊಂಡಂತೆ ಕಂಡವು. ಡೀಪ್‌ಫೇಕ್–ಒ–ಮೀಟರ್ ಎನ್ನುವ ಎಐ ಪತ್ತೆ ಸಾಧನದ ಮೂಲಕ ವಿಡಿಯೊ ಅನ್ನು ಪರೀಕ್ಷಿಸಿದಾಗ, ಅದು ಎಐನಿಂದ ಸೃಷ್ಟಿಸಲಾದ ವಿಡಿಯೊ ಎನ್ನುವುದು ಖಚಿತವಾಯಿತು. ಎಐ ನಿರ್ಮಿತ ವಿಡಿಯೊ ಅನ್ನು ಹಂಚಿಕೊಳ್ಳುವ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸಾವು ನಮ್ಮಿಂದ ಏನನ್ನೂ ಕಸಿದುಕೊಳ್ಳುವುದಿಲ್ಲ

ನುಡಿ ಬೆಳಗು



ಪಿ.ಚಂದ್ರಿಕಾ

ಸಾಕ್ರಟೀಸ್‌ಗೆ ವಿಷಪ್ರಾಶನವಾಗಿತ್ತು. ಅವನ ಸುತ್ತ ನೆರೆದಿದ್ದ ಶಿಷ್ಯ ಬಳಗದ ಮನದಲ್ಲಿ ದುಗಡವೇ ದುಗುಡ. ಸಾಕ್ರಟೀಸ್ ಮಾತ್ರ ಸಂಕಟದ ಮಧ್ಯೆಯೂ ನಗುತ್ತಿದ್ದ. ಪರೀಕ್ಷಿಸಿದ ವೈದ್ಯ ಹೇಳಿದ: 'ವಿಷದ ಪ್ರಮಾಣ ಜಾಸ್ತಿ ಇದೆ. ಇನ್ನು ಕೆಲವೇ ದಿನಗಳಲ್ಲಿ ಸಾವು ಸಂಭವಿಸಲಿದೆ'. ಗುರುವಿನ ಮರಣವನ್ನು ನೆನೆದು ಶಿಷ್ಯರೆಲ್ಲರೂ ಅಳತೊಡಗಿದರು. ಸಾಕ್ರಟೀಸ್ ಕೇಳಿದ: 'ಯಾಕೆ ಅಳುತ್ತಿದ್ದೀರಿ?'. ಇದೆಂಥ ಅಪದ್ದ ಪ್ರಶ್ನೆ, 'ನೀವು ನಮ್ಮ ಗುರುಗಳು. ನಿಮ್ಮಿಂದ ನಾವು ಕಲಿಯಬೇಕಿರುವುದು ಸಾಕಷ್ಟಿದೆ. ನಿಮ್ಮ ಮಾರ್ಗದರ್ಶನವಿಲ್ಲದೆ ನಮ್ಮ ಬದುಕು ಏನಾಗಬಹುದು ಎನ್ನುವ ವಿಷಾದ ನಮ್ಮನ್ನು ಕಾಡುತ್ತಿದೆ' ಎಂದರು ಶಿಷ್ಯರು. ಸಾಕ್ರಟೀಸನಿಗೆ ಆಶ್ಚರ್ಯ; 'ಇನ್ನೂ ನನ್ನ ಬಳಿ ಕಲಿಯುವುದು ಬಾಕಿ ಇದೆಯೇ? ನಾನು ಮಾತಾಡುತ್ತೇನೆ ಎಂದಾಗ ನೀವು ಯಾರೂ ನನ್ನ ಸಮೀಪಕ್ಕೂ ಬರಲಿಲ್ಲ. ಕೆಲವು ಸಲ ಕೇಳಿದ ಹಾಗೆ ನಟಿಸಿ ಸುಮ್ಮನಾಗುತ್ತಿದ್ದಿರಿ?' ಎಂದ. ಅದಕ್ಕೆ ಶಿಷ್ಯರು 'ನಿಮಗೆ ಹಾಗನ್ನಿಸಿರಬಹುದು, ಪ್ರವಚನ ಕೊಡುವಾಗ ನಿಮ್ಮ ಮಾತುಗಳನ್ನೇ ಉದಾಹರಿಸುತ್ತೇವೆ. ಅವು ನಮ್ಮ ಹೃದಯದಲ್ಲಿವೆ' ಎಂದರು.

ಸಾಕ್ರಟೀಸ್ ಸಂತೋಷದಿಂದ 'ಓಹ್ ಈಗ ನಾನು ಸತ್ತರೂ ಬದುಕಿದರೂ ಏನೂ ವ್ಯತ್ಯಾಸವಿಲ್ಲ ಅಲ್ಲವೇ' ಎಂದ. ಶಿಷ್ಯರಿಗೆ ಇನ್ನಷ್ಟು ದುಃಖವಾಯಿತು. 'ನಮ್ಮಿಂದ ನಿಮ್ಮನ್ನು ಮೃತ್ಯು ಕಸಿದುಕೊಳ್ಳುತ್ತದೆ. ಅದಕ್ಕೆ ಸಾವನ್ನು ನಾವು ದ್ವೇಷಿಸುತ್ತೇವೆ' ಎಂದರು. ತಕ್ಷಣ ಸಾಕ್ರಟೀಸ್, 'ದ್ವೇಷ ಎನ್ನುವ ಪದ ತುಂಬಾ ಕೆಟ್ಟದ್ದು; ಸಾವಿಗಿಂತಲೂ. ಸಾವೆಂದರೆ ಇಲ್ಲವಾಗಿಸುವುದು. ಯಾವಾಗ ಮನುಷ್ಯ ಜ್ಞಾನದಲ್ಲಿ, ಅಧ್ಯಾತ್ಮದಲ್ಲಿ ತನ್ನನ್ನು ತಾನು ಇಲ್ಲವಾಗಿಸಿಕೊಳ್ಳಲು ಶ್ರಮಿಸುತ್ತಾನೆಯೋ, ಅದಕ್ಕೆ ಮುಖಾಮುಖಿಯಾಗಿ ನಿಂತು, 'ನಿನಗಿಂತಲೂ ನಾನು ಧೈರ್ಯಶಾಲಿ' ಎಂದು ತೋರಿಸಿಕೊಳ್ಳುತ್ತಾನೆಯೋ ಅವನು ನಿಜವಾದ ಸಾಧಕ. ಒಂದು ಮಾತನ್ನು ಹೇಳುತ್ತೇನೆ; ಸಾವನ್ನು ಕಂಡು ಭಯಭೀತನಾದವನೂ, ಸಾವಿಗೆ ಎದುರಾಗಿ ಹೋರಾಡಿದವನೂ ಎಲ್ಲರೂ ಸಾಯುತ್ತಾರೆ. ಹುಟ್ಟಿನ ಹಾಗೆ ಸಾವೂ ಒಂದು ಸ್ಥಿತಿ' ಸಾಕ್ರಟೀಸ್ ಮಾತು ನಿಲ್ಲಿಸಿದ.

ಹಾಗಾದರೆ 'ನಮ್ಮ ಬದುಕನ್ನು ಕಸಿದುಕೊಳ್ಳುವ ಸಾವನ್ನು ಬಯಸಬೇಕೇ?' ಎಂದ ಶಿಷ್ಯರಿಗೆ ಸಾಕ್ರಟೀಸ್ ಹೇಳಿದ: 'ಬಯಸಿದಾಗ ಬರುವುದು ಯಾವುದೂ ಇಲ್ಲ. ಅದೊಂದು ಪಕ್ವತೆಯ ಕಾಲ. ಸಾವು ನಮ್ಮಿಂದ ಏನನ್ನು ಕಸಿದುಕೊಂಡಿತು ಎಂದು ಕೇಳಿಕೊಳ್ಳಿ. ನಾನು ಗಳಿಸಿದ ಜ್ಞಾನ ನಿರಂತರ ವಾಹಿನಿಯಾಗಿ ನಿಮ್ಮಲ್ಲಿ ಹರಿಯುತ್ತಿದೆ. ಅದನ್ನು ಕೊನೆಗೊಳಿಸುವ ಶಕ್ತಿ ಸಾವಿಗಿಲ್ಲ. ಯಾರು ಜ್ಞಾನದ ಮೂಲಕ ಉಳಿಯುತ್ತಾರೋ ಅವರಿಗೆ ಸಾವೇ ಇರುವುದಿಲ್ಲ. ಸಾವೇ ಇಲ್ಲ ಅಂದ ಮೇಲೆ ದುಃಖ ಎಲ್ಲಿಯದು'.

ಜೀವನದಲ್ಲಿ ಪ್ರತಿಕ್ಷಣವೂ ಪ್ರಫುಲ್ಲಿತರಾಗಬೇಕು. ಓದುವುದು ಸಾಧ್ಯವಾದರೆ ಓದಿ, ಹಾಡಿ. ನಿಮ್ಮಿಚ್ಛೆಯಂತೆ ಬದುಕಿ. ಬದುಕನ್ನು ನಗುನಗುತ್ತಾ ಸ್ವೀಕರಿಸಿದರೆ ಯಾವುದೂ ದುಃಖಕ್ಕೆ ಈಡು ಮಾಡುವ ಘೋರ ಸಂಗತಿಯಾಗಿರುವುದಿಲ್ಲ. ಸಾವಿನ ಎದುರೂ ನಗುವ, ಸತ್ತ ನಂತರವೂ ತಾನು ಉಳಿವೆ ಎಂದುಕೊಳ್ಳುವ ಆತ್ಮವಿಶ್ವಾಸ ಸಾಮಾನ್ಯದ ಮಾತಲ್ಲ. ಯಾರು ಬದುಕನ್ನು ಸ್ವೀಕಾರ ಮಾಡುತ್ತಾರೋ ಅವರು ಎಲ್ಲವನ್ನೂ ಗೆದ್ದ ಹಾಗೆ. ಇಂಥಾ ಮನಃಸ್ಥಿತಿಯನ್ನು ರೂಢಿಸಿಕೊಂಡರೆ ಯಾವ ಭಾರವೂ ಇಲ್ಲದ ಹಾಗೆ ಬದುಕಬಹುದು ಅಲ್ಲವೇ...


ಸಾಕ್ರಟೀಸ್ ನಿಜವಾದ ತತ್ವಜ್ಞಾನಿ ಎನ್ನಿಸುವುದು ಜಗತ್ತು ಮತ್ತೆ ಮತ್ತೆ ಆತನನ್ನು ನೆನೆಯುವುದು ಇಂಥಾ ತಾತ್ವಿಕತೆಯ ಕಾರಣಕ್ಕೆ.

ಪದಬಂಧ 6334

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನವರತ್ನಗಳಲ್ಲಿ ಒಂದಾಗಿರುವ ಹವಳ (3)
4.ಕರುವಿನಲ್ಲಿ ಅಶ್ರು ಕಾಣಿಸಿತೇ? (3)
6.ನೀರಿನಿಂದಾದ ಅನಿಲ (5)
7.ಮೃತ್ಯು ದೇವತೆ (2)
9.ಮಾತುಲನಾಡಿದ ನುಡಿ (2)
10.ಕಂಪನವಾದಾಗ ಕಾಣಿಸಿದ ಕೆಸರು (2)
12.ಜನಿವಾರ ಧರಿಸಿದವನು ನುಡಿದ ಸತ್ಯ (2)
14.ವ್ಯಾಕರಣದಲ್ಲಿ ವಸ್ತು ಅಥವಾ ವ್ಯಕ್ತಿಯ ಗುಣವನ್ನು ತಿಳಿಸುವ ಪದ (5)
16.ಕನ್ನಡಿ ಇಲ್ಲಿದೆ (3)
17.ವೀರಾಧಿವೀರರು ಹರಿಸಿದ ನೆತ್ತರು (3)

ಮೇಲಿಂದ ಕೆಳಕ್ಕೆ
1.ನಿಯಮದಂತೆ ಕನ್ನಡಿಗನು ಮಾಡಿದ ಎಕ್ಸ್‌ಚೇಂಜ್! (4)
2.ಮಜದಲ್ಲಿರುವ ಮನುಷ್ಯ (3)
3.ಪಂಚನಾಮವನ್ನು ಹೀಗೂ ಹೇಳುತ್ತಾರೆ (4)
4.ನಿಂದೆ ಈ ರೀತಿ ಬಂದಿದೆ (3)
5.ರುಜು ಹಾಕಿ ದೃಢಪಡಿಸುವ ಸಾಧನ (4)
8.ಪುಸ್ತಕದಲ್ಲಿ ಹುದುಗಿಸಿದ ತಲೆ (3)
9.ಈಕೆ ಹೆಂಗಸು (3)
10.ಪಂಕ್ತಿಯಲ್ಲಿ ಪಕ್ಷಪಾತ ಮಾಡುವುದು (4)
11.ಚಿಕಿತ್ಸಾಲಯ ಇಲ್ಲಿದೆ (4)
13.ವಾರದಕೊನೆಗೆ ಧರಿಸಿದ ಯಜ್ಞೋಪವೀತ (4)
14.ಗುಣಗಾನ ಮಾಡುತ್ತಾ ಹಿಡಿದಿರುವ ದೊಡ್ಡ ಮಡಕೆ (3)
15.ಬೆನ್ನೆಲುಬಿರುವ ಪ್ರಾಣಿ (3)



6333ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಮನೋರಥ 5.ರೂಪಾಂತರ
6.ಬಾಕು 7.ಗತ್ಯಂತರ
9.ರಂಪ 11.ಕಚ
12.ಪಾಕಶಾಲೆ 14.ವ್ಯರ್ಥ
16.ಅಚಾನಕ 17.ನವನೀತ

ಮೇಲಿಂದ ಕೆಳಕ್ಕೆ:
1.ಜರೂರು 2.ಅಂತರಂಗ
3.ಮನ್ವಂತರ 4.ಥಳಕು
6.ಬಾಲಕ 8.ತವಕ
10.ಪದಾರ್ಥ 12.ಪಾರಂಗತ
13.ಲೆಕ್ಕಾಚಾರ 14.ವ್ಯಸನ
15.ಸೌಕರ್ಯ

ಸುಡೊಕು 6718

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	3			6				2
6		2	4		9			
					2	6		9
3		7	2			4		
		8		4			3	
4					3	2		8
		9	8					4
8					4		2	
1		3		2		7		6

6717 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

5 ಮಾರ್ಚ್ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ದ್ವಿತೀಯ ಗಂ. 17-04 ನಕ್ಷತ್ರ: ಉತ್ತರಫಲ್ಗುನಿ ಗಂ. 8-18 ಯೋಗ: ಶೂಲ ಗಂ. 7-46 ಕರಣ: ಗರ ಗಂ 17-04 ಕುಂಭ ಮಾಸದ 20 ನೇ ದಿನ. ಮಳೆ ನಕ್ಷತ್ರ : ಪೂರ್ವಾಭಾದ್ರ 1ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-48 ಸೂರ್ಯಾಸ್ತ : 06-36, ಮುಸ್ಲಿಂ ದಿನಾಂಕ : 15 ರಂಜಾನ್, ಅದೃಷ್ಟ ಸಂಖ್ಯೆ : 8, 12

ಮೇಷ: ನರರೋಗ ತಜ್ಞರಿಗೆ ಹೊಸ ಅನುಭವಗಳೊಂದಿಗೆ ವಿದೇಶ ಪ್ರಯಾಣದ ಸಾಧ್ಯತೆಗಳು ಮತ್ತು ವೃತ್ತಿ ನಡೆಸಲು ಅವಕಾಶ ಸಿಗಲಿವೆ. ಜೀವನದ ಅಭಿವೃದ್ಧಿಗೆ ಬೇಕಾದ ಕಾರ್ಯಗಳು ನಿರಂತರವಾಗಿ ಮುಂದುವರಿಯಲಿವೆ.

ವೃಷಭ: ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇ ಬೇಕಾದ ಸಂದರ್ಭ ಬರಲಿದೆ. ಯಶಸ್ಸು ಹುಡುಕಿಕೊಂಡು ಬರುವುದರಿಂದ ಸಂತಸವಾಗಲಿದೆ. ಸರಕು ಸಾಗಾಟದಿಂದ ಲಾಭ ಬರುವುದು.

ಮಿಥುನ: ಬಹಳ ದಿನಗಳ ನಂತರ ಮನೆಗೆ ಹಿರಿಯ ಸಹೋದರರ ಆಗಮನ ಸಂತೋಷ ಉಂಟುಮಾಡುವುದು. ಸ್ವಲ್ಪ ಪ್ರಯತ್ನಕ್ಕೂ ಹೆಚ್ಚಿನ ಉಪಯೋಗ ಪ್ರಾಪ್ತಿಯಾಗಲಿದೆ.

ಕರ್ಕಾಟಕ: ಸಂಗೀತಗಾರರಿಗೆ ಪ್ರತಿಭೆ ಹೊರಹಾಕಲು ಹಾಗೂ ಜನಪ್ರಿಯರಾಗಲು ವೇದಿಕೆ ಸಿಗಲಿದೆ. ಮಹಿಳೆಯರಿಗೆ ಸ್ವತಂತ್ರ ಉದ್ಯಮದ ಹಾದಿ ಸುಗಮವಾಗುವುದು. ಸಮಸ್ಯೆ ಇತ್ಯರ್ಥಗೊಂಡು ಪ್ರತಿವಾದಿಗಳು ನಿರುತ್ತರರಾಗುವರು.

ಸಿಂಹ: ಒರಟು ವ್ಯಕ್ತಿತ್ವದಿಂದ ಅಥವಾ ಕಹಿಯ ಮಾತುಗಳಿಂದ ಸಹಭಾಗಿಗೆ ಅಥವಾ ಮಕ್ಕಳಿಗೆ ನೋವಾಗಬಹುದು. ಮೋಸಗಳು ನಡೆಯಬಹುದಾದ ಪಾಲುದಾರಿಕೆಯಿಂದ ಹೊರಬರುವ ಚಿಂತನೆ ಸೂಕ್ತವಾದುದು.

ಕನ್ಯಾ: ವ್ಯವಹಾರಿಕವಾಗಿ ಮಾತನಾಡುವಾಗ ದಾಕ್ಷಿಣ್ಯಗಳಿಗೆ ಒಳಗಾಗುವುದು ಸರಿಯಲ್ಲ. ಕೌಟುಂಬಿಕವಾಗಿ ನೆಲೆ ನಿಂತದ್ದರಿಂದ ಮನಸ್ಸಿಗೆ ಸಮಾಧಾನವಾಗುವುದು. ಬಂಧುಗಳೊಡನೆ ಸುಖ ಭೋಜನ ನಡೆಯಬಹುದು.

ತುಲಾ: ಯಾವುದೇ ವಿಷಯದಲ್ಲಿ ಜವಾಬ್ದಾರಿಯನ್ನು ಹೊರುವ ಮೊದಲು ಅದರ ಬಗೆಗಿನ ಸಾಮಾನ್ಯ ಜ್ಞಾನ, ಲಾಭ-ನಷ್ಟ, ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಗಮನವಿರಲಿ. ವೃತ್ತಿಯಲ್ಲಿ ಗಮನವಿರಲಿ.

ವೃಶ್ಚಿಕ: ಉದ್ಯೋಗಕಾಂಕ್ಷಿಗಳು ಸಂದರ್ಶನ ಎದುರಿಸಲು ಬೇಕಾದ ತಯಾರಿಯನ್ನು ನಡೆಸಿಕೊಳ್ಳಿ. ಮಕ್ಕಳಿಂದ ಅಹಿತಕರ ಕಾರ್ಯಗಳು ನಡೆದು ಮಾನಸಿಕ ಚಿಂತೆ ಉಂಟಾಗಬಹುದು. ಆದಾಯ ಉತ್ತಮ ಸ್ಥಿತಿಯಲ್ಲಿರುತ್ತದೆ.

ಧನು: ಜವಾಬ್ದಾರಿಯುತ ಹುದ್ದೆ ನಿಮ್ಮ ಪಾಲಿಗೆ ಬರಲಿದೆ. ಕರ್ತವ್ಯದಲ್ಲಿ ಯಾವುದೇ ಲೋಪವಾಗದಂತೆ ಗಮನಹರಿಸಿ. ಕುಟುಂಬದ ಹಿಂದಿನ ವಿಚಾರ ತಿಳಿಯಲು ದಾಯಾದಿಗಳಿಂದ ಅನುಕೂಲವಾಗಲಿದೆ.

ಮಕರ: ವೃತ್ತಿಪರ ಗೊತ್ತಿಲ್ಲದ ವಿಚಾರ ಕೇಳಿ ತಿಳಿದುಕೊಳ್ಳುವ ಮೂಲಕ ಕೆಲಸಗಳು ಸುಗಮವಾಗಲಿವೆ. ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಕಷ್ಟಪಡಬೇಕಾಗಬಹುದು. ದಾಂಪತ್ಯದಲ್ಲಿ ಸಂಶಯದ ವಾತಾವರಣ ಇರಲಿದೆ.


ಕುಂಭ: ಗೆಳೆಯನೊಬ್ಬನ ಭೇಟಿಯಿಂದಾಗಿ ಜೀವನ ಮಹತ್ವದ ತಿರುವೊಂದನ್ನು ಪಡೆದುಕೊಳ್ಳಲಿದೆ. ಅವಿವಾಹಿತರಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಪ್ರಾಪ್ತಿಯಾಗುತ್ತವೆ. ಧಾರ್ಮಿಕ ಕೆಲಸದಲ್ಲಿ ಆಸಕ್ತಿ ಮೂಡುವುದು.

ಮೀನ: ದೇವರ ಮತ್ತು ಹಿರಿಯರ ಅನುಗ್ರಹ ಸಂಪಾದಿಸುವುದರಿಂದ ಸಮಸ್ಯೆಗಳಿಂದ ಮುಕ್ತಿ ಕಾಣುವಿರಿ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಉತ್ಸಾಹ ಮೂಡುವುದು. ಚಿಲ್ಲರೆ ವ್ಯಾಪಾರಿಗಳಿಗೆ ಲಾಭ ಸಿಗಲಿದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	24,865
ಇಂದಿನ ಅಂತ್ಯ:	24,480
ದಿನದ ಕನಿಷ್ಠ:	24,305
▼	385

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹480
12 ಕ್ಕೆ	₹63
ಮೈಸೂರು: 100 ಕ್ಕೆ	₹480

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹209
ಗುಡ್ ಲಾಟ್	₹196

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹466-741
ದ್ವಿತಳಿ (ಬಿ.ವಿ)	₹263-875

ಮುದ್ರೆಮನೆ ಕಾಫಿ

ಎಪಿ	₹22600
ಎಸಿ	₹13000
ಆರ್‌ಪಿ	₹18200
ಆರ್‌ಸಿ	₹9825

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1650 (1710)
ಸೋಯಾ (ರಿಫೈನ್ಡ್)	₹1380 (1380)
ಸೂರ್ಯಕಾಂತಿ (ರಿಫೈನ್ಡ್)	₹1610 (1610)
ಪಾಮೋಲಿನ್	₹1320 (1320)

ಅಡಿಕೆ ಧಾರಣೆ

ಪುತ್ತೂರು		ರಾಶಿ	47666-56399	ಕೆಂಪುಗೋಟು	24299-38819
ಕೋಕ	20000-37500	ಸರಕು	50619-94100	ರಾಶಿ	48119-58319
ಹೊಸತು	26000-47000	**ಯಲ್ಲಾಪುರ**		ತಟ್ಟಿಬೆಟ್ಟೆ	38009-50019
ಶಿವಮೊಗ್ಗ		ಕೋಕ	18909-35012	ಆಪಿ	59259-60259
ಬೆಟ್ಟೆ	48619-64210	ಹಳೆಚಾಲಿ	46269-48509	ಬಿಳಿಗೋಟು	18612-39231
ಗೊರಬಲು	19010-39251	ಹೊಸಚಾಲಿ	37119-47870	**ಕುಮಟಾ**	
				ಚಾಲಿ	44857-44857

ಎಲ್‌ಎನ್‌ಜಿ ಅನಿಲ ಪೂರೈಕೆಗೆ ಅಡ್ಡಿ

ಕೈಗಾರಿಕಾ ವಲಯದ ಗ್ರಾಹಕರು, ಸಿಎನ್‌ಜಿ ಕಂಪನಿಗಳಿಗೆ ಸಮಸ್ಯೆ

ಮುಖ್ಯಾಂಶಗಳು
- ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಗೆ ಅಡ್ಡಿ
- ಸಿಎನ್‌ಜಿ ದುಬಾರಿ ಆಗುವ ಸಾಧ್ಯತೆ
- ಮುಕ್ತ ಮಾರುಕಟ್ಟೆಯಲ್ಲಿ ಎಲ್‌ಎನ್‌ಜಿ ಬೆಲೆ ತುಟ್ಟಿ

ನವದೆಹಲಿ (ಪಿಟಿಐ): ಇರಾನ್ ದಾಳಿಗೆ ತುತ್ತಾದ ನಂತರದಲ್ಲಿ ಕತಾರ್ ದೇಶವು ದ್ರವೀಕೃತಕ ನೈಸರ್ಗಿಕ ಅನಿಲದ (ಎಲ್‌ಎನ್‌ಜಿ) ಉತ್ಪಾದನೆಯನ್ನು ನಿಲ್ಲಿಸಿದೆ. ಇದರಿಂದಾಗಿ ಭಾರತಕ್ಕೆ ಸಮಸ್ಯೆ ಸೃಷ್ಟಿಯಾಗುವ ಸಾಧ್ಯತೆ ಇದೆ.

ಅನಿಲದ ಅಗತ್ಯಗಳಿಗಾಗಿ ಭಾರತವು ಕತಾರ್ ಜೊತೆ ದೀರ್ಘಾವಧಿಗೆ ಎಲ್‌ಎನ್‌ಜಿ ಪೂರೈಕೆ ಒಪ್ಪಂದ ಹೊಂದಿದೆ. ಆದರೆ, ಸರಕು ಸಾಗಣೆ ಹಡಗುಗಳು ತಾತ್ಕಾಲಿಕವಾಗಿ ಸಾಗಣೆ ನಿಲ್ಲಿಸಿವೆ. ಹೀಗಾಗಿ, ಕೈಗಾರಿಕಾ ಗ್ರಾಹಕರು ಹಾಗೂ ಸಿಎನ್‌ಜಿ, ಪಿಎನ್‌ಜಿ ಪೂರೈಕೆ ಮಾಡುವ ನಗರ ಅನಿಲ ವಿತರಣಾ (ಸಿಜಿಡಿ) ವಲಯದ ಕಂಪನಿಗಳಿಗೆ ಅನಿಲ ಇಂಧನದ ಲಭ್ಯತೆಯಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ.

ಕೈಗಾರಿಕಾ ವಲಯದ ಕೆಲವು ಗ್ರಾಹಕರು ತುಸು ದುಬಾರಿ ಆಗಿರುವ ಪರ್ಯಾಯ ಇಂಧನಗಳನ್ನು ಬಳಕೆ ಮಾಡಬಹುದು ಎನ್ನಲಾಗಿದೆ. ಆದರೆ ಸಿಎನ್‌ಜಿ ವ್ಯಾಪಾರದಲ್ಲಿ ತೊಡಗಿರುವ ಸಿಜಿಡಿ ಕಂಪನಿಗಳು ತಮಗೆ ಬಹಳ ಸಮಸ್ಯೆ ಆಗುತ್ತದೆ ಎಂದು ಹೇಳಿವೆ.

ದೀರ್ಘಾವಧಿಯ ಗುತ್ತಿಗೆಯ ಮೂಲಕ ಕತಾರ್‌ನಿಂದ ತರಿಸಿಕೊಳ್ಳುವ ಎಲ್‌ಎನ್‌ಜಿ ಬದಲಿಗೆ, ಮುಕ್ತ ಮಾರುಕಟ್ಟೆಯಲ್ಲಿ ಸಿಗುವ ಎಲ್‌ಎನ್‌ಜಿ ಖರೀದಿಸಲು ದುಪ್ಪಟ್ಟು ಬೆಲೆ ತೆರಬೇಕಾಗುತ್ತದೆ. ಈ ರೀತಿ ಮಾಡಿದರೆ ಸಿಎನ್‌ಜಿ ಇಂಧನವು ಬಹಳ ದುಬಾರಿ ಆಗಿ, ಗ್ರಾಹಕರು ಶಾಶ್ವತವಾಗಿ ಇ.ವಿ. ಕಡೆ



ಸಾಂಕೇತಿಕ ಚಿತ್ರ

ಮುಖ ಮಾಡಬಹುದು ಎಂಬುದು ಈ ಕಂಪನಿಗಳ ಆತಂಕವಾಗಿದೆ.

ಎಲ್‌ಎನ್‌ಜಿ ಆಮದಿನಲ್ಲಿ ಭಾರತದ ಅತಿದೊಡ್ಡ ಕಂಪನಿಯಾಗಿರುವ ಪೆಟ್ರೊನೆಟ್ ಎಲ್‌ಎನ್‌ಜಿ ಲಿಮಿಟೆಡ್‌ಗೆ, ಎಲ್‌ಎನ್‌ಜಿ ತರಲು ಕತಾರ್‌ಗೆ ಹಡಗುಗಳನ್ನು ಕಳುಹಿಸಲು ಆಗಿಲ್ಲ. ಹೊರ್ಮುಜ್ ಜಲಸಂಧಿಯನ್ನು ಇರಾನ್ ಬಂದ್ ಮಾಡಿರುವುದು ಇದಕ್ಕೆ ಕಾರಣ. ಅಲ್ಲದೆ, ಕತಾರ್ ತನ್ನಲ್ಲಿನ ಎಲ್‌ಎನ್‌ಜಿ ಉತ್ಪಾದನಾ ಘಟಕವನ್ನು ಸ್ಥಗಿತಗೊಳಿಸಿದೆ.

ಪಶ್ಚಿಮ ಏಷ್ಯಾದಲ್ಲಿನ ವಿಷಮ ಪರಿಸ್ಥಿತಿಯ ಕಾರಣದಿಂದಾಗಿ ಎಲ್‌ಎನ್‌ಜಿ ಮಾರಾಟ ಗುತ್ತಿಗೆಯ ಒಪ್ಪಂದಕ್ಕೆ ಅನುಗುಣವಾಗಿ ನಡೆದುಕೊಳ್ಳಲು ತನ್ನಿಂದ ಆಗುತ್ತಿಲ್ಲ ಎಂದು ಕತಾರ್ ಎನರ್ಜಿ ಕಂಪನಿಯು ಪೆಟ್ರೊನೆಟ್ ಎಲ್‌ಎನ್‌ಜಿ ಕಂಪನಿಗೆ ಮಾಹಿತಿ ನೀಡಿದೆ. ಇದೇ ವೇಳೆ, ಪೆಟ್ರೊನೆಟ್ ಕೂಡ ತನ್ನಿಂದ ಹಡಗುಗಳನ್ನು ರವಾನಿಸಲು ಸಾಧ್ಯವಾಗುತ್ತಿಲ್ಲ ಎಂದು ಕತಾರ್ ಎನರ್ಜಿ ಕಂಪನಿಗೆ ತಿಳಿಸಿದೆ.

ಭಾರತವು ಪ್ರತಿವರ್ಷ 2.7 ಕೋಟಿ ಟನ್ ಎಲ್‌ಎನ್‌ಜಿ ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಕತಾರ್‌ನಿಂದ ಆಮದು ಆಗುವ ಎಲ್‌ಎನ್‌ಜಿ ಪಾಲು ಶೇ 40ರಷ್ಟು ಇದೆ.

ಪೂರೈಕೆಯಲ್ಲಿನ ಕಡಿತವು ನಗರ ಅನಿಲ ಕಂಪನಿಗಳಿಗೆ ಬಿಸಿ ಮುಟ್ಟಿಸಿದೆ. ಇವು ಭಾರತೀಯ ಅನಿಲ ಪ್ರಾಧಿಕಾರಕ್ಕೆ (ಗೇಲ್) ಪತ್ರ ಬರೆದಿದ್ದು, ಅನಿಲದ ಲಭ್ಯತೆಯ ಬಗ್ಗೆ ಕಳವಳ ವ್ಯಕ್ತಪಡಿಸಿವೆ. ದೇಶದಲ್ಲಿ ಉತ್ಪಾದನೆಯಾಗುವ ನೈಸರ್ಗಿಕ ಅನಿಲವು ಆಂತರಿಕ ಮಾರುಕಟ್ಟೆಯ ಶೇ 50ರಷ್ಟು ಅಗತ್ಯವನ್ನು ಮಾತ್ರ ಪೂರೈಸಬಲ್ಲದು. ಇನ್ನುಳಿದ ಅನಿಲವನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ಎಲ್‌ಎನ್‌ಜಿಯನ್ನು ರಸಗೊಬ್ಬರ ತಯಾರಿಕೆಯಲ್ಲಿ, ವಿದ್ಯುತ್ ಉತ್ಪಾದನೆಯಲ್ಲಿ ಇಂಧನವಾಗಿ ಬಳಕೆ ಮಾಡಲಾಗುತ್ತದೆ.

ಐಪಿಒಗೆ ದಾಖಲೆ ಸಲ್ಲಿಸಿದ ಮನಿವ್ಯೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರಿಗೆ ಷೇರು ಮಾರಾಟ (ಐಪಿಒ) ಮಾಡುವ ಮೂಲಕ ₹1,500 ಕೋಟಿ ಬಂಡವಾಳ ಸಂಗ್ರಹಿಸಲು ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ ಫಿನ್‌ಟೆಕ್ ಕಂಪನಿ ‘ಮನಿವ್ಯೂ’ ಮುಂದಾಗಿದೆ.

ಕಂಪನಿಯು ಐಪಿಒ ಕುರಿತಾದ ಕರಡು ದಾಖಲೆ ಪತ್ರಗಳನ್ನು (ಡಿಆರ್‌ಎಚ್‌ಪಿ) ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಿದೆ.

13.6 ಕೋಟಿ ಈಕ್ವಿಟಿ ಷೇರುಗಳನ್ನು ಆಫರ್ ಫಾರ್ ಸೇಲ್ ಮೂಲಕ ಮಾರಾಟ ಮಾಡಲಾಗುವುದು ಎಂದು ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ.





ಮುಂಬೈ ಧಾರಣೆ (ಶೇಂಗಾ)

04-03-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1660 (1710)
ಒಂದು ವಾರದ ಡೆಲಿವರಿ	1655 (1715)
ಪಾಮ್ ವಾರದ ಡೆಲಿವರಿ	1318 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1520)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,62,500 (1,68,000)
ಬೆಳ್ಳಿ ಕೆ.ಜಿಗೆ	2,71,000 (2,92,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕುಸಿತಕ್ಕೆ ಕರಗಿದ್ದು ₹16 ಲಕ್ಷ ಕೋಟಿ

ಮುಂಬೈ / ಬೆಂಗಳೂರು (ಪಿಟಿಐ): ಇರಾನ್ ಸಮರದ ಪರಿಣಾಮವಾಗಿ ದೇಶದ ಷೇರುಪೇಟೆಗಳಲ್ಲಿ ‘ಕರಡಿ ಕುಣಿತ’ವು ಬುಧವಾರವೂ ಮುಂದುವರಿದಿದೆ. ಬುಧವಾರದ ಷೇರುಪೇಟೆ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 1ಕ್ಕಿಂತ ಹೆಚ್ಚು ಕುಸಿದಿವೆ.

ಸೋಮವಾರ ಮತ್ತು ಬುಧವಾರದ ಕುಸಿತದ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ₹16.32 ಲಕ್ಷ ಕೋಟಿಯಷ್ಟು ಕರಗಿದೆ. ಮಂಗಳವಾರ ಹೋಳಿಹಬ್ಬದ ಕಾರಣದಿಂದಾಗಿ ಷೇರುಪೇಟೆಗಳಿಗೆ ರಜೆ ಇತ್ತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಸತತ ನಾಲ್ಕನೆಯ ವಹಿವಾಟಿನ ದಿನವೂ ಕುಸಿದಿದೆ. ಬುಧವಾರ ಸೆನ್ಸೆಕ್ಸ್ 1,122 ಅಂಶಗಳಷ್ಟು ಕುಸಿದಿದೆ. ರಾಷ್ಟ್ರೀಯ ಷೇರುಪೇಟೆಯ ನಿಫ್ಟಿ ಸೂಚ್ಯಂಕವು 385 ಅಂಶ



ಇಳಿಕೆ ಕಂಡಿದೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 3.08ರಷ್ಟು ಹೆಚ್ಚಳವಾಗಿದ್ದು ಪ್ರತಿ ಬ್ಯಾರೆಲ್‌ಗೆ 83.91 ಅಮೆರಿಕನ್ ಡಾಲರ್‌ಗೆ ತಲುಪಿದೆ.

‘ಹೊರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆಗೆ ಆಗುತ್ತಿಲ್ಲವಾದ ಕಾರಣದಿಂದಾಗಿ ಕಚ್ಚಾ ತೈಲದ ಬೆಲೆಯು ಅಸ್ಥಿರವಾಗಿದೆ’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಂಬೈ ಷೇರುಪೇಟೆಯಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್, ಕೈಗಾರಿಕೆಗಳು, ರಿಯಾಲ್ಟಿ, ಸರಕು, ಬಂಡವಾಳ ಸರಕುಗಳು, ಇಂಧನ, ಸೇವೆ, ವಿದ್ಯುತ್ ವಲಯದ ಸೂಚ್ಯಂಕಗಳು ಕುಸಿತ ಕಂಡಿವೆ.

ರೂಪಾಯಿ ತೀವ್ರ ಕುಸಿತ

ಕಚ್ಚಾ ತೈಲದ ಬೆಲೆ ಏರಿಕೆಯ ಪರಿಣಾಮವಾಗಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 56 ಪೈಸೆಯಷ್ಟು ಕುಸಿದು ₹92.05ಕ್ಕೆ ತಲುಪಿದೆ. ಇದು ಈವರೆಗಿನ ಕನಿಷ್ಠ ಮಟ್ಟವಾಗಿದೆ.

ಷೇರುಪೇಟೆಗಳಲ್ಲಿ ಕಂಡುಬಂದ ಷೇರುಗಳ ಭಾರಿ ಮಾರಾಟ, ವಿದೇಶಿ ಹೂಡಿಕೆದಾರರು ಹೂಡಿಕೆ ಹಿಂತೆಗೆದುಕೊಂಡಿದ್ದುದು ಕೂಡ ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ. ಬುಧವಾರದ ಷೇರುಪೇಟೆ ವಹಿವಾಟಿನಲ್ಲಿ ವಿದೇಶಿ ಹೂಡಿಕೆದಾರರು ಒಟ್ಟು ನಿವ್ವಳ ₹8,752 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಚಿನ್ನ, ಬೆಳ್ಳಿ ದರ ಇಳಿಕೆ: ಬೆಂಗಳೂರಿನ ಚಿನ್ನದ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹5,700ರಷ್ಟು ಇಳಿಕೆಯಾಗಿ, ₹1,69,400ರಂತೆ ಮಾರಾಟವಾಗಿದೆ. ಕೆ.ಜಿ ಬೆಳ್ಳಿ ಬೆಲೆಯು ₹4,800ರಷ್ಟು ಕಡಿಮೆಯಾಗಿ ₹2,87,700ಕ್ಕೆ ಇಳಿದಿದೆ.

ಮಂಗಳವಾರದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ ದರವು ₹1,75,100 ಮತ್ತು ಬೆಳ್ಳಿ ₹2,92,500ರಂತೆ ಮಾರಾಟವಾಗಿತ್ತು.

ಸುದ್ದಿ 2 ನಿಮಿಷ

ಕರ್ನಾಟಕದಲ್ಲೇ ಇ.ವಿ ವಾಹನಗಳ ತಯಾರಿಕೆ: ಎಚ್‌ಡಿಕೆ

ಬೆಂಗಳೂರು: ಕರ್ನಾಟಕದಲ್ಲಿ ಬ್ಯಾಟರಿ ಚಾಲಿತ (ಇ.ವಿ) ವಾಹನಗಳ ಕ್ಷೇತ್ರದ ಅಭಿವೃದ್ಧಿಗೆ ಪೂರಕ ವ್ಯವಸ್ಥೆ ಕಲ್ಪಿಸ ಲಾಗುತ್ತಿದ್ದು, ಮೊದಲ ಹಂತದಲ್ಲಿ ಮಂಡ್ಯ ಜಿಲ್ಲೆಯಲ್ಲಿ ₹500 ಕೋಟಿ ವೆಚ್ಚದಲ್ಲಿ ಆಟೋಮೊಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾದ ಪರೀಕ್ಷಾ ಕೇಂದ್ರ ಸ್ಥಾಪಿಸಲಾಗುತ್ತಿದೆ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಒಕ್ಕೂಟದ ಪ್ರತಿನಿಧಿಗಳ ಜತೆ ಸಭೆ ನಡೆಸಿದ ನಂತರ ಅವರು ಮಾತನಾಡಿದರು.

‘ರಾಜ್ಯದಲ್ಲಿ ಬ್ಯಾಟರಿ ಚಾಲಿತ ವಾಹನಗಳ ಕ್ಷೇತ್ರದ ವಿಸ್ತರಣೆಗೆ ಇರುವ ಅವಕಾಶಗಳ ಕುರಿತು ಚರ್ಚೆ ನಡೆಸಲಾಗಿದೆ. ಕೇಂದ್ರ ಸರ್ಕಾರಿ ಸ್ವಾಮ್ಯದ ತರಬೇತಿ ಕೇಂದ್ರಕ್ಕೆ ಕಳೆದ ಬಜೆಟ್‌ನಲ್ಲಿ ₹500 ಕೋಟಿ ಮೀಸಲಿಡಲಾಗಿದೆ. ಅಗತ್ಯವಿದ್ದರೆ ಇನ್ನೂ ₹500 ಕೋಟಿ ಹೂಡಿಕೆ ಮಾಡಲು ಸಿದ್ಧ. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಪತ್ರ ಬರೆದಿರುವೆ’ ಎಂದರು.

ಕಂಪನಿಗಳು ಕರ್ನಾಟಕದಲ್ಲಿ ಹುಟ್ಟಿಕೊಳ್ಳುತ್ತಿವೆ. ಆದರೆ, ಬೇರೆ ರಾಜ್ಯಗಳಲ್ಲಿ ತಯಾರಿಕಾ ಘಟಕ ಸ್ಥಾಪಿಸುತ್ತಿವೆ. ಇಂಥ ಪರಿಸ್ಥಿತಿಯಿಂದ ಕರ್ನಾಟಕವನ್ನು ಹೊರತರಬೇಕಿದೆ. ರಾಜ್ಯದಲ್ಲಿ ಇವಿ ವಾಹನಗಳ ಸಂಶೋಧನೆ, ಉತ್ಪಾದನೆ ಹಾಗೂ ಉದ್ಯೋಗ ಸೃಷ್ಟಿಗೆ ಒತ್ತು ನೀಡಬೇಕಿದೆ. ಇಂಗಾಲ ಹೊರಸೂಸುವಿಕೆ ಯನ್ನು ಶೂನ್ಯಮಟ್ಟಕ್ಕೆ ಇಳಿಸಿ, ಪರಿಸರ ಪೂರಕ ಸಾರಿಗೆ ವ್ಯವಸ್ಥೆ ರೂಪಿಸಬೇಕಿದೆ ಎಂದು ಹೇಳಿದರು.

ಇವಿ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿಗೂ ಕೇಂದ್ರ ಸರ್ಕಾರ ಉತ್ತೇಜನ ನೀಡುತ್ತಿದೆ. ಅತ್ಯಾಧುನಿಕ, ಸಮಗ್ರವಾದ ಇವಿ ಪೂರಕ ವ್ಯವಸ್ಥೆಯು ಆರ್ಥಿಕ, ಉದ್ಯೋಗ ಹಾಗೂ ಉತ್ಪಾದನೆ ಕ್ಷೇತ್ರಗಳಲ್ಲಿ ಭಾರಿ ಅವಕಾಶಗಳನ್ನು ಸೃಷ್ಟಿಸಲಿದೆ ಎಂದರು.



ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಹಿರಿಯ ಉಪಾಧ್ಯಕ್ಷ ಟಿ.ಸಾಯಿರಾಂ ಪ್ರಸಾದ್, ಉಪಾಧ್ಯಕ್ಷ ಬಿ.ಪಿ.ಶಶಿಧರ್, ಗ್ರೀನ್ ಎನರ್ಜಿ ಸಮಿತಿ ಅಧ್ಯಕ್ಷ ರಮೇಶ್ ಶಿವಣ್ಣ, ಮಾಜಿ ಅಧ್ಯಕ್ಷ ಎಸ್.ಸಂಪತ್ ರಾಮನ್, ಆರ್ ಶಿವಕುಮಾರ್, ಕೆ.ಶಿವಷಣ್ಮುಗಂ, ಎಲ್.ಲಕ್ಷ್ಮಣ ಉಪಸ್ಥಿತರಿದ್ದರು.

ಸೇವಾ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ‘ದೇಶದ ಸೇವಾ ವಲಯದ ಚಟುವಟಿಕೆ ಫೆಬ್ರುವರಿ ತಿಂಗಳಿನಲ್ಲಿ ತುಸು ಇಳಿಕೆ ಆಗಿದೆ’ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಬುಧವಾರ ತಿಳಿಸಿದೆ.

ಸೇವಾ ವಲಯದ ಹೊಸ ಬೇಡಿಕೆಗಳಲ್ಲಿ ಇಳಿಕೆ ಆಗಿರುವುದೇ ವಲಯದ ಚಟುವಟಿಕೆ ನಿಧಾನವಾಗಲು ಕಾರಣ ಎಂದು ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಜನವರಿಯಲ್ಲಿ 58.5 ಆಗಿತ್ತು. ಅದು ಫೆಬ್ರುವರಿಯಲ್ಲಿ 58.1ಕ್ಕೆ ಇಳಿಕೆ ಆಗಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಅದನ್ನು ಬೆಳವಣಿಗೆ ಎಂದು, 50ಕ್ಕಿಂತ ಕೆಳಕ್ಕೆ ಬಂದರೆ ಅದನ್ನು ಕುಸಿತ ಎಂದು ಪರಿಗಣಿಸಲಾಗುತ್ತದೆ.

ಕೆನಡಾ, ಜರ್ಮನಿ, ಚೀನಾ, ಸಿಂಗಪುರ, ಯುಎಇ, ಬ್ರಿಟನ್ ಮತ್ತು ಅಮೆರಿಕ ಸೇರಿದಂತೆ ಜಗತ್ತಿನ ಹಲವು ಭಾಗಗಳಿಂದ ಸೇವಾ ವಲಯವು ಗಳಿಕೆ ಕಂಡಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾರಾಟವು ವಿಸ್ತರಣೆ ಕಂಡಿದೆ ಎಂದು ತಿಳಿಸಿದೆ.



ಅಡಿಗಾಸ್: ಕೈಲಾಸ, ಮಾನಸ ಸರೋವರ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಡಿಗಾಸ್ ಯಾತ್ರಾ’ ಸಂಸ್ಥೆಯು ಕೈಲಾಸ, ಮಾನಸ ಸರೋವರಕ್ಕೆ 10 ದಿನಗಳ ಯಾತ್ರೆಯನ್ನು ಮೇ ತಿಂಗಳಿನಲ್ಲಿ ಆಯೋಜಿಸಿದೆ.

ಬೆಂಗಳೂರಿನಿಂದ ಲಖನೌವರೆಗೆ ವಿಮಾನದಲ್ಲಿ, ಲಖನೌದಿಂದ ನೇಪಾಳದ ಗಂಝ್‌ವರೆಗೆ ರಸ್ತೆ ಮೂಲಕ ಪ್ರಯಾಣ, ಗಂಜ್‌ನಿಂದ ಸೆಮಿಕೋಟ್‌ವರೆಗೆ ವಿಮಾನ ಪ್ರಯಾಣ ಇರಲಿದೆ.

ಅಲ್ಲಿಂದ ಹಿಲ್ಸಾ ಎಂಬಲ್ಲಿಗೆ ಹೆಲಿಕಾಪ್ಟರ್ ಮೂಲಕ ಯಾತ್ರೆ ಸಾಗಲಿದೆ ಎಂದು ಪ್ರಕಟಣೆ ತಿಳಿಸಿದೆ. ಹಿಲ್ಸಾ ಬಿಟ್ಟ ನಂತರ ಪುರಾಂಗ್ ಎಂಬಲ್ಲಿ ಪ್ರವಾಸಿಗರು ವಾಸ್ತವ್ಯ ಹೂಡುತ್ತಾರೆ. ಅಲ್ಲಿನ ಹವಾಮಾನಕ್ಕೆ ಹೊಂದಿಕೊಳ್ಳಲು ಮತ್ತೊಂದು ದಿನ ಅಲ್ಲಿಯೇ ತಂಗಲಾಗುತ್ತದೆ. ನಾಲ್ಕನೇ ದಿನ ಪುರಾಂಗ್‌ನಿಂದ ಮಾನಸ ಸರೋವರಕ್ಕೆ ಪ್ರಯಾಣ ಇರುತ್ತದೆ.

ಅಲ್ಲಿ ಪ್ರವಾಸಿಗರು ಒಂದು ರಾತ್ರಿ ತಂಗುತ್ತಾರೆ. ಮಾನಸ ಸರೋವರದ ಪಕ್ಕದ ರಾಕ್ಷಸ ಸರೋವರ ವೀಕ್ಷಿಸಿದ ಬಳಿಕ ಕೈಲಾಸ ಪರ್ವತದ ಬುಡದಲ್ಲಿರುವ ದಾರ್ಚೆನ್ ಎಂಬಲ್ಲಿಗೆ ತೆರಳಿ ವಾಸ್ತವ್ಯ ಮಾಡಲಾಗುತ್ತದೆ. ಬಳಿಕ ಮೂರು ದಿನಗಳ ಕೈಲಾಸ ಪರ್ವತ ಪರಿಕ್ರಮ ಆರಂಭವಾಗುತ್ತದೆ.

18-70 ವರ್ಷ ವಯೋಮಾನದವರು ಯಾತ್ರೆ ಮಾಡಬಹುದು. ಯಾತ್ರಾರ್ಥಿಗಳು ಪಾಸ್‌ಪೋರ್ಟ್ ಹೊಂದಿರಬೇಕು. ಹೆಚ್ಚಿನ ವಿವರಗಳಿಗೆ 70222 59008, 94494 78944 ದೂರವಾಣಿ ಸಂಖ್ಯೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ನಿರ್ದೇಶಕಿ ಆಶಾ ಅಡಿಗ ತಿಳಿಸಿದ್ದಾರೆ.

ಬಾಗ್ರಾಮ್ ವಾಯುನೆಲೆ ಮೇಲೆ ಪಾಕ್ ದಾಳಿ

ಇಸ್ಲಾಮಾಬಾದ್ (ಪಿಟಿಐ): ಅಫ್ಘಾನಿಸ್ತಾನದ ಪ್ರಮುಖ ಬಾಗ್ರಾಮ್ ವಾಯುನೆಲೆಯನ್ನು ಗುರಿಯಾಗಿಸಿ ಪಾಕಿಸ್ತಾನವು ವೈಮಾನಿಕ ದಾಳಿ ನಡೆಸಿದೆ ಎಂದು ಪಾಕಿಸ್ತಾನದ ಮಾಧ್ಯಮಗಳು ವರದಿ ಮಾಡಿವೆ.

ಪಾಕಿಸ್ತಾನದ ಸರ್ಕಾರಿ ಮಾಧ್ಯಮ ಸಂಸ್ಥೆ ಪಿಟಿವಿ ಈ ಕುರಿತಂತೆ ಮಾಹಿತಿ ನೀಡಿದ್ದು, ‘ದಾಳಿ ವೇಳೆ ವಾಯುನೆಲೆಯಲ್ಲಿನ ಹ್ಯಾಂಗರ್ (ಯುದ್ಧ ವಿಮಾನಗಳನ್ನು ನಿಲ್ಲಿಸುವ ಜಾಗ) ಹಾಗೂ ದಾಸ್ತಾನು ಸಂಗ್ರಹಗಾರವನ್ನು ಧ್ವಂಸಗೊಳಿಸಲಾಗಿದ್ದು, ಅವುಗಳ ಉಪಗ್ರಹ ಚಿತ್ರಗಳು ಕೂಡ ಬಿಡುಗಡೆಯಾಗಿವೆ ಎಂದು ನ್ಯೂಯಾರ್ಕ್‌ ಟೈಮ್ ತಿಳಿಸಿದೆ’ ಎಂದಿದೆ.

ಅಲ್ಲದೇ, ‘ಫೆಬ್ರುವರಿ 26ರಂದು ಅಫ್ಘಾನಿಸ್ತಾನದ ವಿರುದ್ಧ ಪಾಕಿಸ್ತಾನ ಆರಂಭಿಸಿದ್ದ ‘ಗಜಬ್ ಲಿಲ್ ಹಕ್’ ಕಾರ್ಯಾಚರಣೆಯ ಭಾಗವಾಗಿ ಈ ವೈಮಾನಿಕ ದಾಳಿ ನಡೆದಿದೆ. ಇದರ ಜತೆಗೆ ಭೂ ಕಾರ್ಯಾಚರಣೆಯೂ ನಡೆದಿದ್ದು, ಈ ಮೂಲಕ ಅಫ್ಘಾನ್‌ನ ಯಾವುದೇ ಪ್ರದೇಶದಲ್ಲೂ ತಾನು ದಾಳಿ ನಡೆಸಬಲ್ಲೆ ಎಂಬ ಸ್ಪಷ್ಟ ಸಂದೇಶವನ್ನು ಪಾಕಿಸ್ತಾನ ನೀಡಿದೆ ಎಂದು ರಕ್ಷಣಾ ತಜ್ಞರು ತಿಳಿಸಿದ್ದಾರೆ’ ಎಂದೂ ವರದಿ ಮಾಡಿದೆ.

ಪಾಕಿಸ್ತಾನ ಪದೇ ಪದೇ ಎಚ್ಚರಿಕೆ ನೀಡಿದರೂ ಅಫ್ಘಾನಿಸ್ತಾನವು ಗಡಿಯಲ್ಲಿ ಭಯೋತ್ಪಾದನೆಯನ್ನು ಮುಂದುವರಿಸಿತ್ತು. ಅಫ್ಘಾನ್‌ನಲ್ಲಿ ಅಮೆರಿಕ ಸೇನೆ ಬಿಟ್ಟುಹೋಗಿದ್ದ ಶಸ್ತ್ರಾಸ್ತ್ರಗಳನ್ನೂ ತಾಲಿಬಾನಿಗಳು ಭಯೋತ್ಪಾದನೆಗೆ ಬಳಸಿದ್ದರು ಎಂದೂ ಪಿಟಿವಿ ವರದಿಯಲ್ಲಿ ತಿಳಿಸಿದೆ.

ಭೂ ಸೇನೆಯಿಂದಲೂ ದಾಳಿ: ಇನ್ನು ಭೂ ಸೇನಾ ದಾಳಿ ಕುರಿತಂತೆ ಪ್ರತ್ಯೇಕ ಮೂಲಗಳು ಕೂಡ ಮಾಹಿತಿ ನೀಡಿವೆ. ಆ ಪ್ರಕಾರ, ‘ಬಲೂಚಿಸ್ತಾನ ಪ್ರಾಂತ್ಯದ ಗಡಿಯಲ್ಲಿರುವ ಅಫ್ಘಾನ್ ತಾಲಿಬಾನ್ ರಕ್ಷಣಾ ನೆಲೆಗಳನ್ನು ಗುರಿಯಾಗಿಸಿ ಪಾಕ್ ಸೇನಾ ಪಡೆಗಳು ದಾಳಿ ನಡೆಸಿವೆ ಎಂದೂ ತಿಳಿಸಿವೆ.

ಹೋಳಿ ಸಂಭ್ರಮ

ಪಿಟಿಐ ಚಿತ್ರ:



ರಾಜಸ್ಥಾನದ ಬ್ಯಾವರ್‌ನಲ್ಲಿ ಬುಧವಾರ ಹೋಳಿ ಆಚರಣೆ ಸಂದರ್ಭದಲ್ಲಿ ಸಂಭ್ರಮಿಸಿದ ನಾಗರಿಕರು

ಭಾರತೀಯರ ನೆರವಿಗೆ ನಿಯಂತ್ರಣ ಕೊಠಡಿ ಸ್ಥಾಪನೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾ ಮತ್ತು ಕೊಲ್ಲಿ ರಾಷ್ಟ್ರಗಳ ಪರಿಸ್ಥಿತಿ ಬಿಗುಡಾಯಿಸುತ್ತಿದ್ದು, ಅಲ್ಲಿ ಸಿಲುಕಿರುವ ಭಾರತೀಯರಿಗೆ ನೆರವು ನೀಡುವ ಉದ್ದೇಶದಿಂದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಿದೆ.

ಸುಮಾರು ಒಂದು ಕೋಟಿ ಮಂದಿ ಭಾರತೀಯರು ಪಶ್ಚಿಮ ಏಷ್ಯಾದಲ್ಲಿ ನೆಲೆಸಿದ್ದು, ಅವರ ಸುರಕ್ಷತೆಯು ಸರ್ಕಾರಕ್ಕೆ ಪ್ರಮುಖ ಆದ್ಯತೆಯಾಗಿದೆ. ಹೀಗಾಗಿ ಎಂಇಎನಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ ಎಂದು ಸಚಿವಾಲಯ ಹೇಳಿದೆ.

ಜತೆಗೆ ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ 1800118797 (ಟೋಲ್ ಫ್ರೀ ಸಂಖ್ಯೆ) +91 11 2301 2113, +91 11 2301 4104, +91 11 2301 7905 ಈ ನಂಬರ್‌ಗಳ ಮೂಲಕ ನಿಯಂತ್ರಣ ಕೊಠಡಿಯನ್ನು ಸಂಪರ್ಕಿಸಬಹುದು ಎಂದೂ ಮಾಹಿತಿ ನೀಡಿದೆ.

ನೇಪಾಳ: ಇಂದು ಮತದಾನ

ಕಠ್ಮಂಡು (ಪಿಟಿಐ): ನೇಪಾಳ ಸಂಸತ್ತಿನ ಸಾರ್ವತ್ರಿಕ ಚುನಾವಣೆಗೆ ಗುರುವಾರ ಮತದಾನ ನಡೆಯಲಿದ್ದು, ಬುಧವಾರ ಈ ಕುರಿತ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಭ್ರಷ್ಟಾಚಾರ ವಿರೋಧಿಸಿ ನಡೆದಿದ್ದ ಜೆನ್‌–ಝೀ ಪ್ರತಿಭಟನೆಯಿಂದ ಪದಚ್ಯುತ ಪ್ರಧಾನಿ ಕೆ.ಪಿ ಶರ್ಮಾ ಓಲಿ ಅವರ ಸರ್ಕಾರ ಪತನವಾದ 6 ತಿಂಗಳ ಬಳಿಕ ಈ ಚುನಾವಣೆ ನಡೆಯುತ್ತಿದೆ.

ಫಲಿತಾಂಶವು ಶುಕ್ರವಾರ ಹೊರಬೀಳಲಿದೆ. ದೇಶದಲ್ಲಿ 1.90 ಕೋಟಿ ನೋಂದಾಯಿತ ಮತದಾರರಿದ್ದಾರೆ.

ಚುನಾವಣೆಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳು ಪೂರ್ಣಗೊಂಡಿವೆ ಎಂದು ಚುನಾವಣಾ ಆಯುಕ್ತ ರಾಮ್ ಪ್ರಸಾದ್ ಭಂಡಾರಿ ತಿಳಿಸಿದರು.

ಯಾವುದೇ ಭಯವಿಲ್ಲದೇ ಮತ ಚಲಾಯಿಸುವಂತೆ ಪ್ರಧಾನಿ ಸುಶೀಲಾ ಕಾರ್ಕಿ ಅವರು ಜನರಿಗೆ ಕರೆ ನೀಡಿದ್ದಾರೆ.

ನೇಪಾಳ ಸಂಸತ್ತಿನ (ಪ್ರತಿನಿಧಿಗಳ ಸಭೆ) 275 ಸದಸ್ಯರನ್ನು ಮತದಾರರು ಆಯ್ಕೆ ಮಾಡಲಿದ್ದಾರೆ. 165 ಸದಸ್ಯರು ನೇರ ಮತದಾನದ ಮೂಲಕ, 110 ಸದಸ್ಯರು ಅನುಪಾತದ ಆಧಾರದ ಮೇಲೆ ಆಯ್ಕೆಯಾಗಲಿದ್ದಾರೆ.

ಮೊಜ್ತಾಬಾ ಉತ್ತರಾಧಿಕಾರಿ?

ಒಂದನೇ ಪುಟದಿಂದ...

ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಟಿವಿ ಆಯತೊಲ್ಲಾ ಅಲಿ ಖಮೇನಿ (86) ಮೃತಪಟ್ಟಿರುವುದನ್ನು ಮಾರ್ಚ್ 1ರಂದು ಖಚಿತಪಡಿಸಿತ್ತು. ಆದರೆ, ಮೊಜ್ತಾಬಾ ಎಲ್ಲಿದ್ದಾರೆ ಎನ್ನುವುದನ್ನು ಇದುವರೆಗೆ ಬಹಿರಂಗಪಡಿಸಿಲ್ಲ.

ಮುಂದುವರಿದ ದಾಳಿ: ಇರಾನ್ ರಾಜಧಾನಿಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಮತ್ತು ಅಮೆರಿಕದ ಪಡೆಗಳು ಬುಧವಾರ (ಯುದ್ಧದ ಐದನೆಯ ದಿನ) ಭಾರಿ ಪ್ರಮಾಣದಲ್ಲಿ ವೈಮಾನಿಕ ದಾಳಿ ನಡೆಸಿದವು. ಇರಾನ್‌ನ ಭದ್ರತಾ ಪಡೆ, ಅಲ್ಲಿನ ಮುಖಂಡರನ್ನು ಗುರಿಯಾಗಿಸಿ ದಾಳಿ ನಡೆಸಲಾಯಿತು ಎಂದು ಇಸ್ರೇಲ್ ಹೇಳಿಕೊಂಡಿದೆ. ‘ಇಸ್ರೇಲ್ ಮತ್ತು ಕೊಲ್ಲಿ ವಲಯದಾದ್ಯಂತ ಕ್ಷಿಪಣಿ ಮತ್ತು ಡ್ರೋನ್ ದಾಳಿ ಮುಂದುವರಿದಿದೆ’ ಎಂದು ಇರಾನ್ ಹೇಳಿದೆ.

‘ಟೆಹರಾನ್ ಮೇಲೆ ಬುಧವಾರದಿಂದ ವ್ಯಾಪಕ ಪ್ರಮಾಣದಲ್ಲಿ ದಾಳಿಯನ್ನು ಆರಂಭಿಸಿದ್ದೇವೆ, ಕ್ಷಿಪಣಿ ಸಂಗ್ರಹ ಮತ್ತು ತಯಾರಿಕಾ ಘಟಕವನ್ನು ಹೊಡೆದುರುಳಿಸಿದ್ದೇವೆ’ ಎಂದು ಇಸ್ರೇಲ್ ಸೇನೆ ಹೇಳಿದೆ. ಇದರ ಬೆನ್ನಲ್ಲೇ, ಟೆಹರಾನ್‌ನಲ್ಲಿ ಹಲವು ಸ್ಫೋಟಗಳು ವರದಿಯಾಗಿವೆ. ಕಟ್ಟಡಗಳ ನಡುವಿನಿಂದ ದಟ್ಟ ಹೊಗೆ ಮೇಲೇಳುತ್ತಿರುವ ದೃಶ್ಯ ಕಂಡುಬಂದಿದೆ.

‘ಕೊಲ್ಲಿ ರಾಷ್ಟ್ರಗಳ ವಲಯದ ಸೇನಾ ಶಕ್ತಿ ಮತ್ತು ಆರ್ಥಿಕ ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶಪಡಿಸುತ್ತೇವೆ’ ಎಂದು ಇರಾನಿನ ಪ್ಯಾರಾಮಿಲಿಟರಿ ರೆವಲ್ಯೂಷನರಿ ಗಾರ್ಡ್ಸ್ ಎಚ್ಚರಿಕೆ ನೀಡಿದೆ.

ಇರಾನ್ ನೌಕೆ ಮೇಲೆ ಅಮೆರಿಕ ದಾಳಿ: 87 ಶವ ಪತ್ತೆ

ಒಂದನೇ ಪುಟದಿಂದ...

ಅಮೆರಿಕದ ಜಲಾಂತರ್ಗಾಮಿ ಟಾರ್ಪಿಡೊಗಳ ಮೂಲಕ ಇರಾನ್ ನೌಕೆ ಮೇಲೆ ದಾಳಿ ಮಾಡಿ ಮುಳುಗಿಸಿದೆ ಎಂದು ಅಮೆರಿಕದ ರಕ್ಷಣಾ ಸಚಿವ ಪೀಟ್ ಹೆಗ್ಸೆತ್ ತಿಳಿಸಿದ್ದಾರೆ.

‘180 ಜನರಿದ್ದ ನೌಕೆಯು ಮುಳುಗುತ್ತಿರುವ ಬಗ್ಗೆ ನೌಕಾಪಡೆಗೆ ಮಾಹಿತಿ ಸಿಕ್ಕಿತ್ತು. ನಮ್ಮ ನೌಕೆಗಳು ಮತ್ತು ಯುದ್ಧ ವಿಮಾನಗಳ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು’ ಎಂದು ಶ್ರೀಲಂಕಾದ ವಿದೇಶಾಂಗ ಸಚಿವ ವಿಜಿತ ಹೆರತ್ ಅವರು ತಿಳಿಸಿದ್ದಾರೆ.

ಅವಘಡಕ್ಕೀಡಾದ ನೌಕೆಯು ಭಾರತದ ವಿಶಾಖಪಟ್ಟಣದಲ್ಲಿ ನಡೆದ ಸೇನಾ ಸಮರಾಭ್ಯಾಸದಿಂದ ವಾಪಸಾಗುತ್ತಿತ್ತು. ಶ್ರೀಲಂಕಾದ ಸೇನಾ ಪಡೆಯು ಸ್ಥಳಕ್ಕೆ ತೆರಳುವ ವೇಳೆಗಾಗಲೇ ನೌಕೆಯು ಸಂಪೂರ್ಣವಾಗಿ ಮುಳುಗಿತ್ತು.

1,045ಕ್ಕೂ ಹೆಚ್ಚು ಸಾವು

‘ಇರಾನ್ ಮೇಲೆ ಇಸ್ರೇಲ್–ಅಮೆರಿಕ ಜಂಟಿಯಾಗಿ ನಡೆಸುತ್ತಿರುವ ವೈಮಾನಿಕ ದಾಳಿಯಿಂದ ಬುಧವಾರದವರೆಗೆ ಕನಿಷ್ಠ 1,045 ಜನರು ಮೃತಪಟ್ಟಿದ್ದಾರೆ. ಎಲ್ಲ ಮೃತದೇಹಗಳನ್ನು ಗುರುತಿಸಲಾಗಿದ್ದು, ಅಂತ್ಯಕ್ರಿಯೆಗೆ ಸಿದ್ಧತೆ ನಡೆದಿದೆ’ ಎಂದು ಇರಾನ್‌ನ ಹುತಾತ್ಮರು ಮತ್ತು ಮಾಜಿ ಸೈನಿಕರ ವ್ಯವಹಾರಗಳ ಪ್ರತಿಷ್ಠಾನ ಹೇಳಿದೆ.

ಅಂತ್ಯಕ್ರಿಯೆ ಮುಂದೂಡಿಕೆ

ಟೆಹರಾನ್ (ಎಎಫ್‌ಪಿ): ಆಯತೊಲ್ಲಾ ಅಲಿ ಖಮೇನಿ ಅವರ ಅಂತ್ಯಕ್ರಿಯೆಯನ್ನು ಮುಂದೂಡಲಾಗಿದೆ ಎಂದು ಇರಾನ್ ಹೇಳಿದೆ.

ಸರ್ಕಾರಿ ಗೌರವದೊಂದಿಗೆ ಖಮೇನಿ ಅವರ ಅಂತ್ಯಕ್ರಿಯೆಯನ್ನು ಬುಧವಾರ ಸಂಜೆ, ಅವರ ಜನ್ಮಸ್ಥಳವಾದ, ಪವಿತ್ರ ನಗರಿ ಮಶಾದ್‌ನಲ್ಲಿ ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.

‘ಮಹತ್ವದ ಬೆಳವಣಿಗೆಗಳು ನಡೆಯುವ ಸಾಧ್ಯತೆ ಇರುವುದರಿಂದ ಅಂತ್ಯಕ್ರಿಯೆ ಮುಂದೂಡಲಾಗಿದೆ. ಹೊಸ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು’ ಎಂದು ಇಸ್ಲಾಮಿಕ್ ರಿಪಬ್ಲಿಕ್ ಆಫ್ ಇರಾನ್ ಟಿವಿ ವರದಿ ಮಾಡಿದೆ.


ಖಮೇನಿ ಅಂತ್ಯಸಂಸ್ಕಾರಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳು ಮೂರು ದಿನ ನಡೆಯಲಿವೆ.

ಪರಮೋಚ್ಚ ನಾಯಕನ ಆಯ್ಕೆ ಹೇಗೆ?

88 ಸದಸ್ಯ ಬಲದ ಧಾರ್ಮಿಕ ತಜ್ಞರ ಸಮಿತಿಯು, ಇರಾನ್‌ನ ಮುಂದಿನ ಪರಮೋಚ್ಚ ನಾಯಕನನ್ನು ಆಯ್ಕೆ ಮಾಡಲಿದೆ. ಮೊಜ್ತಾಬಾ ಆಯ್ಕೆಯನ್ನು ಈ ಸಮಿತಿಯೇ ಅಂತಿಮಗೊಳಿಸಬೇಕಿದೆ. ಇರಾನ್‌ನ ಸೇನಾ ಆಡಳಿತವು ಪರಮೋಚ್ಚ ನಾಯಕನ ನಿಯಂತ್ರಣದಲ್ಲೇ ಇರುತ್ತದೆ. ಈಗಿನ ಯುದ್ಧದ ಸಂದರ್ಭ ಮತ್ತು ಅಣ್ವಸ್ತ್ರ ಅಭಿವೃದ್ಧಿ- ಬಳಕೆಯಂಥ ಮಹತ್ವದ ವಿಚಾರಗಳನ್ನು ಆಧರಿಸಿ ಧಾರ್ಮಿಕ ತಜ್ಞರ ಸಮಿತಿಯು ಯಾರ ಹೆಸರನ್ನು ಅಂತಿಮಗೊಳಿಸಲಿದೆ ಎನ್ನುವುದು ಇನ್ನಷ್ಟೇ ತಿಳಿಯಬೇಕಿದೆ.

ಇರಾನ್‌ನ ಮೊದಲ ಪರಮೋಚ್ಚ ನಾಯಕ ರೊಹೊಲ್ಲಾ ಖೊಮೇನಿ ಅವರ ಪುತ್ರ ಅಹಮ್ಮದ್ ಖೊಮೇನಿ ಅವರ ಉತ್ತರಾಧಿಕಾರಿಯಾಗಿ ಆಯ್ಕೆಯಾಗಿದ್ದ ಆಯತೊಲ್ಲಾ ಅಲಿ ಖಮೇನಿ 37 ವರ್ಷ ಆಡಳಿತ ನಡೆಸಿದ್ದರು.

ಯುದ್ಧದ ಪರಿಣಾಮ: ಟಾಕ್ಸಿಕ್ ಬಿಡುಗಡೆ ಮುಂದಕ್ಕೆ


ಯಶ್

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಯಶ್ ನಟನೆಯ 'ಟಾಕ್ಸಿಕ್' ಚಿತ್ರ ಮಾರ್ಚ್ 19 ರಂದು ಬಿಡುಗಡೆಯಾಗಬೇಕಿತ್ತು. ಅದಕ್ಕಾಗಿ ಸಿದ್ಧತೆ, ಪ್ರಚಾರ ಎಲ್ಲವೂ ಪ್ರಾರಂಭವಾಗಿತ್ತು. ಆದರೆ, ಕೊಲ್ಲಿ ರಾಷ್ಟ್ರಗಳಲ್ಲಿನ ಯುದ್ಧದ ಕಾರಣದಿಂದ ಚಿತ್ರ ಬಿಡುಗಡೆ ಮುಂದಕ್ಕೆ ಹೋಗಿದೆ. ಇದೇ ಜೂನ್ 4 ರಂದು ಚಿತ್ರವನ್ನು ತೆರೆಗೆ ತರುವುದಾಗಿ ಚಿತ್ರ ನಿರ್ಮಾಣ ಸಂಸ್ಥೆಯಾದ ಕೆವಿಎನ್ ಪ್ರೊಡಕ್ಷನ್ಸ್ ಹೇಳಿದೆ.

'ಟಾಕ್ಸಿಕ್' ಚಿತ್ರವನ್ನು ಕೆವಿಎನ್ ಪ್ರೊಡಕ್ಷನ್ಸ್ ಜೊತೆಗೂಡಿ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಮೂಲಕ ಯಶ್ ಸಹ ನಿರ್ಮಾಣ ಮಾಡಿದ್ದಾರೆ. 'ಈ ಚಿತ್ರವನ್ನು ಜಾಗತಿಕ ಮಟ್ಟದಲ್ಲಿ ಪ್ರೇಕ್ಷಕರನ್ನು ತಲುಪುವ ನಿಟ್ಟಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಮಧ್ಯಪ್ರಾಚ್ಯ ದೇಶಗಳಲ್ಲಿನ ಈಗಿನ ಪರಿಸ್ಥಿತಿ ಜಾಗತಿಕ ಮಟ್ಟದಲ್ಲಿ ಪ್ರೇಕ್ಷಕರನ್ನು ತಲುಪುವ ನಮ್ಮ ಗುರಿಗೆ ವ್ಯತಿರಿಕ್ತವಾಗಿದೆ. ನಮ್ಮ ವಿತರಣೆ ಪಾಲುದಾರರು ಹಾಗೂ ಪ್ರೇಕ್ಷಕರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಚಿತ್ರ ಬಿಡುಗಡೆ ದಿನಾಂಕವನ್ನು ಮುಂದೂಡುತ್ತಿದ್ದೇವೆ' ಎಂದು ಉಭಯ ನಿರ್ಮಾಣ ಸಂಸ್ಥೆಗಳು ತಮ್ಮ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಅಧಿಕೃತವಾಗಿ ಘೋಷಿಸಿವೆ.

ಈ ಚಿತ್ರದ ಕೊಲ್ಲಿ ರಾಷ್ಟ್ರಗಳ ವಿತರಣೆ ಹಕ್ಕನ್ನು ಫಾರ್ಸ್ ಫಿಲ್ಮ್ಸ್ ಬೃಹತ್ ಮೊತ್ತಕ್ಕೆ ಖರೀದಿಸಿದೆ. 'ಸಿನಿಮಾ ಈಗಾಗಲೇ ಹಾಕಿದ ಬಂಡವಾಳದ ಎರಡರಷ್ಟು ಗಳಿಸಿದೆ. ಮೊದಲ ದಿನದ ಮೊದಲ ಪ್ರದರ್ಶನಕ್ಕೇ ಈ ಸಿನಿಮಾ ಚಿತ್ರಮಂದಿರಗಳಿಂದ ಹೊರಬಿದ್ದರೂ ನೂರರಷ್ಟು ಲಾಭ ಖಚಿತ. ಹೀಗಾಗಿ ಬೇರೆ ಯಾವುದೋ ಚಿತ್ರದ ಎದುರು ಬಿಡುಗಡೆಗೊಳ್ಳಲು 'ಟಾಕ್ಸಿಕ್' ತಂಡ ಭಯಪಡುವ ಸ್ಥಿತಿಯಲ್ಲಿ ಇಲ್ಲ. ಚಿತ್ರತಂಡ ದೊಡ್ಡಮಟ್ಟದ ಲಾಭದ ಗುರಿಯಲ್ಲಿದೆ. ಚಿತ್ರದ ನಿರ್ದೇಶಕಿ ಗೀತು ಮೋಹನ್‌ದಾಸ್ ಕೇರಳದವರು. ಜತೆಗೆ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಕೇರಳದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡೇ ಫಾರ್ಸ್ ಸಂಸ್ಥೆ ಬೃಹತ್ ಮೊತ್ತಕ್ಕೆ ವಿತರಣೆ ಹಕ್ಕು ಖರೀದಿಸಿತ್ತು. ಇವೆಲ್ಲ ಅಂಶಗಳನ್ನು ಗಮನಿಸಿದರೆ ಚಿತ್ರ ಬಿಡುಗಡೆ ಮುಂದೂಡಿರುವುದರ ಹಿಂದೆ ಸೂಕ್ತ ಲೆಕ್ಕಾಚಾರವಿದೆ' ಎಂದು ಗಾಂಧಿನಗರದ ಮೂಲಗಳು ತಿಳಿಸಿವೆ.

ಮೂರು ವರ್ಷಗಳ ಹಿಂದೆ ಸೆಟ್ಟೇರಿದ್ದ ಸಿನಿಮಾ, ನಿರ್ಮಾಣ ಸಂಸ್ಥೆಯ ಮೊದಲ ಘೋಷಣೆ ಪ್ರಕಾರ 2025ರ ಏ.10ರಂದು ತೆರೆಗೆ ಬರಬೇಕಿತ್ತು. ಇದೀಗ ಎರಡನೆ ಸಲ ಬಿಡುಗಡೆ ದಿನಾಂಕ ಮುಂದಕ್ಕೆ ಹೋದಂತೆ ಆಗಿದೆ. ಈ ಚಿತ್ರದ ಟ್ರೇಲರ್ ಮಾರ್ಚ್ 8ರಂದು ಬಿಡುಗಡೆಗೊಳ್ಳಬೇಕಿತ್ತು. ಇದಕ್ಕೆ ಎಲ್ಲಾ ಸಿದ್ಧತೆಗಳು ಕೂಡ ನಡೆದಿದ್ದವು. ಆದರೆ, ಇಸ್ರೇಲ್-ಇರಾನ್ ಮಧ್ಯೆ ಸಮರ ನಡೆಯುತ್ತಿರುವುದರಿಂದ ಚಿತ್ರತಂಡ ಪ್ರಚಾರ ಕಾರ್ಯಕ್ಕೂ ಅಲ್ಪವಿರಾಮ ನೀಡಿದೆ.

ಗೋವಾದಲ್ಲಿನ ಡ್ರಗ್ಸ್ ಮಾಫಿಯಾ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ಕಿಯಾರಾ ಅಡ್ವಾಣಿ, ರುಕ್ಮಿಣಿ ವಸಂತ್ ಮೊದಲಾದವರು ನಟಿಸಿದ್ದಾರೆ. ❖

ಬಾಲಿವುಡ್‌ನಲ್ಲಿ ಇಂದ್ರಜಿತ್ ಲಂಕೇಶ್ ಸಿನಿಮಾ


ಇಂದ್ರಜಿತ್ ಲಂಕೇಶ್

ನಿರ್ದೇಶಕ ಇಂದ್ರಜಿತ್ ಲಂಕೇಶ್ 'ಜೈ ಹಿಂದ್ ಜೈ ಸಿಂಧ್' ಎಂಬ ಹಿಂದಿ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಸಿನಿಮಾದ ಬಹುತೇಕ ಚಿತ್ರೀಕರಣ ಮುಗಿದಿದ್ದು, ಚಿತ್ರವನ್ನು ಜೂನ್ ವೇಳೆಗೆ ತೆರೆಗೆ ತರಲು ನಿರ್ಧರಿಸಿದ್ದಾರೆ.

ಚಿತ್ರದ ಕೊನೆಯ ಹಂತದ ಚಿತ್ರೀಕರಣ ಉತ್ತರಾಖಂಡದಲ್ಲಿ ಭರದಿಂದ ಸಾಗಿದೆ. ಸ್ಯಾಮೀಸ್ ಎಂಟರ್‌ಟೇನ್ಮೆಂಟ್ ಸಂಸ್ಥೆಯಡಿ ಸ್ವಾಮಿ ನನ್ವಾನಿ ಈ ಸಿನಿಮಾ ನಿರ್ಮಿಸುತ್ತಿದ್ದಾರೆ. ಚಿತ್ರದಲ್ಲಿ ಮಹೇಶ್ ಮಂಜ್ರೇಕರ್, ವಿಕ್ರಂ ಕೋಚಾರ್, ಜರೀನಾ ವಹಾಬ್, ಜಯಪ್ರದಾ, ಉಪಾಸನಾ ಸಿಂಗ್, ಅಮಿತ್ ಬಹಲ್ ಮುಂತಾದ ಕಲಾವಿದರಿದ್ದಾರೆ. ಇಂದ್ರಜಿತ್ ಲಂಕೇಶ್ ನಾಲ್ವರು ಹೊಸ ಕಲಾವಿದರನ್ನು ಚಿತ್ರರಂಗಕ್ಕೆ ಈ ಸಿನಿಮಾ ಮೂಲಕ ಪರಿಚಯಿಸುತ್ತಿದ್ದಾರೆ.

ಸಿನಿಮಾ ಕುರಿತು ಮಾತನಾಡಿದ ಇಂದ್ರಜಿತ್ ಲಂಕೇಶ್, 'ಇದೊಂದು ಪ್ರೇಮಕಥೆಯಾಗಿದ್ದು, ದೇಶ ವಿಭಜನೆ ಕಥೆ ಪ್ರಮುಖ ವಸ್ತು. ವಿವಿಧತೆಯಲ್ಲಿ ಏಕತೆ ಎಂಬ ವಿಷಯವನ್ನು ಚಿತ್ರದ ಮೂಲಕ ಹೇಳುವ ಪ್ರಯತ್ನ ಮಾಡಿದ್ದೇನೆ. ದೇಶ ವಿಭಜನೆಯಾದಾಗ ಸಿಂಧ್ ಪ್ರಾಂತ್ಯದ ಜನರ ಸ್ಥಿತಿ ಏನಾಗಿತ್ತು ಎನ್ನುವುದನ್ನು ಕಟ್ಟಿಕೊಡಲಾಗಿದೆ' ಎಂದರು. ❖

ಡಿಜಿಟಲ್ ರೂಪದಲ್ಲಿ ಭೀಮಾ ತೀರದಲ್ಲಿ

ಹದಿನಾಲ್ಕು ವರ್ಷಗಳ ಹಿಂದೆ ವೀರ ಫಿಲಂಸ್ ಮೂಲಕ ಅಣಜಿ ನಾಗರಾಜ್ ನಿರ್ಮಿಸಿದ್ದ, ದುನಿಯಾ ವಿಜಯ್ ನಟನೆಯ ಚಿತ್ರ 'ಭೀಮಾ ತೀರದಲ್ಲಿ' ಇದೀಗ ಮರುಬಿಡುಗಡೆಗೆ ಸಜ್ಜಾಗಿದೆ. ಸಿನಿಮಾ ಡಿಜಿಟಲ್ ರೂಪದಲ್ಲಿ ಮಾರ್ಚ್ 6ರಂದು ಪ್ರೇಕ್ಷಕರೆದುರಿಗೆ ಬರಲಿದೆ.

ನಿರ್ದೇಶಕ ಓಂಪ್ರಕಾಶ್ ರಾವ್ ಈ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದರು. ಕನ್ನಡದಲ್ಲಷ್ಟೇ ಅಲ್ಲದೆ ತೆಲುಗು, ತಮಿಳಿನಲ್ಲೂ ಡಬ್ ಮಾಡಿ ರಿಲೀಸ್ ಮಾಡಲು ಚಿತ್ರತಂಡ ನಿರ್ಧರಿಸಿದೆ.

ಮರುಬಿಡುಗಡೆ ಬಗ್ಗೆ ಮಾತನಾಡಿದ ಓಂಪ್ರಕಾಶ್ ರಾವ್, 'ಅಣಜಿ ನಾಗರಾಜ್ ಅವರ ಜತೆ ತುಂಬಾ ಸಿನಿಮಾ ಮಾಡಿದ್ದೇನೆ. ಅದರಲ್ಲಿ 'ಭೀಮಾ ತೀರದಲ್ಲಿ' ಆಗ ತುಂಬಾ ಸದ್ದು ಮಾಡಿ ಯಶಸ್ವಿ ಪ್ರದರ್ಶನ ಕಂಡಿತ್ತು. ಆ ಚಿತ್ರದ ಹಿಂದಿರುವ ಕಥೆಗಳು ತುಂಬಾ ಇವೆ. ಇದೀಗ ನೆಗೆಟಿವ್‌ನಲ್ಲಿದ್ದ ಚಿತ್ರವನ್ನು ಕೊಂಚ ತೆರೆ ಅವಧಿ ಇಳಿಸಿ ಡಿಜಿಟಲ್ ರೂಪಕ್ಕೆ ತಂದಿದ್ದೇವೆ' ಎಂದರು.

ಅಣಜಿ ನಾಗರಾಜ್ ಮಾತನಾಡಿ, 'ರೀಲ್‌ನಲ್ಲಿನ ಗುಣಮಟ್ಟವನ್ನು ಡಿಜಿಟಲ್‌ನಲ್ಲಿ ಮಾಡಲು ಸಾಧ್ಯವಿಲ್ಲ. 14 ವರ್ಷಗಳಾದರೂ ನೋಡುವಾಗ ಈಗಷ್ಟೇ ಮಾಡಿದ ಚಿತ್ರ ಅನಿಸುತ್ತಿದೆ. ಆಗ ಐದಾರು ಕೋಟಿಯಲ್ಲಿ ಸಿನಿಮಾ ನಿರ್ಮಾಣವಾಗಿತ್ತು. ಕನ್ನಡ ಸೇರಿದಂತೆ ತೆಲುಗಿನಲ್ಲಿ 'ಕಡಪ' ಎಂಬ ಹೆಸರಿನಲ್ಲಿ ಚಿತ್ರವು 150ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಮರುಬಿಡುಗಡೆ ಆಗಲಿದೆ. ಮೊದಲಿಗೆ ಕನ್ನಡ ಮತ್ತು ತೆಲುಗಿನಲ್ಲಿ, ಎರಡು ವಾರ ಬಿಟ್ಟು ಬೇರೆ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ' ಎಂದರು. ❖


ದುನಿಯಾ ವಿಜಯ್

ಮಕ್ಕಳ ಲೋಕದ ಪಂಚ ರತ್ನಗಳು



ಮಕ್ಕಳ ಕುರಿತಾದ ಕಥೆಯನ್ನು ಹೊಂದಿರುವ 'ಪಂಚ ರತ್ನಗಳು' ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಗೌತಮ್.ಆರ್ ನಿರ್ದೇಶನದ ಚಿತ್ರಕ್ಕೆ ಜಿ.ಆರ್. ನಾರಾಯಣ ಗೌಡ ಬಂಡವಾಳ ಹೂಡಿದ್ದಾರೆ.

'ಇಂದಿನ ಸಮಾಜದ ಕೆಲ ದೈನಂದಿನ ಸಮಸ್ಯೆಗಳತ್ತ ದೊಡ್ಡವರು ಗಮನಹರಿಸುವುದಿಲ್ಲ. ಇದನ್ನು ಅರಿತ ಐದು ಮಕ್ಕಳು ತಾವೇ ಮುಂದಾಗಿ ಏಕೆ ಸಮಸ್ಯೆ ಪರಿಹರಿಸಬಾರದು ಎಂದು ಹೊರಡುತ್ತಾರೆ. ಆ ಪಯಣದಲ್ಲಿ ಏನೆಲ್ಲ ಆಗುತ್ತದೆ ಎಂಬುದು ಚಿತ್ರದ ಕಥೆ. ಪ್ರಕೃತಿಯ ಅಂಶಗಳಾದ ಭೂಮಿ, ನೀರು, ಬೆಂಕಿ, ಗಾಳಿ, ಆಕಾಶ ಇವುಗಳ ಪ್ರತಿರೂಪವಾಗಿ ಚಿತ್ರದಲ್ಲಿ ಮಕ್ಕಳು ಕಾಣಿಸಿಕೊಳ್ಳುತ್ತಾರೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕ.

ಮಾಸ್ಟರ್ ಪ್ರಥಮ್, ಯಶಸ್, ವಿಹಾನ್, ತನ್ವಿ, ಆಧ್ಯಾ ಪ್ರಥಮ್, ಬಿಂದೂ ಆಚಾರ್ಯ, ಆನಂದ್ ನಗರ್ಕರ್ ಮುಂತಾದವರು ಅಭಿನಯಿಸಿದ್ದಾರೆ. ಪ್ರಣವ್ ಸಂಗೀತ, ಅನಿಲ್ ಕಶ್ಯಪ್ ಛಾಯಚಿತ್ರಗ್ರಹಣ, ಅಭಿಷೇಕ್ ಸಂಕಲನ ಚಿತ್ರಕ್ಕಿದೆ. ❖

ಬಿಹಾರ ಸಿ.ಎಂ ನಿತೀಶ್ ರಾಜ್ಯಸಭೆಗೆ?


ಬಿಜೆಪಿಗೆ ಸಿಗುವುದೇ ಮುಖ್ಯಮಂತ್ರಿ ಪಟ್ಟ ಡಿಸಿಎಂ ಸ್ಥಾನಕ್ಕೆ ಏರುವರೇ ನಿತೀಶ್ ಪುತ್ರ

ಪ್ರಜಾವಾಣಿ ವಾರ್ತೆ/ ಪಿಟಿಐ

ಪಟ್ನಾ: ಬಿಹಾರದಲ್ಲಿ 2005ರಿಂದ ಅಧಿಕಾರದಲ್ಲಿರುವ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ರಾಜ್ಯಸಭೆ ಪ್ರವೇಶಿಸುವ ಸಾಧ್ಯತೆಗಳಿವೆ ಎಂಬ ವದಂತಿ ಹಬ್ಬಿದ್ದು, ಬಿಹಾರದ ರಾಜಕೀಯ ಚಿತ್ರಣ ಬದಲಾಗಬಹುದು ಎಂಬ ಚರ್ಚೆಗಳು ನಡೆಯುತ್ತಿವೆ.

ಸುದೀರ್ಘ ಅವಧಿಯಿಂದ ಮುಖ್ಯಮಂತ್ರಿ ಆಗಿರುವ ನಿತೀಶ್ ಅವರು ರಾಜ್ಯಸಭೆ ಪ್ರವೇಶಿಸುವ ಮೂಲಕ ರಾಷ್ಟ್ರ ರಾಜಕೀಯಕ್ಕೆ ತೆರಳಿದರೆ, ರಾಜ್ಯದಲ್ಲಿ ಹೊಸ ಮುಖ್ಯಮಂತ್ರಿ ಆಯ್ಕೆಗೆ ದಾರಿ ಸುಗಮವಾಗಲಿದೆ.

ಆದರೆ, ಈ ಬೆಳವಣಿಗೆ ಬಗ್ಗೆ ಅಧಿಕೃತವಾಗಿ ಯಾವುದೇ ಘೋಷಣೆ ಆಗಿಲ್ಲ. ರಾಜ್ಯಸಭೆಗೆ ದ್ವೈವಾರ್ಷಿಕ ಚುನಾವಣೆ ಇದೇ 16ರಂದು ನಡೆಯಲಿದ್ದು, ಬಿಹಾರದ ಮುಖ್ಯಮಂತ್ರಿ ಇದೇ 5ರಂದು (ಗುರುವಾರ) ನಾಮಪತ್ರ ಸಲ್ಲಿಸುವ ಸಾಧ್ಯತೆಯಿದೆ ಎಂದು ಜೆಡಿಯು ಮೂಲಗಳು ತಿಳಿಸಿವೆ.


ನಿತೀಶ್ ಕುಮಾರ್

ಸಿ.ಎಂ ಸ್ಥಾನದ ಮೇಲೆ ಬಿಜೆಪಿ ಕಣ್ಣು: ಒಂದು ವೇಳೆ ನಿತೀಶ್ ಕುಮಾರ್ ಅವರು ಸಂಸತ್ತಿನ ಮೇಲ್ಮನೆಗೆ ಆಯ್ಕೆಯಾದರೆ, ರಾಜ್ಯದ ಮುಖ್ಯಮಂತ್ರಿ ಸ್ಥಾನ ತನಗೆ ದೊರೆಯುತ್ತದೆ ಎಂಬ ನಿರೀಕ್ಷೆಯಲ್ಲಿ ಬಿಜೆಪಿಯಿದೆ. ನಿತೀಶ್ ಅವರ ಮಗ ನಿಶಾಂತ್ ಕುಮಾರ್ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ದೊರೆಯಬಹುದು ಎಂಬ ಊಹಾಪೋಹ ಹಬ್ಬಿದೆ.

ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಝಾ ಅವರು ನವದೆಹಲಿಯಿಂದ ಬುಧವಾರ ಹಿಂದಿರುಗಿದ ಬಳಿಕ ಈ ಕುರಿತು ನಿತೀಶ್ ಅವರ ಜತೆ ಸಭೆ ನಡೆಸಿದ್ದಾರೆ. ಈ ವೇಳೆ ಕೇಂದ್ರ ಸಚಿವ ಮತ್ತು ನಿತೀಶ್ ಅವರ ಆಪ್ತ ಲಲ್ಲನ್ ಸಿಂಗ್ ಸಹ ಇದ್ದರು ಎನ್ನಲಾಗುತ್ತಿದೆ. ಈ ಸಭೆಯ ಬಳಿಕ ನಿತೀಶ್ ಅವರು ರಾಜ್ಯಸಭಾ ಚುನಾವಣೆಗೆ ಗುರುವಾರ ನಾಮಪತ್ರ ಸಲ್ಲಿಸಬಹುದು ಎಂಬ ಚರ್ಚೆ ತೀವ್ರವಾಗಿ ನಡೆಯುತ್ತಿದೆ.

ಈ ರೀತಿ ರಾಜಕೀಯ ಬದಲಾವಣೆಗಳು ಸಂಭವಿಸಿದರೆ, ರಾಜ್ಯದ 243 ಸದಸ್ಯ ಬಲದ ಸದನದಲ್ಲಿ ಅತಿದೊಡ್ಡ ಪಕ್ಷವಾದ ಬಿಜೆಪಿ ಮುಖ್ಯಮಂತ್ರಿ ಸ್ಥಾನ ಪಡೆಯುತ್ತದೆ. ನಿತೀಶ್ ಪುತ್ರ, ಎಂಜಿನಿಯರಿಂಗ್ ಪದವೀಧರ ನಿಶಾಂತ್ ಅವರನ್ನು ಡಿಸಿಎಂ ಆಗಿ ನೇಮಿಸುವ ಸಾಧ್ಯತೆಯಿದೆ ಎಂದು ಹೆಸರು ಹೇಳಲು ಇಚ್ಛಿಸದ ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ.

ಬಿಹಾರ ವಿಧಾನಸಭೆಯಲ್ಲಿ ಎನ್‌ಡಿಎ 202 ಶಾಸಕರನ್ನು ಹೊಂದಿದೆ. ರಾಜ್ಯದಿಂದ ರಾಜ್ಯಸಭೆಯ ಐದು ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು, ಎನ್‌ಡಿಎ ಸುಲಭವಾಗಿ ನಾಲ್ಕು ಸ್ಥಾನಗಳನ್ನು ಗೆಲ್ಲಬಹುದು (ಒಂದು ಸ್ಥಾನದ ಗೆಲುವಿಗೆ 41 ಮತಗಳು ಅಗತ್ಯ). ಐದನೇ ಸ್ಥಾನಕ್ಕೆ 3 ಸೀಟುಗಳ ಕೊರತೆಯಿದೆ. ರಾಜ್ಯಸಭಾ ಸ್ಥಾನಗಳಿಗೆ ನಾಮಪತ್ರ ಸಲ್ಲಿಕೆಯು ಗುರುವಾರ ಮುಕ್ತಾಯವಾಗಲಿದೆ. ಬಿಜೆಪಿ ಈಗಾಗಲೇ ತನ್ನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಸೇರಿದಂತೆ ಇಬ್ಬರು ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. ಆದರೆ ಜೆಡಿಯು ಇಲ್ಲಿಯವರೆಗೆ ತನ್ನ ಅಭ್ಯರ್ಥಿಗಳ ಹೆಸರು ಪ್ರಕಟಿಸಿಲ್ಲ.

ಇದು 'ಹೋಳಿ ತಮಾಷೆ'

ಈ ರಾಜಕೀಯ ಬೆಳವಣಿಗೆಯನ್ನು ತಳ್ಳಿಹಾಕಿರುವ ಬಿಜೆಪಿಯ ಹಿರಿಯ ನಾಯಕ ಮತ್ತು ಕೇಂದ್ರ ಸಚಿವ ಗಿರಿರಾಜ್ ಸಿಂಗ್, 'ಹೋಳಿ ಹಬ್ಬದ ಸಂದರ್ಭದಲ್ಲಿ ತಮಾಷೆಗಾಗಿ ಈ ರೀತಿಯ ವದಂತಿ ಹಬ್ಬಿರಬಹುದು. ನಿತೀಶ್ ಕುಮಾರ್ ಅವರೇ ರಾಜ್ಯದ ಮುಖ್ಯಮಂತ್ರಿ' ಎಂದು ಪ್ರತಿಕ್ರಿಯಿಸಿದ್ದಾರೆ.

ರೈಲ್ವೆ ಕಚೇರಿ ಪ್ರವೇಶ ದ್ವಾರಕ್ಕೆ 'ಕರ್ತವ್ಯ ದ್ವಾರ' ನಾಮಕರಣ

ವಿವಾದದ ಬಳಿಕ ಹಿಂದಿ ಫಲಕ ತೆರವು

ಪ್ರಜಾವಾಣಿ ವಾರ್ತೆ

ಚೆನ್ನೈ: ದಕ್ಷಿಣ ರೈಲ್ವೆ ವಿಭಾಗವು ತಿರುಚಿರಾಪಳ್ಳಿ ವಿಭಾಗೀಯ ಕಚೇರಿಯ ಹೊಸ ಪ್ರವೇಶ ದ್ವಾರದ ಕಮಾನಿಗೆ 'ಕರ್ತವ್ಯ ದ್ವಾರ' ಎಂದು ಹೆಸರಿಡುವ ವಿಚಾರ ವಿವಾದಕ್ಕೆ ತಿರುಗಿ, ಪ್ರತಿಭಟನೆ ಸ್ವರೂಪ ಪಡೆಯುತ್ತಿದ್ದಂತೆ, ರೈಲ್ವೆ ಇಲಾಖೆ ಹಿಂದಿ, ತಮಿಳು ಮತ್ತು ಇಂಗ್ಲಿಷ್‌ನಲ್ಲಿ ಬರೆಸಿದ್ದ ಪದಗಳನ್ನು ತೆಗೆದಿದೆ.

ಪ್ರವೇಶ ದ್ವಾರದ ಕಮಾನಿಗೆ 'ಕರ್ತವ್ಯ ದ್ವಾರ' ಎಂದು ಹೆಸರು ಬರೆಸುತ್ತಿದ್ದಂತೆ, ಮುಖ್ಯಮಂತ್ರಿ ಎಂ. ಕೆ. ಸ್ಟಾಲಿನ್ ಸೇರಿದಂತೆ ಹಲವು ರಾಜಕೀಯ ನಾಯಕರು 'ಹಿಂದಿ ಹೇರಿಕೆ' ಎಂದು ಟೀಕಿಸಿದ್ದರು.

ಡಿಎಂಕೆ ಕಾರ್ಯಕರ್ತರು ಹಿಂದಿ ಹೇರಿಕೆಯ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದರು.

ಕೇಂದ್ರದ ವಿರುದ್ಧ ಆಕ್ರೋಶ: 'ಬಿಜೆಪಿ ಹಿಂದಿ ಹೆಸರುಗಳನ್ನು ಇಂಗ್ಲಿಷ್ ಮತ್ತು ತಮಿಳಿನಲ್ಲಿ ಬರೆಯುವ ಮೂಲಕ, ಹಿಂದಿ ಹೇರಿಕೆಯ ಎಲ್ಲ ಮಿತಿಗಳನ್ನೂ ಮೀರುತ್ತಿದೆ' ಎಂದು ಎಂ.ಕೆ. ಸ್ಟಾಲಿನ್ ಆರೋಪಿಸಿದರು.

'ಬಿಜೆಪಿಯ ಈ ನೀತಿ ಮೇಲ್ನೋಟಕ್ಕೆ ಒಂದು ಭಾಷೆ, ಮೂರು ಲಿಪಿಗಳಂತೆ ಕಾಣುತ್ತದೆ. ಅವರು ಈಗಾಗಲೇ ನೌಕರರ ಭವಿಷ್ಯ ನಿಧಿ (ಇಪಿಎಫ್‌ಒ) ಕಚೇರಿಯನ್ನು ಭವಿಷ್ಯ ನಿಧಿ ಭವನ ಎಂದು ಹೆಸರಿಸಿದ್ದಾರೆ. ಹೊಸ ಅಪರಾಧ ಕಾನೂನುಗಳಿಗೂ ಇಂಗ್ಲಿಷ್ ಲಿಪಿಯಲ್ಲಿ ಬರೆಯಲಾದ ಸಂಸ್ಕೃತ ಹೆಸರುಗಳನ್ನು ಇಟ್ಟಿದ್ದಾರೆ. ಕೇಂದ್ರ ಜಲಸಂಪನ್ಮೂಲ ಸಚಿವಾಲಯವನ್ನು 'ಜಲಶಕ್ತಿ' ಎಂದು ಮರುನಾಮಕರಣ ಮಾಡಲಾಗಿದೆ' ಎಂದು ಸ್ಟಾಲಿನ್ ಹಿಂದಿನ ಬೆಳವಣಿಗೆಗಳನ್ನು ಉಲ್ಲೇಖಿಸಿದರು.

'ತಮಿಳರ ಸ್ವಾಭಿಮಾನವನ್ನು ಕೆರಳಿಸುವ ಇವರಿಗೆ ಸರಿಯಾದ ಪಾಠ ಕಲಿಸಬೇಕು. ತಮಿಳು ಮತ್ತು ಇಂಗ್ಲಿಷ್ ಹೆಸರುಗಳಲ್ಲಿಯೂ ಹಿಂದಿ ಹೇರುವ ಈ ಪ್ರಯತ್ನವನ್ನು ಅವರು ತಕ್ಷಣ ಕೈಬಿಟ್ಟು ಸರಿಯಾದ ತಮಿಳು ಹೆಸರುಗಳನ್ನು ಬರೆಸಬೇಕು. ಇಲ್ಲದಿದ್ದರೆ, ಕೇಂದ್ರ ಸರ್ಕಾರ ತಮಿಳರ ಕೋಪದ ಬಿಸಿ ಅನುಭವಿಸಬೇಕಾಗುತ್ತದೆ' ಎಂದಿದ್ದಾರೆ.

ತಮಿಳುನಾಡಿನ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಎಡಪ್ಪಾಡಿ ಕೆ ಪಳನಿಸ್ವಾಮಿ ಕೂಡ ಕೇಂದ್ರದ ಈ ಕ್ರಮ ಖಂಡಿಸಿದ್ದಾರೆ. ಹಿಂದಿ ಹೆಸರುಗಳನ್ನು ತೆಗೆದುಹಾಕಲು ಒತ್ತಾಯಿಸಿದ್ದಾರೆ.

'ಕೈ'ಗೆ 28 ಕ್ಷೇತ್ರ, 1 ರಾಜ್ಯಸಭಾ ಸ್ಥಾನ ನೀಡುವ ಸೂತ್ರ

ಡಿಎಂಕೆ, ಕಾಂಗ್ರೆಸ್ ಸೀಟು ಹಂಚಿಕೆ ಅಂತಿಮ

ಪ್ರಜಾವಾಣಿ ವಾರ್ತೆ

ಚೆನ್ನೈ: ಹಲವು ಸುತ್ತಿನ ಮಾತುಕತೆ, ಚರ್ಚೆ ಬಳಿಕ ಆಡಳಿತಾರೂಢ ಡಿಎಂಕೆ ಹಾಗೂ ಮಿತ್ರ ಪಕ್ಷ ಕಾಂಗ್ರೆಸ್ ಸೀಟು ಹಂಚಿಕೆಯನ್ನು ಬುಧವಾರ ಅಂತಿಮಗೊಳಿಸಿವೆ.

ಕಾಂಗ್ರೆಸ್ ಪಕ್ಷಕ್ಕೆ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ 28 ಸ್ಥಾನ ಹಾಗೂ ರಾಜ್ಯಸಭೆ ಚುನಾವಣೆಗೆ ಒಂದು ಸ್ಥಾನವನ್ನು ಡಿಎಂಕೆ ಬಿಟ್ಟುಕೊಟ್ಟಿದೆ. ಈ ಮೂಲಕ, ಉಭಯ ಪಕ್ಷಗಳು ಮೈತ್ರಿಗೆ ಅಧಿಕೃತ ಮುದ್ರೆ ಒತ್ತಿದಂತಾಗಿದೆ.

ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡನಕರ್ ಸಮ್ಮುಖದಲ್ಲಿ, ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಹಾಗೂ ತಮಿಳುನಾಡು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಸೆಲ್ವ ಪೆರುಂತಗೈ ಅವರು ಸೀಟು ಹಂಚಿಕೆ ಕುರಿತ ಒಪ್ಪಂದಕ್ಕೆ ಸಹಿ ಹಾಕಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸೆಲ್ವ ಪೆರುಂತಗೈ, 'ಸೀಟು ಹಂಚಿಕೆಗೆ ಸಂಬಂಧಿಸಿ ಒಪ್ಪಂದಕ್ಕೆ ಸಹಿ ಹಾಕಿರುವುದು ಖುಷಿ ತಂದಿದೆ.

ಸೀಟು ಹಂಚಿಕೆ ವಿಚಾರವಾಗಿ ಡಿಎಂಕೆ ಹಾಗೂ ಕಾಂಗ್ರೆಸ್ ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ಕೈಗೊಂಡಿವೆ' ಎಂದರು.

ಪಕ್ಷದ ಜೊತೆ ಮೈತ್ರಿ ಮಾಡಿಕೊಳ್ಳುವ ಕುರಿತಂತೆ ಚೋಡನಕರ್ ಇತ್ತೀಚೆಗೆ ಸಾರ್ವಜನಿಕವಾಗಿ ನೀಡಿದ್ದ ಹೇಳಿಕೆಗಳು ಡಿಎಂಕೆ ಕೆರಳುವಂತೆ ಮಾಡಿದ್ದವು.

'ಟಿವಿಕೆ ನಾಯಕ ಹಾಗೂ ನಟ ವಿಜಯ್ ಅವರಿಗೆ ಕಾಂಗ್ರೆಸ್‌ನ ಶಕ್ತಿ ಏನು ಎಂಬುದು ಮನವರಿಕೆಯಾಗಿದೆ' ಎಂದು ಚೋಡನಕರ್ ಭಾನುವಾರ ಹೇಳಿದ್ದರು. ಇದಕ್ಕೆ ಡಿಎಂಕೆ ಆಕ್ಷೇಪಿಸಿತ್ತು. ಈ ಕಾರಣಕ್ಕೆ, ಸೀಟು ಹಂಚಿಕೆ ಕುರಿತಂತೆ ನಡೆದ ಅಂತಿಮ ಸುತ್ತಿನ ಮಾತುಕತೆಯಿಂದ ಚೋಡನಕರ್ ಅವರನ್ನು ಹೊರಗಿಡಲಾಗಿತ್ತು.

ಚೋಡನಕರ್ ಹೇಳಿಕೆಯಿಂದ ಸಿಟ್ಟಾಗಿದ್ದ ಡಿಎಂಕೆ, ಸೀಟು ಹಂಚಿಕೆ ಕುರಿತ ಮಾತುಕತೆಯನ್ನು ಸ್ಥಗಿತಗೊಳಿಸಿತ್ತು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಹಿರಿಯ ನಾಯಕಿ ಸೋನಿಯಾ ಗಾಂಧಿ ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸುವ ಪ್ರಯತ್ನ ಮಾಡಿದ್ದರು.

ಡಿಎಂಕೆ ಜೊತೆಗಿನ 22 ವರ್ಷಗಳ ಮೈತ್ರಿಯನ್ನು ಉಳಿಸಿಕೊಳ್ಳಬೇಕು ಎಂಬ ಉದ್ದೇಶದಿಂದ, ಡಿಎಂಕೆ ಜೊತೆ ಸಂಧಾನ ನಡೆಸುವ ಜವಾಬ್ದಾರಿಯನ್ನು ಪಕ್ಷದ ಹಿರಿಯ ನಾಯಕ ಪಿ.ಚಿದಂಬರಂ ಅವರಿಗೆ ನೀಡಿದ್ದರು.

ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಮಂಗಳವಾರ ಭೇಟಿ ಮಾಡಿದ್ದ ಚಿದಂಬರಂ, ಕೊನೆಗೂ ಪಕ್ಷಕ್ಕೆ 28 ಸೀಟು ಹಂಚಿಕೆಯಾಗುವಂತೆ ಮಾಡುವಲ್ಲಿ ಯಶಸ್ವಿಯಾದರು.

ರಾಹುಲ್‌ಗೆ ಅಸಮಾಧಾನ?

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಪಕ್ಷಕ್ಕೆ 28 ಸೀಟುಗಳನ್ನು ಹಂಚಿಕೆ ಮಾಡಿರುವುದಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅಸಮಾಧಾನಗೊಂಡಿದ್ದಾರೆ ಎಂದು ಹೇಳಲಾಗಿದೆ.

2016ರಲ್ಲಿ ಪಕ್ಷಕ್ಕೆ 41 ಸೀಟುಗಳನ್ನು ಹಂಚಿಕೆ ಮಾಡಲಾಗಿತ್ತು. ಈಗಲೂ ಅಷ್ಟೇ ಸೀಟುಗಳು ಹಂಚಿಕೆಯಾಗಬೇಕು ಎಂಬ ಕಾಂಗ್ರೆಸ್ ಮನವಿಗೆ ಡಿಎಂಕೆ ಸ್ಪಂದಿಸಿಲ್ಲ ಎಂಬುದೇ ರಾಹುಲ್ ಅಸಮಾಧಾನಕ್ಕೆ ಕಾರಣ ಎನ್ನಲಾಗುತ್ತಿದೆ.

ಮೀನಾಕ್ಷಿ ಕಣಕ್ಕೆ?

ತಮಿಳುನಾಡಿನಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಮೀನಾಕ್ಷಿ ನಟರಾಜನ್ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ಮುಖಂಡರು ಚಿಂತನೆ ನಡೆಸುತ್ತಿ ದ್ದಾರೆ ಎಂದು ಮೂಲಗಳು ಹೇಳಿವೆ.

'ಈ ಚುನಾವಣೆ ನನ್ನ ಪಾಲಿಗೆ ಭಾವಸಾಗರ'

ತಂಜಾವೂರು (ತಮಿಳುನಾಡು) (ಪಿಟಿಐ): 'ಮುಂಬರುವ ವಿಧಾನಸಭೆ ಚುನಾವಣೆ ಇತರರ ಪಾಲಿಗೆ ಸಾಧಾರಣ ಚುನಾವಣೆ. ಆದರೆ, ನನಗೆ ಇದು ಭಾವನೆಗಳ ಸಾಗರದಂತೆ' ಎಂದು ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಬುಧವಾರ ಹೇಳಿದರು.

ಇಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ತಮಗೆ ಒಂದು ಬಾರಿ ಅಧಿಕಾರ ನೀಡುವಂತೆ ತಮಿಳುನಾಡು ಮತದಾರರಿಗೆ ಮನವಿ ಮಾಡಿದ್ದಾರೆ. ಆಡಳಿತಾರೂಢ ಡಿಎಂಕೆ ಹಾಗೂ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಸತತ ಎರಡನೇ ಬಾರಿಗೆ ಸರ್ಕಾರ ರಚಿಸುವ ಕನಸನ್ನು ಸ್ಟಾಲಿನ್ ಕಾಣುತ್ತಿದ್ದಾರೆ. ಆದರೆ, ಅವರ ತಂದೆಯಿಂದಲೂ ಈ ಕನಸನ್ನು ನನಸಾಗಿಸಲು ಸಾಧ್ಯವಾಗಿರಲಿಲ್ಲ. ಡಿಎಂಕೆ ಆಡಳಿತದಲ್ಲಿ ರಾಜ್ಯದ ನೈಸರ್ಗಿಕ ಸಂಪತ್ತು ಬರಿದಾಗುತ್ತಿದ್ದು, ಶೀಘ್ರವೇ ದಿವಾಳಿಯಾಗುವ ಹಂತಕ್ಕೆ ತಲುಪುತ್ತಿದೆ.' ಎಂದೂ ಕಳವಳ ವ್ಯಕ್ತಪಡಿಸಿದ್ದಾರೆ.


ವಿಜಯ್

ಹಸಿರು ಶಾಲು ಧರಿಸಿದ್ದ ವಿಜಯ್: ಸಾಮಾನ್ಯವಾಗಿ ಬಿಳಿ ಬಣ್ಣದ ಶರ್ಟ್, ಕಂದು ಬಣ್ಣದ ಪ್ಯಾಂಟ್ ಧರಿಸಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವ ವಿಜಯ್, ಬುಧವಾರ ಹಸಿರು ಬಣ್ಣದ ಶಾಲು ಕೂಡ ಧರಿಸಿದ್ದರು. ಈ ಮೂಲಕ ತಮಿಳುನಾಡಿನ ಅನ್ನದ ಬಟ್ಟಲು ಎಂದೇ ಕರೆಸಿಕೊಳ್ಳುವ ಕಾವೇರಿ ತೀರದ ಪ್ರದೇಶದ ರೈತರ ಪರವಾಗಿ ತಾವು ಇರುವುದಾಗಿ ಬಿಂಬಿಸಿಕೊಂಡಿದ್ದಾರೆ.

ಭಾರತಕ್ಕೆ ಬ್ರೂಕ್ಸ್ ಬಳಗದ ಸವಾಲು

ಎರಡನೇ ಸೆಮಿಫೈನಲ್ ಇಂದು: ಸೂರ್ಯ ಪಡೆ–ಇಂಗ್ಲೆಂಡ್ ಮುಖಾಮುಖಿ

ಬಲಾಬಲ (ಟಿ20 ವಿಶ್ವಕಪ್)

ಒಟ್ಟು ಪಂದ್ಯ	5
ಭಾರತ ಗೆಲುವು	3
ಇಂಗ್ಲೆಂಡ್ ಜಯ	2



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪಿಟಿಐ ಚಿತ್ರ

ಸತತ ಮೂರನೇ ಸೆಮಿಫೈನಲ್

ಭಾರತ ಮತ್ತು ಇಂಗ್ಲೆಂಡ್ ತಂಡಗಳು ಸತತ ಮೂರನೇ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಮುಖಾಮುಖಿಯಾಗುತ್ತಿವೆ.

2022ರ ಟೂರ್ನಿಯ ನಾಲ್ಕರ ಘಟ್ಟದಲ್ಲಿ ಇಂಗ್ಲೆಂಡ್ ತಂಡವು ಭಾರತಕ್ಕೆ ಸೋಲುಣಿಸಿತ್ತು. 2024ರಲ್ಲಿ ಗಯಾನದಲ್ಲಿ ನಡೆದಿದ್ದ ಸೆಮಿಫೈನಲ್‌ನಲ್ಲಿ ಭಾರತ ತಂಡವು ಮುಯ್ಯಿ ತೀರಿಸಿಕೊಂಡಿತ್ತು. ಆ ವರ್ಷ ಚಾಂಪಿಯನ್ ಕೂಡ ಆಗಿತ್ತು.



ಇಂಗ್ಲೆಂಡ್ ನಾಯಕ ಹ್ಯಾರಿ ಬ್ರೂಕ್ (ಎಡ) ಹಾಗೂ ಆಲ್‌ರೌಂಡರ್ ವಿಲ್ ಜ್ಯಾಕ್ಸ್

ಮುಂಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡದ ಸೆಮಿಫೈನಲ್ ಪ್ರವೇಶದ ಹಾದಿಯು ಸುಗಮವಾಗಿರಲಿಲ್ಲ. ಏಳು, ಬೀಳುಗಳ ದಾರಿಯಲ್ಲಿ ಕಷ್ಟಪಟ್ಟು ಈ ಹಂತಕ್ಕೆ ಬಂದು ನಿಂತಿದೆ.

ವಾಂಖೆಡೆ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ ಸ್ಪಿನ್ ದಾಳಿಯನ್ನು ಎದುರಿಸುವ ಸವಾಲು ಭಾರತದ ಮುಂದಿದೆ. ಹಾಲಿ ಚಾಂಪಿಯನ್ ಮತ್ತು ಆತಿಥೇಯ ಭಾರತವು ಟೂರ್ನಿಯ ಆರಂಭದಿಂದಲೂ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿದೆ. ಇದು ತಂಡದ ಮೇಲಿನ ಒತ್ತಡವನ್ನು ಮತ್ತಷ್ಟು ಹೆಚ್ಚಿಸಿರುವುದು ಸುಳ್ಳಲ್ಲ.

ಅಲ್ಲದೇ ಪ್ರಸಕ್ತ ಟೂರ್ನಿಯಲ್ಲಿ ಬಲಿಷ್ಠ ತಂಡಗಳ ಎದುರು ಇದುವರೆಗೆ ಒಂದೂ ಪಂದ್ಯದಲ್ಲಿ ಸರಾಗವಾಗಿ ಗೆದ್ದ ದಾಖಲೆ ಕೂಡ ತಂಡಕ್ಕಿಲ್ಲ. ಸಂದರ್ಭಕ್ಕೆ ತಕ್ಕ ತಂತ್ರಗಾರಿಕೆಯ ಮೂಲಕ 'ಬೀಸುವ ದೊಣ್ಣೆ..' ತಪ್ಪಿಸಿಕೊಂಡು ಗೆದ್ದಿದ್ದಾರೆ. ಸೂಪರ್ 8ರ ಹಂತದ ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡದ ವಿರುದ್ಧ ಭಾರತವು ಸೋತಿತ್ತು. ನಂತರದ ಎರಡೂ ಪಂದ್ಯಗಳಲ್ಲಿಯೂ ಗೆಲುವು ಸುಲಭವಾಗಿರಲಿಲ್ಲ.

ಅದರಲ್ಲೂ 'ಕ್ವಾರ್ಟರ್‌ಫೈನಲ್' ಎಂಬಂತೆ ಬಿಂಬಿತವಾಗಿದ್ದ ವೆಸ್ಟ್ ಇಂಡೀಸ್ ತಂಡದ ಎದುರು ಕೂಡ ಸಂಜು ಸ್ಯಾಮ್ಸನ್ (ಅಜೇಯ 97) ಅವರ ಏಕಾಂಗಿ ಹೋರಾಟದಿಂದಲೇ ತಂಡವು ಗೆದ್ದಿತು. 31 ವರ್ಷದ ಸಂಜು ಫಾರ್ಮ್‌ಗೆ ಮರಳಿದ್ದು ತಂಡದಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ. ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಅಭಿಷೇಕ್ ಶರ್ಮಾ ಅವರೂ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಮಿಂಚುವ ನಿರೀಕ್ಷೆ ಮೂಡಿಸಿದೆ. ಇಬ್ಬರೂ ಸೇರಿ ಉತ್ತಮ ಅಡಿಪಾಯ ಹಾಕಿದರೆ, ದೊಡ್ಡ ಮೊತ್ತದ ಸೌಧ ಕಟ್ಟಬಹುದು. ಎಡಗೈ ಬ್ಯಾಟರ್ ಅಭಿಷೇಕ್ ಅವರು ಜಿಂಬಾಬ್ವೆ ಎದುರಿನ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದರು. ಪವರ್‌ಪ್ಲೇ ಹಂತದಲ್ಲಿ ಅವರ ಆರ್ಭಟಕ್ಕೆ ತಡೆಯೊಡ್ಡಲು ಇಂಗ್ಲೆಂಡ್ ಕೂಡ ಸ್ಪಿನ್ನರ್ ನೆರವು ಪಡೆಯುವ ಸಾಧ್ಯತೆ ಇದೆ. ಅದರಲ್ಲೂ ಉತ್ತಮ ಲಯದಲ್ಲಿರುವ ವಿಲ್ ಜ್ಯಾಕ್ಸ್ ಬೌಲಿಂಗ್ ಮಾಡುವುದು ಬಹುತೇಕ ಖಚಿತವಾಗಿದೆ.

ಎಡಗೈ ಸ್ಪಿನ್ನರ್ ಲಿಯಾಮ್ ಡಾಸನ್ ಅವರು ಮೊದಲ ಆರು ಓವರ್‌ಗಳಲ್ಲಿ ಬೌಲಿಂಗ್ ಮಾಡಬಹುದು. ಅಲ್ಲದೇ ಮಧ್ಯಂತರ ಓವರ್‌ಗಳಲ್ಲಿ ಆದಿಲ್ ರಶೀದ್ ಅವರ ಮೇಲೆ ಇಂಗ್ಲೆಂಡ್ ತಂಡವು ನಂಬಿಕೆ ಇಡಬಹುದಾಗಿದೆ. ಆತಿಥೇಯರು ಈ ಮೂವರು ಸ್ಪಿನ್ನರ್‌ಗಳನ್ನು ಎದುರಿಸಲು ವಿಶೇಷ ತಂತ್ರಗಾರಿಕೆಯೊಂದಿಗೆ ಕಣಕ್ಕಿಳಿಯಬೇಕಾಗಿದೆ. ಮಂಗಳವಾರ ಸುಮಾರು ಮೂರು ತಾಸು ನೆಟ್ಸ್‌ನಲ್ಲಿ ಕಳೆದ ಭಾರತದ ಆಟಗಾರರು ಈ ಎಲ್ಲ ಸವಾಲುಗಳಿಗೂ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದರು.

ಮುಂಬೈ ಇಂಡಿಯನ್ಸ್ ತಂಡದಲ್ಲಿ ಆಡುವ ಸೂರ್ಯ, ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ಅವರಿಗೆ ವಾಂಖೆಡೆ ಅಂಗಳ ಚಿರಪರಿಚಿತವಾಗಿದೆ. ಅದರಲ್ಲೂ ಸೂರ್ಯ ಅವರಿಗೆ ಇದು ತವರು.

ಆದರೆ ಈ ಮೈದಾನದ ಬೌಂಡರಿ ಅಂತರವು ಕಡಿಮೆ ಇರುವ ಕಾರಣ ಸ್ಪಿನ್ ಜೋಡಿ ಅಕ್ಷರ್ ಪಟೇಲ್ ಮತ್ತು ವರುಣ್ ಚಕ್ರವರ್ತಿ ಸ್ವಲ್ಪ ಎಡವಿದರೂ ದಂಡನೆಗೊಳಗಾಗುವುದು ಖಚಿತ. ಆದ್ದರಿಂದ ಎಚ್ಚರಿಕೆಯಿಂದ ಎಸೆತಗಳನ್ನು ಹಾಕಬೇಕಾದ ಒತ್ತಡ ಅವರಿಗೆ ಇದೆ. ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಉತ್ತಮ ಲಯದಲ್ಲಿರುವುದು ಸಮಾಧಾನದ ವಿಷಯ. ಶಿವಂ ದುಬೆ ಆರನೇ ಬೌಲರ್ ಆಗಬಹುದು. ಕಳೆದ ಪಂದ್ಯದಲ್ಲಿ ಆಡಿದ್ದ ತಂಡವನ್ನೇ ಭಾರತ ಇಲ್ಲಿಯೂ ಕಣಕ್ಕಿಳಿಸುವ ಸಾಧ್ಯತೆ ಇದೆ. ಕುಲದೀಪ್ ಯಾದವ್ ಅವರಿಗೆ ಸ್ಥಾನ ನೀಡುವುದು ಅನುಮಾನ.

ಇಂಗ್ಲೆಂಡ್ ತಂಡವು ಹ್ಯಾರಿ ಬ್ರೂಕ್ ಹಾಗೂ ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಮೇಲೆ ಹೆಚ್ಚು ಅವಲಂಬಿತವಾಗಿದೆ. ಜೋಸ್ ಬಟ್ಲರ್ ಅವರು ಫಾರ್ಮ್‌ನಲ್ಲಿ ಇಲ್ಲ. ಸೀಮಿತ ಓವರ್‌ಗಳಲ್ಲಿ ಅಮೋಘ ಸಾಧಕರಾಗಿರುವ ಬಟ್ಲರ್ ಅವರು ಇಲ್ಲಿ ಲಯಕ್ಕೆ ಮರಳದಂತೆ ನೋಡಿಕೊಳ್ಳುವತ್ತ ಬೌಲರ್‌ಗಳು ಚಿತ್ತ ಹರಿಸಬೇಕಿದೆ. ಆಲ್‌ರೌಂಡರ್ ಸ್ಯಾಮ್ ಕರನ್ ಅವರು ತಂಡಕ್ಕೆ ಆಸರೆಯಾಗಬಲ್ಲ ಸಾಮರ್ಥ್ಯ ಹೊಂದಿದ್ದಾರೆ.

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸಂಜು ಸ್ಯಾಮ್ಸನ್, ಶಿವಂ ದುಬೆ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ಅರ್ಷದೀಪ್ ಸಿಂಗ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ವರುಣ್ ಚಕ್ರವರ್ತಿ, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ರಿಂಕು ಸಿಂಗ್.

ಇಂಗ್ಲೆಂಡ್: ಹ್ಯಾರಿ ಬ್ರೂಕ್ (ನಾಯಕ), ರೆಹಾನ್ ಅಹಮದ್, ಜೋಫ್ರಾ ಆರ್ಚರ್, ಟಾಮ್ ಬ್ಯಾಂಟನ್, ಜೇಕಬ್ ಬೆತೆಲ್, ಜೋಸ್ ಬಟ್ಲರ್, ಸ್ಯಾಮ್ ಕರನ್, ಲಿಯಾಮ್ ಡಾಸನ್, ಬೆನ್ ಡಕೆಟ್, ವಿಲ್ ಜ್ಯಾಕ್ಸ್, ಜೇಮಿ ಓವರ್ಟನ್, ಆದಿಲ್ ರಶೀದ್, ಫಿಲ್ ಸಾಲ್ಟ್, ಜೋಶ್ ಟಂಗ್, ಲೂಕ್ ವುಡ್.

ಪಂದ್ಯ ಆರಂಭ: ರಾತ್ರಿ 7. **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್.

ಪಿಚ್ ಹೇಗಿದೆ?

ಸೆಮಿಫೈನಲ್ ಪಂದ್ಯಕ್ಕಾಗಿ ಮೀಸಲಾಗಿಟ್ಟಿರುವ ಪಿಚ್‌ನಲ್ಲಿ ಈಗಾಗಲೇ ಎರಡು ಪಂದ್ಯಗಳು ನಡೆದಿವೆ. ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ನಡುವಣ ಪಂದ್ಯ ನಡೆದಿತ್ತು. ಅದರಲ್ಲಿ 196 ರನ್ ಗುರಿ ನೀಡಿದ್ದ ವಿಂಡೀಸ್ ಗೆದ್ದಿತ್ತು. ಇನ್ನೊಂದು ಪಂದ್ಯದಲ್ಲಿ ಇಟಲಿಯು ನೇಪಾಳ ಎದುರು 10 ವಿಕೆಟ್ ಜಯ ಸಾಧಿಸಿತ್ತು.

ಒಂದು ತಿಂಗಳ ಹಿಂದೆ ಭಾರತ ತಂಡವು ಟೂರ್ನಿಯ ಉದ್ಘಾಟನಾ ಪಂದ್ಯವನ್ನು ಇಲ್ಲಿ ಆಡಿತ್ತು. ಎದುರಾಳಿ ಅಮೆರಿಕ ತಂಡದ ಮಧ್ಯಮವೇಗಿ ಶಾಡ್ಲೆ ವ್ಯಾನ್ ಶಾಲ್ಕ್‌ವಿಕ್ ಅವರೂ ಇಲ್ಲಿ ಮಿಂಚಿದ್ದರು.

ಮುಂಬೈನಲ್ಲಿ ಹಗಲು ಹೊತ್ತಿನಲ್ಲಿ 39 ಡಿಗ್ರಿ ತಾಪಮಾನ ಇರಲಿದೆ. ರಾತ್ರಿಯಾದಂತೆ 23 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯಲಿದೆ. ಆದರೆ ಧಗೆ ಹೆಚ್ಚಾಗಿರುವ ಸಾಧ್ಯತೆ ಇದೆ. ಮಳೆ ಬರುವ ಲಕ್ಷಣಗಳು ಇಲ್ಲ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಫಿನ್ ಅಲೆನ್ ಮಿಂಚಿನ ಶತಕ • ಶರಣಾದ ದಕ್ಷಿಣ ಆಫ್ರಿಕಾ

ಫೈನಲ್‌ಗೆ ನ್ಯೂಜಿಲೆಂಡ್ ಲಗ್ಗೆ



ನ್ಯೂಜಿಲೆಂಡ್ ತಂಡದ ಫಿನ್ ಅಲೆನ್ ಶತಕ ಸಂಭ್ರಮ ಎಎಫ್‌ಪಿ ಚಿತ್ರ

ಕೋಲ್ಕತ್ತ (ಪಿಟಿಐ): ಫೇವರಿಟ್ ಆಗಿದ್ದ ದಕ್ಷಿಣ ಆಫ್ರಿಕಾ ಮತ್ತೊಮ್ಮೆ ನಿರ್ಣಾಯಕ ಪಂದ್ಯದಲ್ಲಿ ಎಡವಿತು. ಏಕಪಕ್ಷೀಯವಾಗಿದ್ದ ಟಿ20 ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ಬೌಲರ್‌ಗಳು ಶಿಸ್ತಿನ ದಾಳಿಯೊಡನೆ ಹರಿಣಗಳ ಪಡೆಯನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದ ಮೇಲೆ ಅದರ ಆರಂಭ ಆಟಗಾರರು ಪ್ರಾಬಲ್ಯ ಮೆರೆದರು. 9 ವಿಕೆಟ್‌ಗಳಿಂದ ಗೆದ್ದ ಕಿವೀಸ್ ಪಡೆ ಬುಧವಾರ ಫೈನಲ್‌ಗೆ ಲಗ್ಗೆಯಿಟ್ಟಿತು.

ಈಡನ್ ಗಾರ್ಡನ್ ಕ್ರೀಡಾಂಗಣದಲ್ಲಿ 170 ರನ್‌ಗಳ ಸಾಧಾರಣ ಗುರಿಯನ್ನು ಎದುರಿಸಿದ ನ್ಯೂಜಿಲೆಂಡ್ ಆ ಮೊತ್ತ ಲೆಕ್ಕಕ್ಕೇ ಇಲ್ಲದಂತೆ ಆಡಿ ಕೇವಲ 12.5 ಓವರುಗಳಲ್ಲಿ 1 ವಿಕೆಟ್‌ಗೆ 173 ರನ್ ಹೊಡೆಯಿತು. ಫಿನ್ ಅಲೆನ್ (ಔಟಾಗದೇ 100) ವಿಜಯದ ರನ್ ಜೊತೆಯಲ್ಲೇ ಶತಕ ಪೂರೈಸಿದರು. ಗುರುವಾರ ಭಾರತ–ಇಂಗ್ಲೆಂಡ್ ನಡುವೆ ನಡೆಯಲಿರುವ ಎರಡನೇ ಸೆಮಿಫೈನಲ್ ಪಂದ್ಯದ ವಿಜೇತರನ್ನು ಮಿಚೆಲ್ ಸ್ಯಾಂಟ್ನರ್ ಪಡೆ ಪ್ರಶಸ್ತಿ ಸುತ್ತಿನಲ್ಲಿ ಎದುರಿಸಲಿದೆ.

ಟಿಮ್ ಸೀಫರ್ಟ್ (58, 33 ಎಸೆತ, 4x7, 6x2) ಜೊತೆಗೆ ಮೊದಲ ವಿಕೆಟ್‌ಗೆ ಫಿನ್ ಅಲೆನ್ ಕೇವಲ 9 ಓವರುಗಳಲ್ಲಿ 117 ರನ್ ಸೇರಿಸಿದ್ದರಿಂದ ಗೆಲುವು ಎಷ್ಟು ಬೇಗ ಸಾಧಿಸಬಹುದು ಎಂಬ ಕುತೂಹಲವಷ್ಟೇ ಉಳಿದಿತ್ತು. ರಚಿನ್ ರವೀಂದ್ರ ಜೊತೆ ಮುರಿಯದ ಎರಡನೇ ವಿಕೆಟ್‌ಗೆ 56 ರನ್ ಸೇರಿಸಿದರು. ಮೈದಾನದ ಮೂಲೆಮೂಲೆಗೆ ಚೆಂಡನ್ನು ಅಟ್ಟಿದ ಅಲೆನ್ ಹತ್ತು ಬೌಂಡರಿಗಳ ಜೊತೆ ಎಂಟು ಭರ್ಜರಿ ಸಿಕ್ಸರ್‌ಗಳನ್ನು ಹೊಡೆದರು. ಈ ಆಕ್ರಮಣದ ಆಟದೆದುರು ಮರ್ಕರಂ ಪಡೆಯ ಬೌಲರ್‌ಗಳು ಅಸಹಾಯಕರಾದರು. ಪವರ್ ಪ್ಲೇ ಅವಧಿಯಲ್ಲೇ ಕಿವೀಸ್ ಪಡೆ 84 ರನ್ ಸೂರೆಮಾಡಿತ್ತು.

ಇದಕ್ಕೆ ಮೊದಲು ದಕ್ಷಿಣ ಆಫ್ರಿಕಾ 8 ವಿಕೆಟ್‌ಗೆ 169 ರನ್ ಗಳಿಸಲಷ್ಟೇ ಶಕ್ತವಾಯಿತು. ಅದೂ ಮಾರ್ಕೊ ಯಾನ್ಸೆನ್ ಕೊನೆಗಳಿಗೆಯಲ್ಲಿ ಆಡಿದ ಬೀಸಾಟದಿಂದ. ಯಾನ್ಸೆನ್ 30 ಎಸೆತಗಳಲ್ಲಿ ಅಜೇಯ 55 ರನ್ ಸೇರಿಸಿ ನಿಸ್ತೇಜವಾಗಿದ್ದ ಇನಿಂಗ್ಸ್‌ಗೆ ಜೀವ ತುಂಬಿದರು. ಟ್ರಿಸ್ಟನ್ ಸ್ಟಬ್ಸ್ (29) ಜೊತೆ ಅವರು 73 ರನ್ ಸೇರಿಸಿದ್ದರಿಂದ ತಂಡ ಕುಸಿತದಿಂದ ಪಾರಾಯಿತು.

ಕಿವೀಸ್ ಬಳಗವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಇನಿಂಗ್ಸ್‌ನ ಎರಡನೇ ಓವರ್ ಮಾಡಿದ ಆಫ್‌ಸ್ಪಿನ್ನರ್ ಕೊಲಿ ಮೆಕ್‌ಕೊಂಚಿ (9ಕ್ಕೆ2) ಎರಡು ವಿಕೆಟ್ ಕಿತ್ತರು. ಕ್ವಿಂಟನ್ ಡಿಕಾಕ್ (10 ರನ್) ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರೆ, ನಂತರದ ಎಸೆತದಲ್ಲಿ ರಿಯಾನ್ ರಿಕೆಲ್ಟನ್ ಅವರು ಫಿನ್ ಅಲೆನ್‌ಗೆ ಕ್ಯಾಚ್ ಕೊಟ್ಟು ನಿರ್ಗಮಿಸಿದರು. ಆದರೆ ಕೊಲಿ ಅವರಿಗೆ ಹ್ಯಾಟ್ರಿಕ್ ಸಾಧನೆ ಕೈತಪ್ಪಿತು. ಎಡಗೈ ಸ್ಪಿನ್ನರ್ ರಚಿನ್ ರವೀಂದ್ರ (29ಕ್ಕೆ2) ಅವರೂ ಪರಿಣಾಮಕಾರಿಯಾಗಿ ಬೌಲಿಂಗ್ ಮಾಡಿದರು. ಅವರು ಏಡನ್ ಮರ್ಕರಂ (18 ರನ್) ಮತ್ತು ಡೇವಿಡ್ ಮಿಲ್ಲರ್ (6 ರನ್) ವಿಕೆಟ್‌ಗಳನ್ನು ಬುಟ್ಟಿಗೆ ಹಾಕಿಕೊಂಡರು.

'ಟಿ20 ಕ್ರಿಕೆಟ್'ನ ವೇಗದ ಶತಕ

ನ್ಯೂಜಿಲೆಂಡ್ ತಂಡದ ಫಿನ್ ಅಲೆನ್ ಅವರು ಕೇವಲ 33 ಎಸೆತಗಳಲ್ಲಿ ಶತಕ ಪೂರೈಸಿದರು. ಐಸಿಸಿ ಪೂರ್ಣ ಸದಸ್ಯ ತಂಡಗಳ ನಡುವಣ ಪಂದ್ಯದಲ್ಲಿ ದಾಖಲಾದ ಅತಿ ವೇಗದ ಶತಕವಿದು. ಎರಡನೇ ಸ್ಥಾನದಲ್ಲಿ ದಕ್ಷಿಣ ಆಫ್ರಿಕಾ ತಂಡದ ಡೇವಿಡ್ ಮಿಲ್ಲರ್ (35 ಎಸೆತ; ಬಾಂಗ್ಲಾದೇಶ ವಿರುದ್ಧ) ಇದ್ದಾರೆ.

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 8ಕ್ಕೆ 169

ಮರ್ಕರಂ ಸಿ ಮಿಚೆಲ್ ಬಿ ರವೀಂದ್ರ 18 (20ಎ, 4x1, 6x1)
ಡಿಕಾಕ್ ಸಿ ಫರ್ಗ್ಯುಸನ್ ಬಿ ಮೆಕ್‌ಕೊಂಚಿ 10
ರಿಕೆಲ್ಟನ್ ಸಿ ಅಲೆನ್ ಬಿ ಮೆಕ್‌ಕೊಂಚಿ 0
ಬ್ರೆವಿಸ್ ಸಿ ಸ್ಯಾಂಟ್ನರ್ ಬಿ ನೀಶಮ್ 34 (27ಎ, 4x3, 6x2)
ಮಿಲ್ಲರ್ ಸಿ ಮಿಚೆಲ್ ಬಿ ರವೀಂದ್ರ 6 (6ಎ)
ಸ್ಟಬ್ಸ್ ಬಿ ಫರ್ಗ್ಯುಸನ್ 29 (24ಎ, 4x2, 6x1)
ಯಾನ್ಸೆನ್ ಔಟಾಗದೇ 55 (30ಎ, 4x2, 6x5)
ಬಾಷ್ ಬಿ ಹೆನ್ರಿ 2 (3ಎ)
ರಬಾಡ ಸಿ ನೀಶಮ್ ಬಿ ಹೆನ್ರಿ 0 (1ಎ)
ಮಹಾರಾಜ್ ಔಟಾಗದೇ 1 (1ಎ)

ಇತರೆ: 14 (ಲೆಗ್‌ಬೈ 1, ನೋಬಾಲ್ 1, ವೈಡ್ 12)

ವಿಕೆಟ್ ಪತನ: 1–12 (ಕ್ವಿಂಟನ್ ಡಿಕಾಕ್, 1.4), 2–12 (ರಿಯಾನ್ ರಿಕೆಲ್ಟನ್, 1.5), 3–55 (ಏಡನ್ ಮರ್ಕರಂ, 7.5), 4–77 (ಡೇವಿಡ್ ಮಿಲ್ಲರ್, 9.6), 5–77 (ಡೆವಾಲ್ಡ್ ಬ್ರೆವಿಸ್, 10.2), 6–150 (ಟ್ರಿಸ್ಟನ್ ಸ್ಟಬ್ಸ್, 18.1), 7–166 (ಕಾರ್ಬಿನ್ ಬಾಷ್, 19.3), 8–166 (ಕಗಿಸೊ ರಬಾಡ, 19.4)

ಬೌಲಿಂಗ್: ಮ್ಯಾಟ್ ಹೆನ್ರಿ 4–0–34–2; ಕೋಲ್ ಮೆಕ್‌ಕೊಂಚಿ 1–0–9–2; ಲಾಕಿ ಫರ್ಗ್ಯುಸನ್ 4–0–29–1; ಜೇಮ್ಸ್ ನೀಶಮ್ 3–0–42–1; ಮಿಚೆಲ್ ಸ್ಯಾಂಟ್ನರ್ 4–0–25–0; ರಚಿನ್ ರವೀಂದ್ರ 4–0–29–2

ನ್ಯೂಜಿಲೆಂಡ್: 12.5 ಓವರ್‌ಗಳಲ್ಲಿ 1 ವಿಕೆಟ್‌ಗೆ 173

ಸೀಫರ್ಟ್ ಬಿ ರಬಾಡ 58 (33ಎ, 4x7, 6x2)
ಅಲೆನ್ ಔಟಾಗದೇ 100 (33ಎ, 4x10, 6x8)
ರವೀಂದ್ರ ಔಟಾಗದೇ 13 (11ಎ, 4x2)

ಇತರೆ: 2 (ಲೆಗ್‌ಬೈ 2)

ವಿಕೆಟ್ ಪತನ: 1–117 (ಟಿಮ್ ಸೀಫರ್ಟ್, 9.1)

ಬೌಲಿಂಗ್: ಮಾರ್ಕೊ ಯಾನ್ಸೆನ್ 2.5–0–53–0; ಕಗಿಸೊ ರಬಾಡ 3–0–28–1; ಲುಂಗಿ ಎನ್‌ಗಿಡಿ 2–0–22–0; ಕಾರ್ಬಿನ್ ಬಾಷ್ 2–0–35–0; ಕೇಶವ ಮಹಾರಾಜ್ 3–0–33–0. **ಪಂದ್ಯದ ಆಟಗಾರ:** ಫಿನ್ ಅಲೆನ್

ಸಿದ್ಧಿವಿನಾಯಕ ದರ್ಶನ...

ಪಿಟಿಐ ಚಿತ್ರ



ಭಾರತ ತಂಡದ ಆಟಗಾರರಾದ ಅಭಿಷೇಕ್ ಶರ್ಮಾ, ಅಕ್ಷರ್ ಪಟೇಲ್ ಹಾಗೂ ಇಶಾನ್ ಕಿಶನ್ ಅವರು ಮುಂಬೈನಲ್ಲಿರುವ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಬುಧವಾರ ಭೇಟಿ ನೀಡಿ ಪೂಜೆ ಸಲ್ಲಿಸಿದರು

ಏಕದಿನ ಸರಣಿ: ಬಾಬರ್‌ಗೆ ಕೊಕ್

ಇಸ್ಲಾಮಾಬಾದ್ (ಎಎಫ್‌ಪಿ): ಬ್ಯಾಟಿಂಗ್ ದಿಗ್ಗಜ ಬಾಬರ್ ಆಜಂ ಅವರನ್ನು ಪಾಕಿಸ್ತಾನ ತಂಡವು, ಮುಂದಿನ ವಾರದಿಂದ ಬಾಂಗ್ಲಾದೇಶದಲ್ಲಿ ನಡೆಯುವ ಏಕದಿನ ಸರಣಿಗೆ ಕೈಬಿಟ್ಟಿದೆ. ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್ ಗಮದಲ್ಲಿಟ್ಟುಕೊಂಡು ಆರು ಮಂದಿ ಹೊಸಬರಿಗೆ ತಂಡದಲ್ಲಿ ಅವಕಾಶ ನೀಡಲಾಗಿದೆ.

ವೇಗದ ಬೌಲರ್ ಶಾಹೀನ್ ಶಾ ಅಫ್ರಿದಿ ನಾಯಕರಾಗಿದ್ದಾರೆ.

ಆರಂಭ ಆಟಗಾರ ಸೈಮ್ ಅಯೂಬ್, ಸ್ಪಿನ್ ಆಲ್‌ರೌಂಡರ್‌ಗಳಾದ ಶದಾಬ್ ಖಾನ್, ಮೊಹಮ್ಮದ್ ನವಾಜ್ ಮತ್ತು ವೇಗದ ಬೌಲರ್ ನಸೀಮ್ ಶಾ ಅವರನ್ನೂ 15 ಮಂದಿಯ ತಂಡದಿಂದ ಕೈಬಿಡಲಾಗಿದೆ. ಮೂರು ಪಂದ್ಯಗಳು ಕ್ರಮವಾಗಿ ಇದೇ 11, 13 ಮತ್ತು 15ರಂದು ನಡೆಯಲಿದೆ.

ಹಾಲಿ ಟಿ20 ವಿಶ್ವಕಪ್‌ನಲ್ಲಿ ಪಾಕಿಸ್ತಾನ ತಂಡ ಸೆಮಿಫೈನಲ್‌ಗೇರಲು ವಿಫಲವಾಗಿದ್ದು, ವ್ಯಾಪಕ ಟೀಕೆಗಳು ಕೇಳಿಬಂದಿದ್ದವು. ಆಜಂ ಆ ವಿಶ್ವಕಪ್‌ನಲ್ಲಿ ಕೇವಲ 91 ರನ್ ಗಳಿಸಿದ್ದರು. ಏಕದಿನ ಮಾದರಿಯಲ್ಲಿ ಅವರ ಸಾಧನೆ ಉತ್ತಮವಾಗಿದ್ದು 140 ಪಂದ್ಯಗಳನ್ನು ಆಡಿದ್ದು, 20 ಶತಕ ಒಳಗೊಂಡ 6,501 ರನ್ ಗಳಿಸಿದ್ದಾರೆ.

'ಐದು ಕೋಟಿಗೂ ಹೆಚ್ಚು ವೀಕ್ಷಣೆ'

ನವದೆಹಲಿ (ಪಿಟಿಐ): ಪ್ರಸಕ್ತ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯಗಳಿಗೆ ಐದು ಕೋಟಿಗೂ ಹೆಚ್ಚು ವೀಕ್ಷಣೆಗಳು ದಾಖಲಾಗಿವೆ. ಇದು ಚುಟುಕು ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿಯೇ ಇದು ಅತ್ಯಧಿಕ ವೀಕ್ಷಣೆಗಳ ದಾಖಲೆಯಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಖ್ಯಸ್ಥ ಜಯ್ ಶಾ ತಿಳಿಸಿದ್ದಾರೆ.

'ಜಾಗತಿಕವಾಗಿ ಕ್ರಿಕೆಟ್ ಅನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಸಾಧನೆಯಾಗಿದೆ. ಭಾರತದ ಆತಿಥ್ಯದಲ್ಲಿ ನಡೆಯುತ್ತಿರುವ ಟೂರ್ನಿಗೆ ಇಷ್ಟು ದೊಡ್ಡ ಪ್ರಮಾಣದ ಜನಪ್ರಿಯತೆ ಲಭಿಸಿರುವುದು ನನ್ನನ್ನು ವಿನೀತನನ್ನಾಗಿಸಿದೆ' ಎಂದು ಜಯ್ ಶಾ 'ಎಕ್ಸ್'ನಲ್ಲಿ ಸಂದೇಶ ಹಾಕಿದ್ದಾರೆ.

ಗುಕೇಶ್‌ಗೆ ಮೂರನೇ ಸೋಲು

ಪ್ರಾಗ್ (ಪಿಟಿಐ): ಸಿದ್ಧಾಂತಕ್ಕೆ ಅನುಗುಣವಾಗಿ ಆಡಿದ ಹಾಲಿ ಚಾಂಪಿಯನ್ ಅರವಿಂದ ಚಿದಂಬರಮ್ ಪ್ರಾಗ್ ಚೆಸ್ ಫೆಸ್ಟಿವಲ್ ಆರನೇ ಸುತ್ತಿನಲ್ಲಿ ವಿಶ್ವ ಚಾಂಪಿಯನ್, ಸ್ವದೇಶದ ಡಿ. ಗುಕೇಶ್ ಅವರನ್ನು ಸೋಲಿಸಿದರು.

ಸತತ ಹಿನ್ನಡೆಯಿಂದಾಗಿ ಗುಕೇಶ್ ಅವರು ಲೈವ್ ರೇಟಿಂಗ್‌ನಲ್ಲಿ ವಿಶ್ವದಲ್ಲಿ 20ನೇ ಸ್ಥಾನಕ್ಕೆ ಇಳಿದಿದ್ದಾರೆ. 2024ರ ಡಿಸೆಂಬರ್‌ನಲ್ಲಿ ವಿಶ್ವ ಚಾಂಪಿಯನ್ ಆದ ನಂತರ ಅವರು ಪರದಾಡುತ್ತಿರುವುದು ಈ ಟೂರ್ನಿಯಲ್ಲಿ ಎದ್ದುಕಂಡಿದೆ. ಅವರು ಆರು ಸುತ್ತುಗಳಲ್ಲಿ ಒಂದನ್ನೂ ಗೆಲ್ಲುವಲ್ಲಿ ಯಶಸ್ವಿಯಾಗಿಲ್ಲ. ಮೂರು ಪಂದ್ಯಗಳನ್ನು ಸೋತರೆ, ಉಳಿದ ಮೂರು ಡ್ರಾ ಆಗಿವೆ.

2025ರ ಟಾಟಾ ಸ್ಟೀಲ್ ಮಾಸ್ಟರ್ಸ್ ಟೂರ್ನಿಯಲ್ಲಿ ಅವರು ಅಗ್ರಸ್ಥಾನಕ್ಕೆ ಸ್ವದೇಶದ ಪ್ರಜ್ಞಾನಂದ ಜೊತೆ ಟೈ ಮಾಡಿಕೊಂಡಿದ್ದು ಮಾತ್ರ ಈ ಅವಧಿಯಲ್ಲಿ ಉತ್ತಮ ಸಾಧನೆಯೆನಿಸಿದೆ. ಇತ್ತೀಚಿನ ಟೂರ್ನಿಗಳಲ್ಲಿ ಸತತ ಹಿನ್ನಡೆಯಿಂದ ಅವರು ರೇಟಿಂಗ್‌ನಲ್ಲಿ 50 ಪಾಯಿಂಟ್ಸ್ ಕಳೆದುಕೊಂಡಿದ್ದಾರೆ.


ಅರವಿಂದ್ ವಿರುದ್ಧ 40ನೇ ನಡೆಯಲ್ಲಿ ಗುಕೇಶ್, ಕ್ಲಾಕ್‌ನಲ್ಲಿ ಕೆಲವೇ ಸೆಕೆಂಡುಗಳಿದ್ದಾಗ ನಿರ್ಣಾಯಕ ತಪ್ಪು ಎಸಗಿದರು. ಎಂಟು ನಡೆಗಳ ನಂತರ ಅವರು ಆಟ ಬಿಟ್ಟುಕೊಡಬೇಕಾಯಿತು. ಈ ಸೋಲಿನಿಂದ ಅವರು 1.5 ಅಂಕಗಳೊಡನೆ ಕೊನೆಯ ಸ್ಥಾನಕ್ಕಿಳಿದರು. ಅರವಿಂದ್ 2.5 ಅಂಕ ಗಳಿಸಿದ್ದಾರೆ.

ಈ ಸುತ್ತಿನ ಇತರ ನಾಲ್ಕೂ ಪಂದ್ಯಗಳು ಡ್ರಾ ಆದವು. ಡಚ್ ಗ್ರ್ಯಾಂಡ್‌ಮಾಸ್ಟರ್ ಜೋರ್ಡನ್ ವ್ಯಾನ್ ಫೊರೀಸ್ಟ್ (4.5) ಅವರು ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ಅವರು ಸ್ಥಳೀಯ ಆಟಗಾರ ಡೇವಿಡ್ ನವಾರ (4) ಜೊತೆ ಡ್ರಾ ಮಾಡಿಕೊಂಡರು.

ಐಟಿಎಫ್ ಕಲಬುರಗಿ ಓಪನ್ ಮಹಿಳಾ ಟೆನಿಸ್ ಟೂರ್ನಿ

ಪ್ರಿಕ್ವಾರ್ಟರ್‌ಗೆ ಅಂಕಿತಾ

• ಬಸವರಾಜ ದಳವಾಯಿ



ಭಾರತದ ಅಂಕಿತಾ ರೈನಾ ಆಟದ ವೈಖರಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿ: ನೆತ್ತಿ ಸುಡುವ ಬಿಸಿಲಿನಲ್ಲೂ ಭರ್ಜರಿ ಆಟವಾಡಿದ ಅಂಕಿತಾ ರೈನಾ ಹಾಗೂ ಜೀಲ್ ದೇಸಾಯಿ ಕಲಬುರಗಿ ಓಪನ್ ಐಟಿಎಫ್ ಮಹಿಳೆಯರ ಟೆನಿಸ್ ಟೂರ್ನಿಯಲ್ಲಿ ಸುಲಭ ಜಯ ಸಂಪಾದಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು. ಆದರೆ, ಭಾರತದ ಇನ್ನುಳಿದ ಬಹುತೇಕ ಆಟಗಾರ್ತಿಯರು ಎಡವಿದರು.

ಇಲ್ಲಿನ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅನುಭವಿ ಆಟಗಾರ್ತಿ ಅಂಕಿತಾ, ಬುಧವಾರ 6–1, 6–3ರಿಂದ ಭಾರತದವರೇ ಆದ ಸೋನಲ್ ಪಾಟೀಲ ಅವರನ್ನು ಸೋಲಿಸಿದರು.

ಇತ್ತೀಚೆಗೆ ಗುರುಗ್ರಾಮದಲ್ಲಿ ಐಟಿಎಫ್ ಸಿಂಗಲ್ಸ್ ಪ್ರಶಸ್ತಿ ಗೆದ್ದಿರುವ ಗುಜರಾತ್‌ನ ಜೀಲ್ ಅವರಿಗೆ ಈ ಟೂರ್ನಿಯ ಪಂದ್ಯದಲ್ಲಿ 6–2, 6–1ರಿಂದ ಸ್ವದೇಶದ ಆಟಗಾರ್ತಿ ಜೆನ್ನಿಫರ್ ಲೂಯಿಖಾಮ್ ವಿರುದ್ಧ ಜಯ ಒಲಿಯಿತು.

ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಭಾರತದ ಆಕಾಂಕ್ಷಾ ದಿಲೀಪ್ ನಿಟ್ಟೂರೆ 2–6, 1–6 ರಿಂದ ಬೆಲಾರಸ್‌ನ ಪೊಲಿನಾ ಕುಹರೆಂಕೊ ಎದುರು, ಸಂದೀಪ್ತಿ ಸಿಂಗ್ ರಾವ್ 2–6, 4–6 ರಿಂದ ರಷ್ಯಾದ ಆ್ಯನಾ ಸೆದಿಶೆವಾ ಎದುರು, ಸೋಹಾ ಸಾದಿಕ್ 5–7, 0–6 ರಿಂದ ಸಿಂಗಪುರದ ಎವಾ ಮರಿಯಾ ಡೆಸ್ವಿನ್ಸ್ ವಿರುದ್ಧ, ಐಶ್ವರ್ಯಾ ಜಾಧವ್ 2–6, 1–6 ರಿಂದ ನೆದರ್ಲೆಂಡ್ಸ್‌ನ ಯಾಸ್ಮಿನ್ ಜಿಂಬ್ರೆರ ಮೇಲೆ, ಕಶಿಶ್ ಭಾಟಿಯಾ 0–6, 4–6 ರಿಂದ ರಷ್ಯಾದ ಎಲಿನಾ ನೇಪಿಲಿ ಎದುರು ಸೋಲು ಅನುಭವಿಸಿದರು.

ಥಾಯ್ಲೆಂಡ್‌ನ ಥಾಸಪಾರ್ನ್ ನಕ್ಲೊ 6–3, 6–2ರಿಂದ ರಷ್ಯಾದ ವಲೇರಿಯಾ ಸವಿನಿಕ್ ಅವರನ್ನು ಮಣಿಸಿದರು.

ಬಿಸಿಲು: ಹಿಂದೆ ಸರಿದ ಶ್ರೀವಲ್ಲಿ

ಸುಮಾರು 38 ಡಿಗ್ರಿ ಸೆಲ್ಸಿಯಸ್ ನಷ್ಟಿದ್ದ ತಾಪಮಾನ ಆಟಗಾರ್ತಿಯರನ್ನು ಕಂಗೆಡಿಸಿತು. ರಷ್ಯಾದ ಎವ್‌ಜೆನಿಯಾ ಬರ್ಡಿನಾ ಎದುರು ಸ್ಪರ್ಧಿಸಿದ್ದ ನಾಲ್ಕನೇ ಶ್ರೇಯಾಂಕದ, ಭಾರತದ ಆಟಗಾರ್ತಿ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ ಮೊದಲ ಸೆಟ್‌ನಲ್ಲಿ 1–5ರಲ್ಲಿ ಹಿನ್ನಡೆಯಲ್ಲಿದ್ದಾಗ ಬಿಸಿಲಾಘಾತದಿಂದಾಗಿ ಪಂದ್ಯದಿಂದ ಹಿಂದೆ ಸರಿದರು. ಅಂಕಿತಾ ರೈನಾ ಕೂಡ ವೈದ್ಯಕೀಯ ಕಾರಣಕ್ಕಾಗಿ ವಿರಾಮ ಪಡೆದರು. ಆಗಾಗ ತಲೆ ಮೇಲೆ ನೀರು ಸುರಿದುಕೊಂಡು ಸುಧಾರಿಸಿಕೊಂಡರು.

ಮಾತೃ ಕಪ್: ವಿವೇಕ್ಸ್ ತಂಡ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು ಬುಧವಾರ ಆರಂಭವಾದ ಮಾತೃ ಕಪ್ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ 55–04ರಿಂದ ಕೋಲಾರ ಜಿಲ್ಲಾ ತಂಡವನ್ನು ನಿರಾಯಾಸವಾಗಿ ಮಣಿಸಿತು.

ಕಂಠೀರವ ಒಳಾಂಗಣ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ವಿವೇಕ್ಸ್ ತಂಡದ ವೇದಿಕಾ (18 ಅಂಕ) ಹಾಗೂ ಶ್ರೇಷ್ಠಾ (13 ಅಂಕ) ಮಿಂಚಿದರು. ಕೋಲಾರ ತಂಡವು ಲಯ ಕಂಡುಕೊಳ್ಳಲೇ ಇಲ್ಲ.

ದಿನದ ಇತರ ಪಂದ್ಯಗಳಲ್ಲಿ ಬೆಂಗಳೂರು ವ್ಯಾನ್‌ಗಾರ್ಡ್ಸ್ ತಂಡವು 38–34ರಿಂದ ಭರತ್ ಸ್ಪೋರ್ಟ್ಸ್ ಯೂನಿಯನ್ ವಿರುದ್ಧ; ಜೆಎಸ್‌ಸಿ ತಂಡವು 52–23ರಿಂದ ವೈಎಂಎಂಎ ಬಿ.ಸಿ. ವಿರುದ್ಧ; ಪಟ್ಟಾಭಿರಾಮನಗರ ಬಿ.ಸಿ ತಂಡವು 35–24ರಿಂದ ಕೋರಮಂಗಲ ಬಿ.ಸಿ ವಿರುದ್ಧ; ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವು 48–28ರಿಂದ ಬೆಂಗಳೂರು ಸ್ಪೋರ್ಟಿಂಗ್ ಕ್ಲಬ್ ವಿರುದ್ಧ ಹಾಗೂ ಆಲ್‌ಸ್ಟಾರ್ಸ್ ಬಿ.ಸಿ ಮೈಸೂರು ತಂಡವು 41–36ರಿಂದ ಎಂಸಿಎಚ್‌ಎಸ್ ಬಿ.ಸಿ ತಂಡವನ್ನು ಸೋಲಿಸಿದವು.

ಎಎಫ್‌ಸಿ ಮಹಿಳಾ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿ: 1–2ರಿಂದ ಭಾರತ ತಂಡಕ್ಕೆ ಸೋಲು

ಕೊನೆಕ್ಷಣದ ಗೋಲು, ವಿಯೆಟ್ನಾಂಗೆ ಗೆಲುವು



ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತದ ಸನ್ಫಿದಾ ನೊಂಗ್ರುಮ್ ಚಿತ್ರ: ಎಐಎಫ್‌ಎಫ್

ಪರ್ತ್ (ಪಿಟಿಐ): ಕೊನೆಯ ಕ್ಷಣದಲ್ಲಿ (ಸ್ಟಾಪೇಜ್ ಅವಧಿಯಲ್ಲಿ) ವಿಯೆಟ್ನಾಂಗೆ ಗೋಲು ಬಿಟ್ಟುಕೊಟ್ಟ ಭಾರತ ತಂಡವು ನಿರಾಸೆ ಅನುಭವಿಸಬೇಕಾಯಿತು. ಮಹಿಳಾ ಎಎಫ್‌ಸಿ ಏಷ್ಯನ್ ಕಪ್ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾರತ ಬುಧವಾರ 1–2 ಗೋಲುಗಳಿಂದ ಸೋಲನುಭವಿಸಿತು.

ಸಿ ಗುಂಪಿನ ಈ ಪಂದ್ಯದ 30ನೇ ನಿಮಿಷ ಗನ್‌ಥಿ ವಾನ್ ಸು ವಿಯೆಟ್ನಾಮ್ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಸಬ್‌ಸ್ಟಿಟ್ಯೂಟ್ ಆಗಿ ಕಣಕ್ಕಿಳಿದ ಸನ್ಫಿದಾ ನೊಂಗ್ರುಮ್ ಅವರು 65ನೇ ನಿಮಿಷ ಭಾರತ ತಂಡ ಸಮ ಮಾಡಿಕೊಳ್ಳಲು ನೆರವಾದರು. ಈ ಪಂದ್ಯ ಸನ್ಫಿದಾ ಅವರಿಗೆ ಪದಾರ್ಪಣೆಯದ್ದಾಗಿತ್ತು.

ಭಾರತ ನಂತರ ಉತ್ತಮವಾಗಿಯೇ ಆಡಿತು. ತನಗಿಂತ ಮೇಲಿನ ಕ್ರಮಾಂಕದ ವಿಯೆಟ್ನಾಂ ಜೊತೆ ಪಾಯಿಂಟ್ ಹಂಚಿಕೊಳ್ಳುವಂತೆ ಕಂಡಿತ್ತು. ಆದರೆ 90 + 4ನೇ ನಿಮಿಷ ಗನ್‌ಥಿ ವಾನ್ ಸು ಅವರು ತಮ್ಮ ಎರಡನೇ ಹಾಗೂ ಪಂದ್ಯದ ನಿರ್ಣಾಯಕ ಗೋಲು ಗಳಿಸಿದರು.

ಇಂಜುರಿ ಸ್ಟಾಪೇಜ್‌ನ ಏಳು ನಿಮಿಷಗಳ ಅವಧಿಯ ಮೂರನೇ ನಿಮಿಷವೇ ವಿಯೆಟ್ನಾಂ ಗೋಲು ಗಳಿಸಿದ್ದು, ತಂಡಕ್ಕೆ ಹತಾಶೆ ಉಂಟುಮಾಡಿತು. ಹೊಸ ಕೋಚ್, ಕೊಸ್ಟರಿಕಾದ ಅಮೇಲಿಯಾ ವಲ್ವೆರ್ಡೆ ಮಾರ್ಗದರ್ಶನದಡಿ ಭಾರತ ಮೊದಲ ಸಲ ಕಣಕ್ಕಿಳಿದಿತ್ತು.

ನಿರೀಕ್ಷೆಯಂತೆ ವಿಯೆಟ್ನಾಮ್ ತಂಡ ಈ ಪಂದ್ಯದಲ್ಲಿ ಬಹುಪಾಲು ಮೇಲುಗೈ ಸಾಧಿಸಿತು. ಆದರೆ ಈ ಸೋಲು 'ಬ್ಲೂ ಟೈಗ್ರೆಸ್' ತಂಡದ ವಿಶ್ವಾಸ ಕುಗ್ಗಿಸುವ ಮಟ್ಟದಲ್ಲೇನೂ ಇರಲಿಲ್ಲ. ಫಿಫಾ ವಿಶ್ವ ಕ್ರಮಾಂಕದಲ್ಲಿ ಭಾರತ ತಂಡ 67ನೇ ಸ್ಥಾನದಲ್ಲಿದ್ದರೆ, ವಿಯೆಟ್ನಾಂ 36ನೇ ಸ್ಥಾನದಲ್ಲಿದೆ.

ವಿಯೆಟ್ನಾಂ 2023ರ ಫಿಫಾ ಮಹಿಳಾ ವಿಶ್ವಕಪ್‌ನಲ್ಲಿ ಆಡಿತ್ತು. ಮಾತ್ರವಲ್ಲ, 2022ರ ಏಷ್ಯನ್ ಕಪ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ್ದು ಈ ಪಂದ್ಯದಲ್ಲೂ ಫೇವರಿಟ್ ಆಗಿತ್ತು. ಜೊತೆಗೆ ನಾಲ್ಕು ತಿಂಗಳಲ್ಲಿ ಭಾರತ ಯಾವುದೇ ಅಂತರರಾಷ್ಟ್ರೀಯ ಪಂದ್ಯಗಳ ಅಭ್ಯಾಸವಿಲ್ಲದೇ ಕಣಕ್ಕಿಳಿದಿತ್ತು.

ಭಾರತ ತಂಡದ ಗೋಲ್‌ಕೀಪರ್ ಪಂಥೊಯಿ ಚಾನು ಅವರ ಪ್ರದರ್ಶನ ಅಮೋಘವಾಗಿತ್ತು. ಅವರು ಎದುರಾಳಿ ತಂಡದ ಕನಿಷ್ಠ ಐದು ಗೋಲುಗಳಿಗೆ ತಡೆಗೋಡೆಯಾದರು. ಮುನ್ಪಡೆ ಆಟಗಾರ್ತಿ ಮನಿಷಾ ಕಲ್ಯಾಣ್ ಗೋಲು ಗಳಿಸದಿದ್ದರೂ, ಉತ್ತಮವಾಗಿಯೇ ಆಡಿದರು. ಭಾರತ ಮಾರ್ಚ್ 7ರಂದು ಜಪಾನ್ ತಂಡವನ್ನು ಎದುರಿಸಲಿದೆ. 10ರಂದು ಸಿಡ್ನಿಯಲ್ಲಿ ನಡೆಯುವ ಗುಂಪಿನ ಕೊನೆಯ ಪಂದ್ಯದಲ್ಲಿ ತೈವಾನ್ ವಿರುದ್ಧ ಆಡಲಿದೆ.

ಜಪಾನ್‌ಗೆ ಜಯ: ಇದಕ್ಕೆ ಮೊದಲು ನಡೆದ ಸಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಜಪಾನ್ ತಂಡ 2–0 ಗೋಲುಗಳಿಂದ ತೈವಾನ್ ತಂಡವನ್ನು ಸೋಲಿಸಿತು.

ಎಂ.ಎಸ್.ರಾಮಯ್ಯ ಕ್ರಿಕೆಟ್ ಟೂರ್ನಿ: ಫೈನಲ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಎಸ್.ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಎಸ್‌ಆರ್‌ಐಟಿ –ಎ) ಹಾಗೂ ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು (ಡಿಎಸ್‌ಸಿಇ) ತಂಡಗಳು ಎಂ.ಎಸ್.ರಾಮಯ್ಯ ಸ್ಮರಣಾರ್ಥ 25ನೇ ರಾಜ್ಯ ಮಟ್ಟದ ಎಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ ಫೈನಲ್ ಪ್ರವೇಶಿಸಿದವು.

ಬುಧವಾರ ನಡೆದ ಲೀಗ್ ಪಂದ್ಯಗಳಲ್ಲಿ ಎಂಎಸ್‌ಆರ್‌ಐಟಿ –ಎ ತಂಡವು 48 ರನ್‌ಗಳಿಂದ ಎಂಎಸ್‌ಆರ್‌ಐಟಿ –ಬಿ ತಂಡವನ್ನು ಮಣಿಸಿದರೆ, ಡಿಎಸ್‌ಸಿಇ ತಂಡವು 77 ರನ್‌ಗಳಿಂದ ಆರ್.ವಿ. ಎಂಜಿನಿಯರಿಂಗ್ ಕಾಲೇಜು ತಂಡವನ್ನು ಸೋಲಿಸಿತು.

ನಗರದ ಬಿಇಎಲ್ ಮೈದಾನದಲ್ಲಿ ಗುರುವಾರ ಪ್ರಶಸ್ತಿ ಸುತ್ತಿನ ಪಂದ್ಯ ನಡೆಯಲಿದೆ.

ಸಾತ್ವಿಕ್–ಚಿರಾಗ್ ಜೋಡಿ ನಿರ್ಗಮನ



ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ನಾಲ್ಕನೇ ಶ್ರೇಯಾಂಕದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್ ಮೊದಲ ಸುತ್ತಿನಲ್ಲೇ ಮಲೇಷ್ಯಾದ ಜೋಡಿ ಎದುರು ಸೋಲನುಭವಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಮಲೇಷ್ಯಾದ ಆ್ಯರನ್ ತೈ ಹಾಗೂ ಖಾಯ್ ಷಿಂಗ್ ಕಾಂಗ್ ಜೋಡಿ 23–21, 21–12 ರಿಂದ ನೇರ ಗೇಮ್‌ಗಳಿಂದ ಭಾರತದ ಸಾತ್ವಿಕ್–ಚಿರಾಗ್ ಜೋಡಿಯನ್ನು 42 ನಿಮಿಷಗಳಲ್ಲಿ ಮಣಿಸಿತು.

ಭಾರತದ ಜೋಡಿ ಮೊದಲ ಗೇಮ್‌ಅನ್ನು ಉತ್ತಮ ರೀತಿಯಲ್ಲೇ ಆರಂಭಿಸಿತು. ಚುರುಕಿನ ಚಲನೆ, ಆಕ್ರಮಣಕಾರಿ ಆಟದಿಂದ 11–6 ಮುನ್ನಡೆ ಸಾಧಿಸಿತು. ಈ ವೇಳೆ ಮಲೇಷ್ಯಾ ಜೋಡಿ ರಕ್ಷಣಾತ್ಮಕ ಆಟಕ್ಕೇ ಮುಂದಾಗಬೇಕಾಯಿತು. ಆದರೆ ಆರನ್–ಖಾಯ್ ಜೋಡಿ ಛಲಬಿಡಲಿಲ್ಲ. ಕ್ರಮೇಣ ಈ ಅಂತರ ಕಡಿಮೆ ಮಾಡಿದರು. ಮೊದಲ ಸಲ 16–16 ರಲ್ಲಿ ಸಮಮಾಡಿಕೊಂಡಿತು. ತೀವ್ರ ಹೋರಾಟದ ಗೇಮ್‌ನ ನಿರ್ಣಾಯಕ ಹಂತದಲ್ಲಿ ಮುನ್ನಡೆ ಪಡೆದರು. 23–21ರಲ್ಲಿ ಗೇಮ್ ತಮ್ಮದಾಗಿಸಿಕೊಂಡರು.

ಎರಡನೇ ಗೇಮ್‌ನಲ್ಲಿ ಮಲೇಷ್ಯಾದ ಆಟಗಾರರು ಹಿಡಿತ ಸಾಧಿಸಿದರು. ಕನ್ನಡಿಗ ಆಯುಷ್ ಶೆಟ್ಟಿ 21–19, 9–21, 17–21ರಿಂದ ಅಲ್ವಿ ಫರ್ಹಾನ್ (ಇಂಡೊನೇಷ್ಯಾ) ಎದುರು ಪರಾಭವಗೊಂಡರು.